# ಪರಿಚಯ

ಅನೇಕ ಜನರು ಪ್ರಕಟನೆ ಪುಸ್ತಕದ ಬಗ್ಗೆ “ಚಿಂತೆಯನ್ನೇ ಮಾಡುವದಿಲ್ಲ.” ಪ್ರಕಟನೆ ಪುಸ್ತಕವು “ಹೊಸ ಒಡಂಬಡಿಕೆಯಲ್ಲಿಯ ಎಲ್ಲಾ ಪುಸ್ತಕಗಳಲ್ಲಿಯೇ ಅತ್ಯಂತ ಕಡಿಮೆಯಾಗಿ ಓದಲ್ಪಡುವ ಪುಸ್ತಕ” ಎಂಬ ಮನವರಿಕೆಯು Frank Packನಿಗೆ ಆಗಿರುತ್ತದೆ.[1] ಪ್ರಕಟನೆ ಪುಸ್ತಕವು ಏಕೆ ಕ್ರೈಸ್ತರ ಮಧ್ಯದಲ್ಲಿ ಅಷ್ಟೊಂದು ಅಚ್ಚುಮೆಚ್ಚಿನದ್ದಾಗಿರುವದಿಲ್ಲ ಎಂಬುದಕ್ಕೆ ಹಲವಾರು ಕಾರಣಗಳನ್ನು ಕೊಡಬಹುದಾಗಿದೆ.

1. ಜನರು ಅದರಿಂದ ಗೊಂದಲಕ್ಕೊಳಗಾಗಿರುತ್ತಾರೆ. ಹೊಸ ಒಡಂಬಡಿಕೆಯಲ್ಲಿರುವ ಇತರ ಪುಸ್ತಕಗಳಂತಲ್ಲದೆ, ಇದರ ಬಹುಪಾಲು ಬೋಧನೆಗಳು ವಾಚಕನು ಎತ್ತಿಕೊಂಡು ಬಳಸಿಕೊಳ್ಳುವಂತೆ ಮೇಲ್ಭಾಗದಲ್ಲಿಯೇ ಇರುವಂಥವುಗಳಾಗಿರುವದಿಲ್ಲ. ಹಾಗೆಂದ ಮಾತ್ರಕ್ಕೆ ಹೊಸ ಒಡಂಬಡಿಕೆಯಲ್ಲಿರುವ ಇತರ ಎಲ್ಲಾ ಪುಸ್ತಕಗಳು ಅರ್ಥಮಾಡಿಕೊಳ್ಳುವದಕ್ಕೆ ಸುಲಭವಾಗಿರುತ್ತವೆ ಎಂದರ್ಥವಲ್ಲ. ಹೇಗೂ, ಪ್ರಕಟನೆ ಪುಸ್ತಕವನ್ನು ಹೊರತು ಪಡಿಸಿ ಬಹುಪಾಲು ಪುಸ್ತಕಗಳಲ್ಲಿ, ಮುಖ್ಯವಾದ ಸಂದೇಶಗಳು ಸ್ಪಷ್ಟ, ಸರಳ ಭಾಷೆಯಲ್ಲಿ ಕೊಡಲ್ಪಟ್ಟಿದ್ದರೆ, ಪ್ರಕಟನೆ ಪುಸ್ತಕವು ಅಪರಿಚಿತವಾದ ಪದಗಳಿಂದ ಹಾಗೂ ಚಿತ್ರಣಗಳಿಂದ ತುಂಬಿರುತ್ತದೆ. ಪ್ರಕಟನೆ ಪುಸ್ತಕವು ಒಂದು *ವಿಚಿತ್ರ* ಪುಸ್ತಕವಾಗಿದೆ.

2. ಕೆಲವರು ಅದರಿಂದ ಹಿಮ್ಮೆಟ್ಟಿಸಲ್ಪಡುತ್ತಾರೆ. ಭಾವೋದ್ರೇಕಗೊಳಿಸುವವರಿಗೆ ಆಟದ ಮೈದಾನ ಹಾಗೂ ಅತೃಪ್ತರು ಮತ್ತು ಉನ್ಮತ್ತರಾದವರಿಗೆ ಯುದ್ಧ ಯೋಜನೆಯಂತಾಗಿರುತ್ತದೆ. ಟಿವಿ ಸುವಾರ್ತಿಕರು ಸ್ವಲ್ಪವೂ ಸಂಕೋಚವಿಲ್ಲದೆ ಇದರ ಪ್ರವಾದನೆಗಳು ಹೇಗೆ ಇತ್ತೀಚಿನ ಪ್ರಮುಖ ಸುದ್ದಿಗಳನ್ನು ಮುಂತಿಳಿಸುತ್ತವೆಂದು ಘೋಷಿಸುತ್ತಾರೆ. ವಿಲಕ್ಷಣವಾಗಿರುವ ಧಾರ್ಮಿಕ ನಾಯಕರು ಪ್ರಕಟನೆ ಪುಸ್ತಕದಿಂದ ವಾಕ್ಯಭಾಗಗಳನ್ನು ಬಡಬಡನೆ ಭಾಷಣ ಮಾಡುತ್ತಾರೆ, ಮತ್ತು ಅದರಲ್ಲಿನ ಯುದ್ಧಕ್ಕೆ ಸಂಬಂಧಿಸಿದ ವಚನಗಳು ಅವರ ಯುದ್ಧದ ಕೂಗುಗಳಾಗುತ್ತವೆ. ಅನೇಕರು ಈ ನೆಪಗಳಿಂದ ಜಿಗುಪ್ಸೆಗೊಳ್ಳುತ್ತಾರೆ.

3. ಬಹಳಷ್ಟು ಜನರು ಇದರಿಂದ ಭಯಗೊಂಡವರಾಗುತ್ತಾರೆ. ಸೊಲೊಮೋನನು ಈ “. . . ಬಹಳ ಪುಸ್ತಕಗಳನ್ನು ಮಾಡುವದಕ್ಕೆ ಅಂತ್ಯ ವಿಲ್ಲ” (ಪ್ರಸಂಗಿ 12:12; KJV) ಎಂದು ಬರೆದಾಗ, ಆತನು ಪ್ರಕಟನೆ ಪುಸ್ತಕದ ಕುರಿತು ವ್ಯಾಖ್ಯೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದನೋ? ವ್ಯಾಪಕ ಮಟ್ಟದ ವ್ಯಾಖ್ಯಾನಕಾರರು “ನೀವು ಏನೆಲ್ಲಾ ಬಯಸುತ್ತಿರೋ ಅದನ್ನೆಲ್ಲಾ ಹೇಳುವಂತೆ ಪ್ರಕಟನೆ ಪುಸ್ತಕವನ್ನು ಮಾಡಬಹುದಾಗಿದೆ” ಮತ್ತು ಈ ಪುಸ್ತಕದ ನಿಜವಾದ ಸಂದೇಶವನ್ನು ಅರ್ಥಮಾಡಿಕೊಳ್ಳುವದು ಮೂಲಭೂತವಾಗಿ ಅಸಾಧ್ಯವಾದದ್ದು ಎಂಬ ಮನವರಿಕೆ ಹೊಂದಿರುತ್ತಾರೆ.

ಅನೇಕರು ಪ್ರಕಟನೆ ಪುಸ್ತಕ ಓದುವದರಿಂದ ದೂರವಿರುತ್ತಾರಾದರೂ, ಸಂದೇಶಕ್ಕಿಂತಲೂ ಅದರ ಕೆಲವೇ ಕೆಲವು ಯೋಚನೆಗಳು ಹೆಚ್ಚು ಆದರಣೆಯುಂಟು ಮಾಡುತ್ತವೆ: *ನಾವು ದೇವರೊಂದಿಗೆ ಉಳಿದುಕೊಳ್ಳುವದಾದರೆ, ನಮ್ಮ ಜಯವು ಖಚಿತವಾಗಿರುತ್ತದೆ!* ಈ ವ್ಯಾಖ್ಯಾನ ಪುಸ್ತಕವು ಪ್ರಕಟನೆ ಪುಸ್ತಕ ಮೂಲಕವಾಗಿ ಒಂದು

ರೋಮಾಂಚನವುಂಟು ಮಾಡುವ ಪ್ರಯಾಣವನ್ನು ಮಾಡಲಿದೆ. ಇದು ಪುಸ್ತಕವನ್ನು ಅಧ್ಯಯನ ಮಾಡುವದನ್ನು ಅರ್ಥವಾಗುವಂತಹ ಹಾಗೂ ಆನಂದಿಸುವಂತಹದ್ದಾಗಿ ಮಾಡುವ ಒಂದು ತಾರ್ಕಿಕವಾದ ಹಾಗೂ ಅರ್ಥವುಳ್ಳ ದಾರಿಯನ್ನು ತೋರಿಸಿ ಕೊಡುವದು.

ಈ ವ್ಯಾಖ್ಯಾನ ಪುಸ್ತಕವು ಪ್ರಕಟನೆ ಪುಸ್ತಕದಲ್ಲಿನ ಪ್ರತಿಯೊಂದು ಪ್ರಶ್ನೆಗೂ ಉತ್ತರಿಸುವದಿಲ್ಲ. ಪ್ರಕಟನೆ ಪುಸ್ತಕದ ಅಧ್ಯಯನವನ್ನು ಆನಂದಿಸುವದರಲ್ಲಿ ಒಂದು ಭಾಗವೆಂದರೆ ಪವಿತ್ರಾತ್ಮನು ತಾನು ಬಳಸಿದ ಸಾಂಕೇತಿಕ ಚಿತ್ರಗಳನ್ನು *ಏಕೆ* ಬಳಿಸಿದನು ಎಂಬುದನ್ನು ಕಂಡುಕೊಳ್ಳುವದಕ್ಕೆ ಪ್ರಯತ್ನಿಸುವಾಗಿದೆ, ಹೀಗೆ ಲೇಖಕನು *ಯೋಚಿಸುವ* ಯಾವದು ಮಹತ್ವಪೂರ್ಣವಾದದ್ದೆಂಬುದನ್ನು ವಾಕ್ಯಭಾಗವು ತಿಳಿಸುವದಾಗಿರುತ್ತದೆ. ವಿವರಗಳ ವಿಷಯದ ಮೇಲೆ ಆತನು ಮಾಡುವ ಅಂತಿಮ ನಿರ್ಣಯಗಳಿಗೆ ಒಬ್ಬನು ಸಮ್ಮತಿ ಅಥವಾ ಅಸಮ್ಮತಿ ವ್ಯಕ್ತಪಡಿಸಿದರೂ ಅದು ಅಷ್ಟಾಗಿ ಪ್ರಾಮುಖ್ಯವಾಗುವದಿಲ್ಲ. ಪ್ರಕಟನೆ ಪುಸ್ತಕದ ಮಹತ್ವಪೂರ್ಣತೆಯು ಪ್ರತಿಯೊಂದು "ಕೂದಲು ಹಾಗೂ ಗುಳ್ಳೆಯ" ಮಹತ್ವಪೂರ್ಣತೆಯಲ್ಲಿ ಅಲ್ಲ, ಆದರೆ ದಾಖಲಿಸಲ್ಪಟ್ಟಿರುವ ದರ್ಶನಗಳ ಒಟ್ಟಾರೆಯಾದ ಪರಿಣಾಮದಲ್ಲಿ ಇರುತ್ತದೆ. Pack ಬರೆದಿರುವ ಪ್ರಕಾರ, ". . . [ಪ್ರಕಟನೆ ಪುಸ್ತಕದ] ಮಹಾನ್ ಪ್ರಮುಖ ಪಾಠಗಳನ್ನು ಮಿಕ್ಕ ಎಲ್ಲಾ ವಿವರಗಳು ಅರ್ಥವಾಗದಿದ್ದಾಗ್ಯೂ ಗ್ರಹಿಸಿಕೊಳ್ಳಬಲ್ಲವುಗಳಾಗಿವೆ . . ."[2]

ಪ್ರಕಟನೆ ಅರ್ಥನಿರೂಪಣೆಯ ವಿಷಯವಾಗಿ, ನಾವು ಕೇವಲ ಎರಡು ಕಾರ್ಯಗಳಲ್ಲಿ ಮಾತ್ರವೇ ಖಚಿತವಾಗಿರಬಲ್ಲೆವು: (1) ವಾಕ್ಯಭಾಗವು ಸ್ವತಃ ಒಂದು ಸರಳವಾದ ಹಾಗೂ ಸ್ಪಷ್ಟವಾದ ವಿವರಣೆಯೊಂದನ್ನು ನೀಡುವದಾದರೆ, ಆ ಅರ್ಥನಿರೂಪಣೆಯ ವಿಷಯದಲ್ಲಿ ನಾವು ಭರವಸವನ್ನು ಹೊಂದಿರಬಹುದಾಗಿದೆ. ಉದಾಹರಣೆಗೆ, ಯೇಸುವು "ಏಳು ದೀಪಸ್ತಂಭಗಳು [1:12] ಅಂದರೆ ಆ ಏಳು ಸಭೆಗಳು" (1:20) ಎಂಬದಾಗಿ ಹೇಳಿದನಾದ್ದರಿಂದ, 1:12ರಲ್ಲಿರುವ ದೀಪಸ್ತಂಭಗಳ ಸಂಕೇತಕ್ಕೆ ಬೇರೊಂದು ಅರ್ಥವಿರುತ್ತದೆಂದು ಯಾವನೊಬ್ಬನೂ ಹೇಳುವದಕ್ಕಾಗುವದಿಲ್ಲ. (2) ಒಬ್ಬನು ಪ್ರಕಟನೆ ಪುಸ್ತಕದಲ್ಲಿನ ವಾಕ್ಯಭಾಗವೊಂದನ್ನು ಬೈಬಲಿನಲ್ಲಿ ಬೇರೊಂದು ಕಡೆಯಲ್ಲಿರುವ ಸರಳ ಉಪದೇಶಕ್ಕೆ ತದ್ವಿರುದ್ಧವಾಗುವಂತೆ ಅರ್ಥನಿರೂಪಣೆ ಮಾಡುವದಾದರೆ, "ಆ ಅರ್ಥನಿರೂಪಣೆಯು ತಪ್ಪು!" ಎಂದು ನಾವು ಭರವಸದಿಂದ ಮತ್ತು ಖಡಾಖಂಡಿತವಾಗಿ ಹೇಳಬಲ್ಲೆವು. ಅದನ್ನು ಹೊರತು ಪಡಿಸಿ ಬೇರೆ ಇನ್ನೇನಾದರೂ ಹೇಳುವದಕ್ಕೆ ಮುಂಚೆ ಕ್ರೈಸ್ತೀಯ ಕಾರುಣ್ಯವನ್ನು ಬಳಸಬೇಕು. "ಯಾವನು ತನ್ನ ನೆಚ್ಚಿನ ಊಹನೆಯನ್ನು ಇಟ್ಟುಕೊಂಡಿಲ್ಲವೋ ಆತನು ಮೊದಲ ಕಲ್ಲನ್ನು ಎಸೆಯಲಿ!"[3]

ಒಬ್ಬ ವ್ಯಕ್ತಿಯು ಪರಲೋಕಕ್ಕೆ ಹೋಗಬೇಕೆಂದರೆ ಬಹುಶಃ ಪ್ರಕಟನೆ ಪುಸ್ತಕವನ್ನು ತಿಳಿದಿರಬೇಕಾದ ಮತ್ತು ಅರ್ಥಮಾಡಿಕೊಂಡಿರಬೇಕಾದ ಅಗತ್ಯವಿರುವದಿಲ್ಲ. ಹೇಗೂ ಈ ಪುಸ್ತಕವನ್ನು ಒಬ್ಬನು ನಿರ್ಲಕ್ಷ್ಯ ಮಾಡುವದಾದರೆ . . .

. . . ಆತನು ಯೇಸುವಿನಿಂದ ವಾಗ್ದಾನ ಮಾಡಲ್ಪಟ್ಟಿರುವ ಆಶೀರ್ವಾದವನ್ನು ತಪ್ಪಿಸಿಕೊಳ್ಳುವನು (1:3).

. . . ಆತನು ಯೇಸುವಿನ ಕುರಿತು ಇನ್ನಷ್ಟು ಕಲಿತುಕೊಳ್ಳುವ ಸದವಕಾಶವನ್ನು ತಪ್ಪಿಸಿಕೊಳ್ಳುವನು. (ಪುಸ್ತಕ ಪ್ರತಿಯೊಂದು ವಿಭಾಗದಲ್ಲಿಯೂ ಕ್ರಿಸ್ತನೇ ಕೇಂದ್ರಬಿಂದುವಾಗಿದ್ದಾನೆ.)

. . . ಆತನು ಬೈಬಲಿನ ಪರಾಕಾಷ್ಠೆಯನ್ನು ತಪ್ಪಿಸಿಕೊಳ್ಳುವನು. (ಮಿಕ್ಕ ಅರವತ್ತೈದು ಪುಸ್ತಕಗಳೆಲ್ಲಾ ಈ ಪುಸ್ತಕದ ತನಕ ನಡಿಸುತ್ತವೆ.)

. . . ಆತನು ಜೀವನವನ್ನು ಅರ್ಥವುಳ್ಳದ್ದೆಂದು ಸ್ಪಷ್ಟಗೊಳಿಸುವ ಉಪದೇಶವನ್ನು

ತಪ್ಪಿಸಿಕೊಳ್ಳುವನು. (ಕಾಣಿಸುವಂಥವುಗಳು ತದ್ವಿರುದ್ಧವೆಂಬಂತೆ ತೋರಬಹುದಾದರೂ, ಈಗಲೂ ನಿಯಂತ್ರವು ದೇವರ ಕೈಯಲ್ಲಿಯೇ ಇರುತ್ತದೆ.)

. . . ಆತನು ತನಗೆ ಕಷ್ಟದ ಸಮಯಗಳಲ್ಲಿ ಬದುಕುಳಿಯುವಂತೆ ಸಹಾಯ ಮಾಡಬಲ್ಲ ಪ್ರೋತ್ಸಾಹವನ್ನು ತಪ್ಪಿಸಿಕೊಳ್ಳುವನು. (ದೇವರು ಸಕಲವು ಸರಿಯಾಗಿಯೇ ಹೊರಹೊಮ್ಮುವಂತೆ ಮಾಡುವನು.)

. . . ಆತನು ಇಂದು ಪ್ರಕಟನೆ ಪುಸ್ತಕದ ವಿಷಯವಾಗಿ ಸಮೃದ್ಧವಾಗಿರುವ ಲಂಗುಲಗಾಮು ಇಲ್ಲದೆ ಊಹಾಪೋಹಗಳ ಕೆಸರಿನಲ್ಲಿ ಕೊಳೆಯಾಗಿರುವರಿಗೆ ಸಹಾಯ ಮಾಡುವದಕ್ಕೆ ಅಸಮರ್ಥನಾಗಿಯೇ ಉಳಿದು ಬಿಡುವನು.

. . . ಆತನು ಸಹ ತನ್ನನ್ನು ಊಹಾಪೋಹಗಳ-ಸಭೆಗೆ ಅಡಚಣೆಯನ್ನುಂಟು ಮಾಡಬಲ್ಲ, ಕ್ರೈಸ್ತರಿಗೆ ಬಿದ್ದು ಹೋಗುವಂತೆ ಕಾರಣವಾಗಿರುವ ಊಹಾಪೋಹಗಳ-ಬಲೆಗೆ ಬೀಳಬಹುದಾದ ಸಾಧ್ಯತೆಗೆ ಒಳಪಡಿಸಿಕೊಳ್ಳುವನು.

ಒಬ್ಬನು ಈ ಪುಸ್ತಕದಿಂದ ಅಂಜಿಕೆಗೆ ಒಳಗಾಗಬಾರದು. Earl Palmer ಹೇಳಿದ್ದೇನೆಂದರೆ ಪ್ರಕಟನೆ ಪುಸ್ತಕವು "ಅರ್ಥಮಾಡಿಕೊಳ್ಳುವದಕ್ಕೆ ಕಠಿಣವಾಗಿರುವ ಪುಸ್ತಕ ಮಾತ್ರವೇ ಆಗಿರುವದಿಲ್ಲ; ಅದು ಕೈಯಿಂದ ಕೆಳಕ್ಕೆ ಇಡುವದಕ್ಕೆ ಸಹ ಕಠಿಣ ಅನ್ನಿಸುವ ಪುಸ್ತಕವಾಗಿದೆ."[4] ಒಬ್ಬ ವ್ಯಕ್ತಿಯು ಇದನ್ನು ಅರ್ಥಮಾಡಿಕೊಳ್ಳುವದಕ್ಕೆ ಶ್ರಮ ತೆಗೆದುಕೊಳ್ಳುವದಾದರೆ ಇದು ಆತನ ಜೀವಿತಕ್ಕೆ ಆಶೀರ್ವಾದವಾಗಬಲ್ಲದು. ಪ್ರಕಟನೆ ಪುಸ್ತಕವು ತನ್ನ ಬಳಿಗೆ ಅರ್ಧಮನಸ್ಸಿನಿಂದ ಬರುವವರಿಗೆ ತನ್ನ ನಿಕ್ಷೇಪಗಳನ್ನು ಒಪ್ಪಿಸಿ ಕೊಡುವದಿಲ್ಲ.

## ಹಿನ್ನಲೆಯ ವಿವಾದಾಂಶಗಳು

### ಲೇಖಕ

KJVಯ ಕೆಲವೊಂದು ಆವೃತ್ತಿಗಳಲ್ಲಿ, ಈ ಪುಸ್ತಕಕ್ಕೆ ಕೊಡಲ್ಪಟ್ಟಿರುವ ಶಿರ್ಷೀಕೆಯು "ಸಂತ. ದೈವಿಕನಾದ ಯೋಹಾನನ ಪ್ರಕಟನೆ" ಎಂದಾಗಿರುತ್ತದೆ. ಹೇಗೂ, ಪುಸ್ತಕದ ಪ್ರಥಮ ಮಾತುಗಳು ನಮಗೆ ಹೇಳುವದೇನೆಂದರೆ ಸಂಪುಟವು ಯೋಹಾನನ ಪ್ರಕಟನೆ ಅಲ್ಲ, ಆದರೆ ಬದಲಾಗಿ "ಯೇಸು ಕ್ರಿಸ್ತನ ಪ್ರಕಟನೆ" ಆಗಿದೆ ಎಂಬದೆ. ಯೋಹಾನನು ಕೇವಲ ಯೇಸುವಿನ ಸಾಕ್ಷಿ ಮತ್ತು ಕಾರ್ಯದರ್ಶಿ ಆಗಿದ್ದನು: "ಇದಲ್ಲದೆ ಆತನು [ಯೇಸು] ತನ್ನ ದೂತನನ್ನು ಕಳುಹಿಸಿ ಅವನ ಮೂಲಕ ಆ ಸಂಗತಿಗಳನ್ನು ತನ್ನ ದಾಸನಾದ ಯೋಹಾನನಿಗೆ ಸೂಚಿಸಿದನು. ಯೋಹಾನನು ತಾನು ಕಂಡದ್ದನ್ನೆಲ್ಲಾ ತಿಳಿಸುವವನಾಗಿ . . . ಯೇಸು ಕ್ರಿಸ್ತನು ಹೇಳಿದ ಸಾಕ್ಷಿಯ ವಿಷಯವಾಗಿಯೂ ಸಾಕ್ಷಿ ಕೊಟ್ಟನು" (1:1, 2).

ಪ್ರಕಟನೆ ಪುಸ್ತಕವನ್ನು ಬರೆದವನು ಬಹುಶಃ ಅಪೊಸ್ತಲನಾದ ಯೋಹಾನನು. ಆತನು ತನ್ನನ್ನು ಯೇಸುವಿನ "ದಾಸನಾದ ಯೋಹಾನನು" ಎಂದು ಪರಿಚಯಿಸಿಕೊಂಡನು (1:1). ಆತನು ಬಹಳ ಪರಿಚಿತನಾಗಿದ್ದರಿಂದ ತಾನು ಕೇವಲ ತನ್ನನ್ನು "ಯೋಹಾನ" ಎಂದು ಹೇಳಿಕೊಂಡರೆ ಎಲ್ಲರಿಗೂ ತಿಳಿದು ಬರುವದೆಂದು ಆತನು ಭಾವಿಸಿಕೊಂಡನು. ಹೊಸ ಒಡಂಬಡಿಕೆಯಲ್ಲಿ ಅತ್ಯಂಥ ಪ್ರಖ್ಯಾತನಾಗಿದ್ದ ಏಕೈಕ ಯೋಹಾನನೆಂದರೆ ಅಪೊಸ್ತಲನಾದ ಯೋಹಾನನೇ ಆಗಿದ್ದನು. ಈಗ ಇರುವ ಪ್ರಕಾರವೇ ಯೋಹಾನ ಎಂಬ ಹೆಸರು ಆ ಕಾಲದಲ್ಲಿ ಸರ್ವಸಾಧಾರಣವಾಗಿರುತ್ತಿದ್ದ ಹೆಸರಾಗಿತ್ತು, ಆದರೆ ಹೊಸ ಒಡಂಬಡಿಕೆಯಲ್ಲಿ ಇಬ್ಬರು ಕ್ರೈಸ್ತ ಯೋಹಾನರ ಹೆಸರುಗಳನ್ನು ಮಾತ್ರವೇ ಪ್ರಸ್ತಾಪಿಸಲಾಗಿರುತ್ತದೆ: ಅಪೊಸ್ತಲನಾದ ಯೋಹಾನ (ಮೊದಲು ಮತ್ತಾಯ 4:21ರಲ್ಲಿ ಹೆಸರಿಸಲ್ಪಟ್ಟಿದ್ದಾನೆ) ಮತ್ತು ಯೋಹಾನನೆನಿಸಿಕೊಳ್ಳುವ

ಮಾರ್ಕನು (ಅಪೊಸ್ತಲರ ಕೃತ್ಯಗಳು 12:12).

ಸಭೆಯ ಅತ್ಯಂಥ ಆರಂಭಿಕ ದಿನಗಳಿಂದ, ಪ್ರಕಟನೆಯ ಪುಸ್ತಕವು ಯೋಹಾನನಿಂದ ಬರೆಯಲ್ಪಟ್ಟದ್ದೆಂದು ಹೇಳಲಾಗಿರುತ್ತದೆ. ಆತನನ್ನು ಲೇಖಕನೆಂದು ಪ್ರಸ್ತಾಪಿಸಿದ ಆದಿ ಬರಹಗಾರರಲ್ಲಿ Papias (c. ಕ್ರಿ.ಶ. 135), Justin Martyr (c. ಕ್ರಿ.ಶ. 150), ಮತ್ತು Irenaeus (c. ಕ್ರಿ.ಶ. 185) ಸೇರಿದ್ದಾರೆ. ಈ ಆದಿ ಲೇಖಕರ ಪ್ರಕಾರವಾಗಿ, ಅಪೊಸ್ತಲನಾದ ಯೋಹಾನನ ಯೆರೂಸಲೇಮಿನ ನಾಶನದ ಹೊತ್ತಿನಲ್ಲಿ (ಕ್ರಿ.ಶ. 70) ಎಫೆಸಕ್ಕೆ ಸ್ಥಳಾಂತರಗೊಂಡನು ಮತ್ತು ಮುಂದಿನ ಇಪ್ಪತ್ತೈದು ವರ್ಷಗಳ ಕಾಲ ಆಸ್ಯಸೀಮೆಯಲ್ಲಿ ಒಬ್ಬ ಪ್ರಮುಖ ಕ್ರೈಸ್ತ ನಾಯಕನಾಗಿದ್ದನು. ಅಲ್ಲಿರುವ ವೇಳೆ, ಆತನು ಪತ್ಮೊಸ್ ದ್ವೀಪಕ್ಕೆ ಗಡಿಪಾರು ಮಾಡಲ್ಪಟ್ಟನು. ಅಲ್ಲಿರುವಾಗಲೇ ಆತನು ಯೇಸುವಿನಿಂದ ಪ್ರಕಟನೆಯನ್ನು ಪಡೆದುಕೊಂಡನು.

ಪ್ರಕಟನೆ ಹಾಗೂ ಅಪೊಸ್ತಲನಾದ ಯೋಹಾನನ ಇತರ ಬರಹಗಳ ನಡುವೆ ಅನೇಕ ಸಾಮ್ಯತೆಗಳನ್ನು ಕಾಣಬಹುದು. ಯೋಹಾನನು ಮಾತ್ರವೇ ಯೇಸುವನ್ನು λόγος (*logos*, "ವಾಕ್ಯ"; ಯೋಹಾನ 1:1, 14; 1 ಯೋಹಾನ 1:1; ಪ್ರಕಟನೆ 19:13) ಎಂದು ಕರೆದನು. ಯೋಹಾನನು ಯೇಸುವನ್ನು ಕರೆಯುವ ಒಂದು ಅಚ್ಚುಮೆಚ್ಚಿನ ರೀತಿಯೆಂದರೆ "ದೇವರ ಕುರಿಮರಿ" (ಯೋಹಾನ 1:29, 36); ಪ್ರಕಟನೆ ಪುಸ್ತಕವು ಯೇಸುವನ್ನು ಇಪ್ಪತ್ತೆರಡು ಸಾರಿ "ಕುರಿಮರಿ" ಎಂದು ಕರೆಯುತ್ತದೆ. ಸುವಾರ್ತೆಯ ಬರಹಗಾರರಲ್ಲಿ ಯೇಸುವಿನ ಪಕ್ಕೆಗಳಲ್ಲಿ ತಿವಿಯಲಾಯಿತು ಎಂದು ಯೋಹಾನನು ಮಾತ್ರವೇ ಪ್ರಸ್ತಾಪಿಸುತ್ತಾನೆ (ಯೋಹಾನ 19:34), ಅದು ಪ್ರಕಟನೆ ಪುಸ್ತಕದಲ್ಲಿ ಸಹ ಕೊಡಲ್ಪಟ್ಟಿರುವ ವಾಸ್ತವಾಂಶವಾಗಿದೆ (1:7). (ಬೇರೆ ಸಾಮ್ಯತೆಗಳಿಗಾಗಿ ಇವುಗಳನ್ನು ಹೋಲಿಕೆ ಮಾಡಿರಿ ಯೋಹಾನ 7:37/ಪ್ರಕಟನೆ 22:17; ಯೋಹಾನ 10:18/ಪ್ರಕಟನೆ 2:27; ಯೋಹಾನ 17:7, 8/ಪ್ರಕಟನೆ 1:1; ಯೋಹಾನ 20:12/ ಪ್ರಕಟನೆ 3:4; ಯೋಹಾನ 21:24/ಪ್ರಕಟನೆ 22:8.)

ಕೆಲವರು ಪ್ರಕಟನೆ ಪುಸ್ತಕವನ್ನು ಯೋಹಾನನು ಬರೆದನು ಎಂಬ ಅಭಿಪ್ರಾಯಕ್ಕೆ ಆಕ್ಷೇಪಣೆ ವ್ಯಕ್ತಪಡಿಸುತ್ತಾರೆ, ಅದಕ್ಕೆ ಮುಖ್ಯವಾದ ಕಾರಣವೆಂದರೆ ಆತನ ಬೇರೆ ಬರಹಗಳು ಹಾಗೂ ಪ್ರಕಟನೆ ಪುಸ್ತಕದ ನಡುವೆ ಇರುವ ಶೈಲಿಯಲ್ಲಿನ ವ್ಯತ್ಯಾಸವೇ ಆಗಿರುತ್ತದೆ. ಪ್ರಕಟನೆ ಪುಸ್ತಕದಲ್ಲಿನ ಶೈಲಿಯು ಹೆಚ್ಚು ತೊಡಕಿನಿಂದ ಕೂಡಿದೆ ಎಂದು ನಮಗೆ ಹೇಳಲಾಗಿರುತ್ತದೆ, ಮತ್ತು ಅಪೊಸ್ತಲನು ಈ ಪುಸ್ತಕವನ್ನು ಬರೆಯಲಿಲ್ಲ ಎಂಬುದಾಗಿ ವ್ಯಾಖ್ಯಾನಿಸುವದಕ್ಕೆ ಕೆಲವರು ಇದನ್ನು ಪುರಾವೆಯಾಗಿ ಬಳಸುತ್ತಾರೆ. ಹೇಗೂ, ಶೈಲಿಯಲ್ಲಿನ ವ್ಯತ್ಯಾಸಕ್ಕೆ ಬೇರೆ ವಿವರಣೆಗಳಿರಬಹುದಾಗಿದೆ:

1. ಉದಾಹರಣೆಗೆ, *ಅದಲ್ಲಿರುವ ವಿಷಯವು ವ್ಯತ್ಯಾಸವಾಗಿರುತ್ತದೆ*: ದರ್ಶನಗಳನ್ನು ಬರೆದಿಟ್ಟು ಸಂಕೇತಗಳನ್ನು ಬಣ್ಣಿಸುವದೆಂದರೆ ಯೇಸುವಿನ ಜೀವನದ ಬಗ್ಗೆ ಒಂದು ಅಧ್ಯಯನದ ಬರವಣಿಗೆಯನ್ನು ಹೊರತರುವದು ಅಥವಾ ಪತ್ರವೊಂದನ್ನು ಬರೆಯುವ ರೀತಿಯಲ್ಲಿಯೇ ಆಗಿರುವದಿಲ್ಲ.

2. ಅಲ್ಲದೆ, *ಅನುಭವವು ವ್ಯತ್ಯಾಸವಾಗಿತ್ತು*. ಪ್ರಕಟನೆ ಪುಸ್ತಕದ ಬಹಳಷ್ಟು ಭಾಗವು ಯೋಹಾನನು ದರ್ಶನವನ್ನು ಕಾಣುತ್ತಿರುವ ವೇಳೆಯೇ ಬರೆಯಲ್ಪಟ್ಟಿರುವದಾಗಿದೆ ಎಂಬುದು ಸ್ಪಷ್ಟಗೊಳ್ಳುತ್ತದೆ. ಆತನ ಭಾವನಾತ್ಮಕ ಸ್ಥಿತಿಯ ವಿಷಯವಾಗಿ, ಯೋಹಾನನು ಹೀಗೆ ಹೇಳಿದನು, "ನಾನು ಬಹಳವಾಗಿ ಅಳುತ್ತಿರಲು" (5:4). ಮನಸ್ಸು ಆ ಸ್ಥಿತಿಯಲ್ಲಿರುವದು ಯೋಹಾನನು ತನ್ನನ್ನು ವ್ಯಕ್ತಪಡಿಸಿಕೊಳ್ಳುವ ರೀತಿಯ ಮೇಲೆ ಪರಿಣಾಮ ಬೀರುವದು.

3. ಅಷ್ಟುಮಾತ್ರವಲ್ಲದೆ, ಬಹುಶಃ *ಕಾರ್ಯವಿಧಾನದಲ್ಲಿ ಒಂದು ವ್ಯತ್ಯಾಸವಿರುತ್ತದೆ.*

ಪೌಲ (ರೋಮಾ 16:22) ಮತ್ತು ಪೇತ್ರನ (1 ಪೇತ್ರ 5:12) ರೀತಿಯಲ್ಲಿಯೇ, ಯೋಹಾನನು ತನ್ನ ಸುವಾರ್ತೆಯ ಹಾಗೂ ಪತ್ರಿಕೆಗಳ ಮಾತುಗಳನ್ನು ಬೇರೆಯವರ ಕೈಯಲ್ಲಿ ಬರೆಯಿಸಿಟ್ಟಿರಬಹುದು-ಬರವಣಿಗೆ ಶೈಲಿ ಹಾಗೂ ಗ್ರೀಕ್ ಭಾಷೆಯ ಬಗ್ಗೆ ತನಗಿಂತಲೂ ಹೆಚ್ಚು ಪರಿಚಯ ಹೊಂದಿದ್ದ ವ್ಯಕ್ತಿಗಳಿಂದ ಬರೆಯಿಸಿರಬಹುದು. ಆ ರೀತಿಯಾದ ಪತ್ರ-ಬರೆಯುವವನಿಗೆ ಬಳಸಲಾಗುವ ತಾಂತ್ರಿಕ ಪದವು "ಉಕ್ತಲೇಖಕ." ಇನ್ನೊಂದೆಡೆಯಲ್ಲಿ, ಯೋಹಾನನು ಪ್ರಕಟನೆ ಪುಸ್ತಕದ ದರ್ಶನಗಳನ್ನು ತನ್ನ ಸ್ವಂತ ಕೈಯಿಂದ ಬರೆದಿರಬಹುದಾಗಿದೆ (1:11, 19; 2:1, 8, 12, 18; 3:1, 7, 14; 10:4; 14:13; 19:9; 21:5). ಕಾರ್ಯವಿಧಾನದಲ್ಲಿ ಒಂದು ವ್ಯತ್ಯಾಸವಿರುವದಾದಲ್ಲಿ, ಶೈಲಿಯು ವ್ಯತ್ಯಾಸವಾಗಿರಲಿತ್ತು. ಖಂಡಿತವಾಗಿಯೂ, ಈ ಎಲ್ಲಾ ಬರೆಯುವಿಕೆಯು ಪವಿತ್ರಾತ್ಮನ ಮಾರ್ಗದರ್ಶನದ ಅಡಿಯಲ್ಲಿ ಆಗಿತ್ತು, ಹೀಗೆ ಅಂತಿಮ ಫಲಿತಾಂಶವು ನಿಖರವಾಗಿ ದೇವರು ಬಯಸಿದಂತೆಯೇ ಆಗಿತ್ತು.

4. *ವಿನ್ಯಾಶವು ವ್ಯತ್ಯಾಸವಾಗಿತ್ತು* ಎಂಬುದನ್ನು ಸಹ ನಾವು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. ಪ್ರಕಟನೆ ಪುಸ್ತಕದ ಶೈಲಿಯು ಅಲ್ಲಲ್ಲಿ ನಾಜೂಕಿಲ್ಲದ್ದಾಗಿದೆಯಾದರೂ, ಅದು ಅಸ್ಪಷ್ಟವಾಗಿರುವದಂತೂ ವಿರಳವಾಗಿದೆ ಎಂಬುದನ್ನು ವೇದಪಂಡಿತರು ಗಮನಕ್ಕೆ ತೆಗೆದುಕೊಂಡಿರುತ್ತಾರೆ. Austin Farrer ಹೀಗೆ ವ್ಯಾಖ್ಯೆ ನೀಡುತ್ತಾನೆ, "ಆತನು ಬರೆದಿರುವದಕ್ಕೆ ಹೇಗೆ ಬರೆಯುವಂತಾದನು ಎಂದು ನಾವು ಅನೇಕ ಸಾರಿ ಚಕಿತಗೊಳ್ಳುತ್ತೇವೆ, ಆದರೆ ಆತನ ತಾತ್ಪರ್ಯವು ಏನಾಗಿತ್ತೆಂಬ ಬಗ್ಗೆ ನಾವು ಚಕಿತಗೊಳ್ಳುವದು ವಿರಳವಾಗಿರುತ್ತದೆ."[5] Leon Morrisನು ಈ ಯೋಚನೆಯನ್ನು ಒತ್ತಿ ಹೇಳುತ್ತಾನೆ:

> . . . ಯೋಹಾನನು ಆಗಾಗ್ಗೆ ವ್ಯಾಕರಣದ ನಿಯಮಗಳನ್ನು ಉಲ್ಲಂಘಿಸುವದಾದರೆ, ಬೇರೆ ಸಂದರ್ಭಗಳಲ್ಲಿ ಆತನು ಅದೇ ನಿಯಮಗಳನ್ನು ಪಾಲಿಸುತ್ತಾನೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನ ವಿಶಿಷ್ಟವಾದ ಗ್ರೀಕ್ ಒಂದು ಉದ್ದೇಶಕ್ಕಾಗಿ ಬರೆಯಲ್ಪಟ್ಟಿದೆ, ಮತ್ತು ಸರಿಯಾದ ವಿಧಗಳ ಬಗ್ಗೆ ತಿಳುವಳಿಕೆಯಿಲ್ಲದ ಕಾರಣದಿಂದಲ್ಲ ಎಂದು ತೋರುತ್ತದೆ.[6]

ಪವಿತ್ರಾತ್ಮನು ಒಂದು ಖಾತ್ರಿಯಾದ ಪರಿಣಾಮವನ್ನು ಸಾಧಿಸುವದಕ್ಕಾಗಿ ಆ ವಿಧದಲ್ಲಿ ಬರೆಯುವಂತೆ ಯೋಹಾನನಿಗೆ ಮಾರ್ಗದರ್ಶನ ನೀಡಿರಬಹುದಾಗಿದೆ. ಪ್ರೇರಿತವಾದ ಬರಹವನ್ನು ಪರಿಗಣನೆ ಮಾಡುವ ವೇಳೆಯಲ್ಲಿ ವ್ಯಾಕರಣಕ್ಕೆ ಸಂಬಂಧಿಸಿದಂತೆ "ತಪ್ಪುಗಳು" ಮತ್ತು "ದೋಷಗಳು" ವಿಷಯದಲ್ಲಿ ತೀರ್ಪುಗಳನ್ನು ಪ್ರಕಟಿಸುವದು ಸೂಕ್ತವಾದದ್ದಲ್ಲ. ವ್ಯಾಕರಣದ "ನಿಯಮಗಳು" ಮನುಷ್ಯ ನಿರ್ಮಿತವಾದವುಗಳು, ಹೊರತು ದೇವರಿಂದ ಪ್ರೇರಿತವಾದವುಗಳಲ್ಲ. ಸಂಪಾದಕರು ಹಾಗೂ ಸಂದೇಶಹವಾದಿಗಳು ಕೇವಲ ಮಾನವ ಬರಹಗಳಲ್ಲಿನ ದೋಷಗಳನ್ನು ಎತ್ತಿ ತೋರಿಸುವದಕ್ಕೆ ಮುಕ್ತರು, ಆದರೆ ಪವಿತ್ರಾತ್ಮನ ಬರಹಗಳ ವಿಷಯದಲ್ಲಿ ಆ ರೀತಿಯಾಗಿ ಮಾಡುವದಕ್ಕೆ ನಿಧಾನವಾಗಿರತಕ್ಕದ್ದು.

ಈ ಮಾತುಗಳನ್ನು ಅಪೊಸ್ತಲನಾದ ಯೋಹಾನನು ಬರೆದನೆಂಬುದನ್ನು ನಂಬುವದಕ್ಕೆ ಅನೇಕ ಕಾರಣಗಳನ್ನು ಹೊಂದಿದ್ದೇವೆ - ಮತ್ತು ಬೇರೊಬ್ಬ ಅಪರಿಚಿತ ಯೋಹಾನನೆಂಬವನು ಬರೆದನೆಂಬುದನ್ನು ನಂಬುವದಕ್ಕೆ ಯಾವ ಕಾರಣವನ್ನೂ ಹೊಂದಿರುವದಿಲ್ಲ. ಖಂಡಿತವಾಗಿಯೂ, "ಯಾವ ಯೋಹಾನನು?" ಎಂಬ ಪ್ರಶ್ನೆಗೆ ಉತ್ತರಿಸುವದು ಯೇಸುವಿನ ಸಂದೇಶದಿಂದ ನಾವು ಪ್ರಯೋಜನವನ್ನು ಪಡೆದುಕೊಳ್ಳುವ ವಿಷಯದಲ್ಲಿ ನಿರ್ಣಾಯಕವಾದದ್ದಲ್ಲ. ಇಬ್ರಿಯರಿಗೆ ಪುಸ್ತಕವನ್ನು ಯಾರು ಬರೆದರೆಂದು ನಮಗೆ ನಿಶ್ಚಯವಾಗಿ ತಿಳಿಯದು, ಆದರೆ ಅದು ಇಬ್ರಿಯರಿಗೆ ಪುಸ್ತಕದಲ್ಲಿನ ಉಪದೇಶಗಳ ಪ್ರಭಾವವನ್ನು ತಗ್ಗಿಸುವದಿಲ್ಲ.

## ದಿನಾಂಕ

ಪ್ರಕಟನೆ ಪುಸ್ತಕವು ಬಹುಶಃ ಸುಮಾರು ಕ್ರಿ.ಶ. 94-96ರಲ್ಲಿ, Domitianನ ಆಳ್ವಿಕೆಯ ವೇಳೆಯಲ್ಲಿ ಬರೆಯಲ್ಪಟ್ಟಿತು. ಈ ಪುಸ್ತಕವು ಸಭೆಯ ವಿರುದ್ಧ ತೀಕ್ಷ್ಣವಾದ ಹಿಂಸೆಯು ಸಂಭವಿಸುತ್ತಿದ್ದ ಕಾಲಾವಧಿಯಲ್ಲಿ ಬರೆಯಲ್ಪಟ್ಟಿತು (2:13; 6:9; 12:17; 13:7), ಮತ್ತು ಇದು ರೋಮನ್ ಸರ್ಕಾರದಿಂದ ಉಂಟಾದ ಹಿಂಸೆಯ ಸಂದರ್ಭದಲ್ಲಿ ಬರೆಯಲ್ಪಟ್ಟಿತು ಎಂದು ಬಹಳಷ್ಟು ಜನರು ನಂಬುತ್ತಾರೆ. ಪ್ರಥಮ ಶತಮಾನದ ಕಡೇ ಭಾಗದ ವೇಳೆ Nero ಮತ್ತು Domitian ಎಂಬ ಇಬ್ಬರು ಚಕ್ರವರ್ತಿಗಳು ಮಾತ್ರವೇ ಕ್ರೈಸ್ತರನ್ನು ವ್ಯಾಪಕವಾಗಿ ಹಿಂಸಿಸುವದರಕ್ಕೆ ತೊಡಗಿಸಿಕೊಂಡಿದ್ದರಾದ್ದರಿಂದ, ಪ್ರಕಟನೆ ಪುಸ್ತಕವು ಇವರಿಬ್ಬರಲ್ಲಿ ಯಾರಾದರೊಬ್ಬರ ಆಳ್ವಿಕೆಯ ವೇಳೆಯಲ್ಲಿ ಬರೆಯಲ್ಪಟ್ಟಿರುವ ಸಾಧ್ಯತೆಯು ಅಧಿಕವಾಗಿರುತ್ತದೆ. ಕೆಲವರು ಪ್ರಕಟನೆ ಪುಸ್ತಕವು Vespasianನ (ಕ್ರಿ.ಶ. 69-79) ಆಳ್ವಿಕೆಯ ವೇಳೆಯಲ್ಲಿ ಬರೆಯಲ್ಪಟ್ಟಿತೆಂದು ಮತ್ತು ಅದು Vespasianನ ಪೂರ್ವಾಧಿಕಾರಿಗಳಾದ Nero ಹಾಗೂ Vespasianನ ಮಗನಾದ Domitian ಇಬ್ಬರ ಆಳ್ವಿಕೆಯಲ್ಲಾದ ಹಿಂಸೆಯನ್ನೂ ಸೂಚಿಸುವದಾಗಿದೆ ಎಂದು ನಂಬುತ್ತಾರೆ. ಈ ಅಭಿಪ್ರಾಯವು ಬಹುವಾಗಿ ಸಮುದ್ರದಿಂದ ಎದ್ದು ಬಂದ ಮೃಗದ ಏಳು ತಲೆಗಳ ವಿಷಯದಲ್ಲಿ ಯೋಹಾನನು ನೀಡುವ ನಿಗೂಢ "ವಿವರಣೆ" ಮೇಲೆ ಆಧಾರವಾಗಿರುತ್ತದೆ (13:1; 17:9-11). ಹೇಗೂ, 17:9-11ರ ಪ್ರತಿಯೊಂದು ವ್ಯಾಖ್ಯಾನವು ತನ್ನದೆ ಆಗಿರುವ ಕಠಿಣತೆಗಳನ್ನು ಒಳಗೊಂಡಿರುತ್ತದೆ. ಇದು ಯಾವದೇ ಮುಕ್ತಾಯದ ನಿರ್ಣಯಗಳನ್ನು ಆಧಾರಗೊಳಿಸಿಕೊಳ್ಳುವದಕ್ಕೆ ಸೂಕ್ತವಲ್ಲದ ಸಂದೇಹಾಸ್ಪದವಾದ ವಾಕ್ಯಭಾಗವಾಗಿದೆ.

ಪ್ರೇರಿತವಲ್ಲದ ಸಂಪ್ರದಾಯದ ಪ್ರಕಾರವಾಗಿ, ಈ ಪುಸ್ತಕವು Domitianನ ಆಳ್ವಿಕೆಯ ಕಡೇ ಭಾಗದ ವೇಳೆ (ಕ್ರಿ.ಶ. 81-96) ಬರೆಯಲ್ಪಟ್ಟಿತು. ಸುಮಾರು ಕ್ರಿ.ಶ. 185ರಲ್ಲಿ ಬರೆಯುವ ವೇಳೆ, Irenaeusನು ಪ್ರಕಟನೆ ಪುಸ್ತಕದ "ಅಂತ್ಯಕಾಲದ ದರ್ಶನವು ಅಷ್ಟೇನೂ ಹೆಚ್ಚು ಕಾಲದ ಹಿಂದೆ ಅಲ್ಲ, ಆದರೆ ಹೆಚ್ಚುಕಡಿಮೆ ಸ್ವತಃ ನಮ್ಮ ಕಾಲದಲ್ಲಿಯೇ ಕಾಣಲ್ಪಟ್ಟದ್ದಾಗಿದೆ, Domitianನ ಆಳ್ವಿಕೆಯ ಅಂತ್ಯದ ವೇಳೆಗೆ ಆಗಿದೆ" ಎಂದು ಹೇಳಿದನು.[7] Eusebius ರಂತಹ ಸಭೆಯ ಇತರ ನಾಯಕರು ಸಹ ಪ್ರಕಟನೆ ಪುಸ್ತಕವು Domitianನ ಆಳ್ವಿಕೆಯ ವೇಳೆಯಲ್ಲಿ ಕ್ರಿ.ಶ. ೯೦ರ ಕಡೇ ಭಾಗದಲ್ಲಿ ಬರೆಯಲ್ಪಟ್ಟಿತು ಎಂದು ನಂಬುತ್ತಾರೆ.[8]

ಕೆಲವರು ಪ್ರಕಟನೆ ಪುಸ್ತಕವು Nero ಚಕ್ರವರ್ತಿಯ (ಕ್ರಿ.ಶ. 54-68) ಆಳ್ವಿಕೆಯ ಅಂತ್ಯದ ವೇಳೆ ಬರೆಯಲ್ಪಟ್ಟಿತು ಎಂದು ನಂಬುತ್ತಾರೆ, ಆದರೆ ನಮ್ಮ ಅಧ್ಯಯನಗಳಲ್ಲಿ ಕಂಡು ಹಿಡಿಯಲಾಗಿರುವ ಪುರಾವೆಗಳು ಸಂಪ್ರದಾಯಿಕ ಅಭಿಪ್ರಾಯದ ಪರವಾಗಿ ಇರುತ್ತವೆ. ಉದಾಹರಣೆಗೆ, ಏಳು ಸಭೆಗಳ ಸ್ಥಿತಿಗತಿಗಳು ೬೦ರ ದಶಕಗಳಿಗಿಂತಲೂ ೯೦ರ ಕಾಲಕ್ಕೆ ಸರಿಯಾಗಿ ಹೊಂದಾಣಿಕೆಯಾಗುವಂತೆ ಕಾಣಿಸುತ್ತವೆ. ೬೦ರ ವೇಳೆಯಲ್ಲಿ, ಎಫೆಸದಲ್ಲಿನ ಸಭೆಯು ಏಳಿಗೆಯನ್ನು ಹೊಂದುತ್ತಲಿತ್ತೆಂಬುದು ಸ್ಪಷ್ಟವಾಗಿರುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 19; 20; ಎಫೆಸ 1-6). ಹೇಗೂ, ಪ್ರಕಟನೆ ಪುಸ್ತಕವು ಬರೆಯುವ ಹೊತ್ತಿಗೆ, ಎಫೆಸದಲ್ಲಿನ ಸಭೆಯು ತನ್ನ "ಮೊದಲಿದ್ದ ಪ್ರೀತಿಯನ್ನು" ತೊರೆದು ಬಿಟ್ಟಿತ್ತು ಮತ್ತು ಅಳಿದು ಹೋಗುವ ಅಪಾಯದಲ್ಲಿತ್ತು (2:4, 5). ಪ್ರಕಟನೆ ಪುಸ್ತಕವು ಬಹುಶಃ ೯೦ರ ಅಂತ್ಯಭಾಗದಲ್ಲಿ ಬರೆಯಲ್ಪಟ್ಟಿತು, ಆದರೆ ಬರೆಯಲ್ಪಟ್ಟ ನಿಖರವಾದ ಕಾಲಮಾನವು ಒಂದೋ ಅಥವಾ ಎರಡು ವಿವರಣೆಗಳ ವ್ಯಾಖ್ಯಾನಿಸುವಿಕೆಯ ಮೇಲೆ ಪರಿಣಾಮ ಬೀರಬಹುದೇ ಹೊರತು ಪ್ರಥಮ ಶತಮಾನದ ಅಥವಾ ಇಂದಿನ ಕ್ರೈಸ್ತರಿಗಾಗಿ ಇರುವ ಒಟ್ಟಾರೆಯಾದ ಸಂದೇಶದ ಮೇಲೆ

ಯಾವದೇ ಪರಿಣಾಮವನ್ನಂತೂ ಬೀರುವದಿಲ್ಲ.

## ಬರೆಯಲ್ಪಟ್ಟ ಸ್ಥಳ

ಯೋಹಾನನು ಪ್ರಕಟನೆಯನ್ನು ಪಡೆದುಕೊಂಡ ವೇಳೆ ಪತ್ಮೊಸ್ ದ್ವೀಪದಲ್ಲಿದ್ದನು. ಆತನು "ದೇವರ ವಾಕ್ಯಕ್ಕೋಸ್ಕರವೂ ಯೇಸುವಿನ ವಿಷಯವಾದ ಸಾಕ್ಷಿಗೋಸ್ಕರವೂ ಪತ್ಮೊಸ್ ದ್ವೀಪದಲ್ಲಿ" ಸೆರೆಯವನಾಗಿ ಗಡಿಪಾರು ಮಾಡಲ್ಪಟ್ಟವನಾಗಿದ್ದನು (1:9). ಪತ್ಮೊಸ್ ಒಂದು "ಆಧುನಿಕ ತುರ್ಕಿಯ ಕರಾವಳಿ ಪ್ರದೇಶದ ಆಚೆ ಎಫೆಸದಿಂದ ನೈಋತ್ಯಕ್ಕೆ ಸುಮಾರು ಐವತ್ತು ಮೈಲುಗಳಷ್ಟು ದೂರದ Aegean ಸಮುದ್ರದಲ್ಲಿದ್ದ ಒಂದು ಚಿಕ್ಕ (ನಾಲ್ಕು X ಎಂಟು ಮೈಲುಗಳಷ್ಟು ವಿಸ್ತಿರಣದ), ಕಲ್ಲುಬಂಡೆಗಳಿಂದ ಕೂಡಿದ ದ್ವೀಪವಾಗಿತ್ತು. ಅದು ಬಹುಶಃ ರೋಮನ್ ಸಾಮ್ರಾಜ್ಯದ ಒಂದು ದಂಡನೆಗೊಳಗಾದವರ ವಾಸಸ್ಥಾನವಾಗಿತ್ತು."[9] ಸರ್. Sir William Ramsay ಪ್ರಕಾರ, ಸೆರೆವಾಸಕ್ಕೆ ಮುಂಚೆ "ಚಡಿ ಏಟುಗಳನ್ನು ನೀಡಲಾಗುತ್ತಿತ್ತು, ಮತ್ತು ಸದಾಕಾಲವಿರುವಂತೆ ಸಂಕಲೆ (ಕಾಲಿನ ಬೇಡಿಗಳು), ದೇಹವನ್ನು ಪೂರ್ಣವಾಗಿ ಮುಚ್ಚದಂಥ ಉಡುಪು, ಹೊಟ್ಟೆಗೆ ಸಾಕಾದಷ್ಟು ಊಟ, ಹಾಸಿಗೆಯಿಲ್ಲದೆ ನೆಲದ ಮೇಲೆ ಮಲಗುವದು, ಕತ್ತಲೆಯ ಸೆರೆಮನೆ, ಮಿಲಿಟರಿ ಮೇಲ್ವಿಚಾರಕರ ಚಡಿ ಏಟುಗಳ ಅಡಿಯಲ್ಲಿ ಕೆಲಸ ಮಾಡುವದು ಇತ್ಯಾದಿಗಳು ಸಾಮಾನ್ಯವಾಗಿರುತ್ತಿದ್ದವು."[10] ಯೋಹಾನನು ಈ ಪುಸ್ತಕವನ್ನು ಬರೆದ ವೇಳೆಯಲ್ಲಿ ಬಹುಶಃ ಬಹಳ ವೃದ್ಧನಾಗಿದ್ದನು; ಆತನಿಗೆ ಗುಲಾಮಗಿರಿಯ ಕೆಲಸವನ್ನು ಮಾಡುವಂತೆ ಒತ್ತಾಯಿಸಲಾಯಿತೋ ಅಥವಾ ಇಲ್ಲವೋ ಎಂಬುದು ನಮಗೆ ತಿಳಿದಿರುವದಿಲ್ಲ.

## ಶ್ರೋತೃಗಳು

ಪ್ರಕಟನೆ ಪುಸ್ತಕವು ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಏಳು ಸಭೆಗಳಿಗೆ ಬರೆಯಲ್ಪಟ್ಟಿತು-ಆದರೆ ಇದು ಪ್ರತಿಯೊಂದು ಯುಗದಲ್ಲಿರುವ ಸಕಲ ಕ್ರೈಸ್ತರಿಗೂ ಅನ್ವಯವಾಗುತ್ತದೆ. ಅದು ನಿರ್ದಿಷ್ಟವಾಗಿ "ಆಸ್ಯಸೀಮೆಯಲ್ಲಿರುವ ಏಳು ಸಭೆಗಳಿಗೆ" ಬರೆಯಲ್ಪಟ್ಟಿತು (1:4): "ಎಫೆಸ, ಸ್ಮುರ್ನ, ಪೆರ್ಗಮ, ಥುವತ್ತೈರ, ಸಾರ್ದಿಸ್, ಫಿಲದೆಲ್ಫಿಯ, ಲವೊದಿಕೀಯ" (1:11). "ಆಸ್ಯಸೀಮೆ" ಎಂಬ ಪದವು ಏಶಿಯ ಭೂಖಂಡವನ್ನು ಸೂಚಿಸುವದಿಲ್ಲ, ಆದರೆ Aegean ಸಮುದ್ರದ ಮೂಡಣ ದಿಕ್ಕಿಗಿರುವ ದಡದಲ್ಲಿದ್ದಂಥ ರೋಮನ್ನರ ಆಸ್ಯ ಪ್ರಾಂತ್ಯವನ್ನು ಸೂಚಿಸುವದಾಗಿದ್ದು, ಅದು ಈಗಿನ ತುರ್ಕಿಯ ಪಾಶ್ಚಾತ್ಯ ಕರಾವಳಿ ಪ್ರದೇಶವಾಗಿರುತ್ತದೆ. ಆ ಪ್ರಾಂತ್ಯದಲ್ಲಿ ಏಳಕ್ಕಿಂತಲೂ ಹೆಚ್ಚು ಸಭೆಗಳಿದ್ದವು, ಉದಾಹರಣೆಗೆ ತ್ರೋವ, ಕೊಲೊಸ್ಸೆ, ಮತ್ತು ಹಿರಿಯಾಪೊಲಿ ಎಂಬ ಸ್ಥಳಗಳಲ್ಲಿ ಕೂಡಿ ಬರುತ್ತಿದ್ದ ಸಭೆಗಳಿದ್ದವು (ಅಪೊಸ್ತಲರ ಕೃತ್ಯಗಳು 20:6, 7; ಕೊಲೊಸ್ಸೆ 1:2; 4:13). ಹೇಗೂ, ಈ ಏಳು ಸಭೆಗಳು ಆ ದಿನದಲ್ಲಿ ಮತ್ತು ನಮ್ಮ ದಿನದಲ್ಲಿ ಇರುವಂತಹ ವಿಶಿಷ್ಟ್ಯವಾದ ಸಭೆಗಳಾಗಿ ಆರಿಸಿಕೊಳ್ಳಲ್ಪಟ್ಟಿದ್ದವು.

ಪ್ರಕಟನೆ ಪುಸ್ತಕವು ನಿರ್ದಿಷ್ಟ ಏಳು ಸಭೆಗಳನ್ನುದ್ದೇಶಿಸಿ ಮಾತ್ರವೇ ಬರೆಯಲ್ಪಟ್ಟಿದೆಯಾದರೂ, ಅದು-ನಿರ್ದಿಷ್ಟವಾದ ಶ್ರೋತೃಗಳನ್ನು ಸಂಬೋಧಿಸಿ ಬರೆಯಲಾಗಿರುವ ಹೊಸ ಒಡಂಬಡಿಕೆಯ ಇತರ ಪುಸ್ತಕಗಳಂತೆಯೇ-ವ್ಯಾಪಕವಾದ ಶ್ರೋತೃಗಳಿಗಾಗಿ ಬರೆಯಲ್ಪಟ್ಟದ್ದಾಗಿದೆ. 2 ಮತ್ತು 3 ಅಧ್ಯಾಯಗಳಲ್ಲಿರುವ ಪ್ರತಿಯೊಂದು ಪತ್ರವು ಇದನ್ನು ಒಳಗೊಂಡಿರುತ್ತದೆ: "ದೇವರಾತ್ಮನು ಹೇಳುವದನ್ನು ಕಿವಿಯುಳ್ಳವನು ಕೇಳಲಿ" (2:7). ನಾವು ಪ್ರಕಟನೆ ಪುಸ್ತಕದ ಮಾತುಗಳನ್ನು ಓದುವಾಗ ಹಾಗೂ ಕೇಳಿಸಿಕೊಳ್ಳುವಾಗ, ಇಂದು ನಮಗೂ ಒಂದು ಸಂದೇಶವು ಈಗಲೂ ಅದರಲ್ಲಿರುತ್ತದೆ.

## ಸಾಹಿತ್ಯ ಶೈಲಿ

ಅಧ್ಯಾಯ 1ರ ಪ್ರಕಾರವಾಗಿ, ಪ್ರಕಟನೆ ಪುಸ್ತಕವು ಅಂತ್ಯಕಾಲಕ್ಕೆ ಸಂಬಂಧಿಸಿದ ಸಾಹಿತ್ಯದ, ಪ್ರವಾದನೆ ಭಾಗವಾಗಿರುತ್ತದೆ, ಮತ್ತು ಪತ್ರಿಕೆಯ ಭಾಗವಾಗಿರುತ್ತದೆ:

1. ಮೊಟ್ಟ ಮೊದಲನೆಯದಾಗಿ, ಈ ಪುಸ್ತಕವು *ಅಂತ್ಯಕಾಲಿಕ ಸಾಹಿತ್ಯವಾಗಿದೆ.* ಇದು ಈ ಪದಗುಚ್ಛದಿಂದ ಆರಂಭಗೊಳ್ಳುತ್ತದೆ: "ಯೇಸು ಕ್ರಿಸ್ತನ ಪ್ರಕಟನೆಯು" (1:1). "ಪ್ರಕಟನೆ" ಎಂಬ ಪದವು ἀποκάλυψις (*apokalupsis*) ಎಂಬ ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿದೆ. ಕೆಲವು ತರ್ಜುಮೆಗಳಲ್ಲಿ, ಈ ಪುಸ್ತಕಕ್ಕೆ "The Apocalypse" (ಬಯಲುಗೊಳಿಸು) ಎಂದು ಶಿರ್ಷೀಕೆಯನ್ನು ನೀಡಲಾಗಿರುತ್ತದೆ. ಅಂತ್ಯಕಾಲಕ್ಕೆ ಸಂಬಂಧಿಸಿದ ಸಾಹಿತ್ಯವು ಒಂದು ವಿಶೇಷ ವಿಧವಾದ ರಚನೆಯಾಗಿದ್ದು ವಿಚಿತ್ರ ಸಂಕೇತಗಳನ್ನು ಹೇರಳವಾಗಿ ಹೊಂದಿರುತ್ತದೆ.

2. ಈ ಪುಸ್ತಕವು *ಪ್ರವಾದನೆ* ಎಂದು ಸಹ ಕರೆಯಲ್ಪಟ್ಟಿದೆ: "ಈ ಪ್ರವಾದನಾ ವಾಕ್ಯಗಳನ್ನು ಓದುವವರೂ ಕೇಳುವಂಥವನೂ ಧನ್ಯರು" (1:3; ನೋಡಿರಿ 22:7, 10, 18, 19). ಪ್ರವಾದಿಗಳು ದೇವರಿಂದ ಪ್ರೇರಿತರಾದ ವಕ್ತಾರರಾಗಿದ್ದು "ದೇವರಿಂದ ಬರುವ ಯಾವದೇ ಮಾತನ್ನು-ಆಜ್ಞೆಯಾಗಿದ್ದರೂ ಸರಿಯೇ, ಉಪದೇಶ, ಇತಿಹಾಸ ಅಥವಾ ಮುಂತಿಳಿಸುವಿಕೆ ಆಗಿದ್ದರೂ ಸರಿಯೇ - ಸಾರುವದರ" ವಿಷಯಕ್ಕೆ ಸಂಬಂಧ ಪಟ್ಟಿರುತ್ತಾರೆ.[11]

3. ಈ ಪುಸ್ತಕದ ಶೈಲಿಯು *ಒಂದು ಪತ್ರಿಕೆ,* ಅಥವಾ ಪತ್ರದ ರೂಪವುಳ್ಳದ್ದಾಗಿದೆ. ಆರಂಭಿಕ ಹೇಳಿಕೆಯ ಬಳಿಕ, ಪುಸ್ತಕವು ಒಂದು ಪತ್ರಿಕೆಗೆ ವಿಶಿಷ್ಟವಾದ ವಂದನೆ ಹೇಳುವಿಕೆಗೆ ತಿರುಗಿಕೊಳ್ಳುತ್ತದೆ: "ಆಸ್ಯ ಸೀಮೆಯಲ್ಲಿರುವ ಏಳು ಸಭೆಗಳಿಗೆ ಯೋಹಾನನು ಬರೆಯುವದೇನಂದರೆ . . . ಆಗಿರುವ ಯೇಸು ಕ್ರಿಸ್ತನಿಂದ ನಿಮಗೆ ಕೃಪೆಯೂ ಶಾಂತಿಯೂ ಆಗಲಿ" (1:4).

ಬಹಳಷ್ಟು ಜನರಿಗೆ ಪ್ರಾದನೆ ಮತ್ತು ಪತ್ರಿಕೆಗಳ ವಿಷಯದಲ್ಲಿ ಪರಿಚಿತಿಯನ್ನು ಹೊಂದಿದ್ದಾರೆ, ಆದರೆ ಕೆಲವರು "ಅಂತ್ಯಾಕಾಲಿಕ ಸಾಹಿತ್ಯ" ದ ವಿಷಯದಲ್ಲಿ ಪರಿಚಯವಿಲ್ಲದವರಾಗಿದ್ದಾರೆ. "Apocalyptic" (ಅಂತ್ಯಕಾಲಿಕ) ಎಂಬ ಪದವನ್ನು ಪರಿಚಯ ಮಾಡಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. "Apocalyptic" ಎಂಬ ಪದವನ್ನು "apocrypha" ಎಂಬ ಪದವೆಂದು ಗೊಂದಲ ಮಾಡಿಕೊಳ್ಳಬೇಡಿರಿ, ಇದರ ಅರ್ಥವು "ಮರೆಯಾದ" ಎಂದಾಗಿರುತ್ತದೆ. "Apocrypha" ಎಂಬುದು ಕ್ರಿ.ಪೂ. 200 ರಿಂದ ಕ್ರಿ.ಶ. 100 ಮಧ್ಯದಲ್ಲಿ ಬರೆಯಲಾದ ಪ್ರೇರಿತವಲ್ಲದ ವಿವಿಧ ಬರಹಗಳಿಗೆ ಕೊಡಲಾಗಿರುವ ಬಿರುದು ಆಗಿರುತ್ತದೆ.

ಇಂದು, "apocalypse" ಎಂಬ ಪದವೆಂದರೆ ವಿನಾಶ ಹಾಗೂ ನಾಶನಕ್ಕೆ ಇನ್ನೊಂದು ಹೆಸರು ಎಂಬಂತಾಗಿರುತ್ತದೆ, ಆದರೆ *apokalupsis* ಎಂಬ ಗ್ರೀಕ್ ಪದವು ಆ ಸೂಚ್ಯಾರ್ಥವನ್ನು ಹೊಂದಿರುವದಿಲ್ಲ. *Apokalupsis* ಎಂಬುದರ ಸರಳವಾದ ಅರ್ಥವು "ಬಯಲುಗೊಳಿಸುವಿಕೆ" ಅಥವಾ ಒಂದು ಪ್ರಕಟಗೊಳಿಸುವಿಕೆ" ಎಂದಾಗಿರುತ್ತದೆ. ಇದು ಮೌಖಿಕ ರೂಪವಾಗಿರುವ, ἀποκαλύπτω (*apokaluptō*) ಎಂಬುದು ಗ್ರೀಕ್ ಭಾಷೆಯ "ಮುಸುಕು" (καλύπτω, *kaluptō*) ಮತ್ತು "ದಿಂದ" ಅಥವಾ "ದೂರವಾಗಿ" (ἀπό, *apo*) ಎಂಬ ಪದಗಳನ್ನು ಒಂದುಗೂಡಿಸುತ್ತದೆ, ಹೀಗೆ "ಮುಸುಕು ತೆಗೆಯುವದು" ಎಂದು ಅರ್ಥವನ್ನು ಕೊಡುತ್ತದೆ. *Apokalupsis* ಎಂಬುದು ಗತಕಾಲದಲ್ಲಿ ತಿಳಿಯದೆ ಇದ್ದಂಥ ಆದರೆ ಈಗ ಬಯಲುಗೊಳಿಸಲ್ಪಟ್ಟಿರುವಂಥ ಯಾವದನ್ನೇ ಆಗಲಿ ಸೂಚಿಸುವದಾಗಿದೆ (ನೋಡಿರಿ ರೋಮಾ 2:5; 16:25; 1 ಕೊರಿಂಥ 14:6; ಗಲಾತ್ಯ 1:12; 2:2; ಎಫೆಸ 3:3; 1 ಪೇತ್ರ 1:7, 13; 4:13).

ಒಂದು ತಾಂತ್ರಿಕ ಅರ್ಥದಲ್ಲಿ ಬಳಸುವದಾದರೆ, "apocalyptic" ಎಂಬ ಪದವು ಕ್ರಿ.ಪೂ. ಕಡೇ ಎರಟು ಶತಮಾನಗಳು ಹಾಗೂ ಕ್ರಿ.ಶ. ಮೊದಲನೆಯ ಶತಮಾನದಲ್ಲಿ ಏಳಿಗೆಯಾದ ಸಾಹಿತ್ಯದ ಒಂದು ವಿಶೇಷ ವಿಧಕ್ಕೆ ಅನ್ವಯಿಸಲ್ಪಟ್ಟಿರುತ್ತದೆ. ಈ ಬಗೆಯ ಗುಣಲಕ್ಷಣಗಳಲ್ಲೊಂದೆಂದರೆ ಸಂದೇಶವು ಇಲ್ಲಿ ವಿಚಿತ್ರ ಹಾಗೂ ಅದ್ಭುತವಾದ ಸಂಕೇತಗಳಿಂದ ತಿಳಿಯಪಡಿಸಲ್ಪಡುತ್ತದೆ. ಅಂತ್ಯಕಾಲಿಕ ಸಾಹಿತ್ಯದಲ್ಲಿ, ಸಂಕೇತಗಳು ಕೇವಲ ಸಂದೇಶವನ್ನು ವಿಸ್ತಾರಗೊಳಿಸುವದಿಲ್ಲ; ಅವುಗಳು *ಸ್ವತಃ* ಸಂದೇಶವಾಗಿರುತ್ತವೆ.

ಬಹಳಷ್ಟು ಸಂಕೇತಗಳು ನಮಗೆ ಗೊತ್ತಿರುವಂಥ ಈ ಲೋಕಕ್ಕೆ ಸಂಬಂಧ ಪಟ್ಟಿರುವ ಸಾಧಾರಣವಾದ ಸಂಕೇತಗಳಾಗಿರುವದಿಲ್ಲ. ಬದಲಾಗಿ, ಅನೇಕ ಸಂಕೇತಗಳು ನಾವು ಕೇವಲ ದುಃಸ್ವಪ್ನಗಳಲ್ಲಿ ಕಾಣುವಂತಹ ವಿಕಟಚಿತ್ರ ರೂಪದ ಆಕಾರಗಳಾಗಿರುತ್ತವೆ. ಈ ಗುಣಸ್ವಭಾವವು ಇಂದು ಜನರಿಗೆ ಅಂತ್ಯಕಾಲಿಕವಾದ ಅರ್ಥೈಸುವಿಕೆಯು ವಿಲಕ್ಷಣವಾಗಿ ಕಾಣಿಸುವಂತೆ ಮಾಡುತ್ತದೆ. ನಮ್ಮ ಮ್ಯಾಗಜಿನ್‌ಗಳು, ನಮ್ಮ ಪುಸ್ತಕಗಳು, ಮತ್ತು ನಮ್ಮ ಸುದ್ದಿಪತ್ರಿಕೆಗಳು ಅಂತ್ಯಕಾಲಿಕ ಭಾಷೆಯಲ್ಲಿ ಬರೆಯಲ್ಪಡುವದಿಲ್ಲ. ಆದುದರಿಂದ, ನಾವು ಒಬ್ಬ ಬಾಯಿಂದ ಖಡ್ಗವು ಹೊರ ಬರುವಂತಹ, ಅಗ್ನಿಯಿಂದ ಕೂಡಿದ ಕುದುರೆ ಸವಾರನು ಭೂಮಿಯ ಹಸಿರನ್ನೆಲ್ಲಾ ನುಂಗಿ ಬಿಡುವಂತಹ, ಮತ್ತು ಸರ್ಪವು ಅತ್ಯಂಥ ಬೃಹತ್ತಾಕಾರದ್ದಾಗಿದ್ದು ಅದರ ಬಾಲವು ಆಕಾಶದ ನಕ್ಷತ್ರವನ್ನು ಹೊಡೆದುರಿಳಿಸುವಂತಹ ಜಗತ್ತಿನೊಳಗೆ ನಾವು ತಳ್ಳಲ್ಪಟ್ಟರೆ ತಬ್ಬಿಬ್ಬುಗೊಳ್ಳುತ್ತೇವೆ.

ಹೇಗೂ, ಮೂಲ ವಾಚಕರಿಗಾದರೋ, ಅಂತ್ಯಕಾಲಿಕ ಅರ್ಥೈಸುವಿಕೆಯ ದಾರಿಯು ವಿಚಿತ್ರ ಅಥವಾ ಸಹಜವಾದದ್ದೆಂದು ಪರಿಗಣಿಸಲ್ಪಟ್ಟಿರುವದಿಲ್ಲ. ಹಳೆಯ ಒಡಂಬಡಿಕೆಯಲ್ಲಿ, ಅಂತ್ಯಕಾಲಿಕ ಭಾಷೆಯು ಸ್ವಲ್ಪ ಮಟ್ಟಿಗೆ ಯೆಹೆಜ್ಕೇಲನ ಪುಸ್ತಕದಲ್ಲಿ ಮತ್ತು ದಾನಿಯೇಲನ ಪುಸ್ತಕದ ಬಹುಪಾಲು ಭಾಗದಲ್ಲಿ ಕಾಣಬಹುದಾಗಿದೆ, ಮತ್ತು ಅದು ಯೆಶಾಯ, ಯೋವೇಲ, ಜೆಕರ್ಯ ಹಾಗೂ ಹಳೆಯ ಒಡಂಬಡಿಕೆಯ ಇತರ ಪುಸ್ತಕಗಳೊಳಗೆ ಅಲ್ಲಲ್ಲಿ ಪ್ರೋಕ್ಷಣೆ ಮಾಡಲ್ಪಟ್ಟಿದೆ. ಅಷ್ಟುಮಾತ್ರವಲ್ಲದೆ, ಹಳೆಯ ಹಾಗೂ ಹೊಸ ಒಡಂಬಡಿಕೆಗಳ ನಡುವಿನ ಯುಗವು-ಮಲಾಕಿಯ ಮತ್ತು ಮತ್ತಾಯ ಸುವಾರ್ತೆಯ ಮಧ್ಯದಲ್ಲಿನ ನಾನ್ನೂರು ವರ್ಷಗಳು-ಪ್ರೇರಿತವಲ್ಲ ಅಂತ್ಯಕಾಲಿಕವಾದ ಬರಹಗಳಿಂದ ತುಂಬಿರುತ್ತದೆ. Ray Summers ಹೀಗೆ ಹೇಳುತ್ತಾನೆ:

> ಕ್ರೈಸ್ತೀಯ ಅಂತ್ಯಕಾಲಿಕನಾದ ಯೋಹಾನನು ರೋಮನ್ ಸಾಮ್ರಾಜ್ಯವು ವಿನಾಶಗೊಂಡು ದೇವರ ಕಾರ್ಯಕ್ಕೆ ಜಯವು ಸಿಕ್ಕುವದೆಂಬ ನಿರೀಕ್ಷೆಯನ್ನು ಬಾಧೆಯನ್ನನುಭವಿಸುತ್ತಿದ್ದ ತನ್ನ ಸಂಗಡಿಗರನ್ನು ಮುಂದೆ ಎತ್ತಿ ಹಿಡಿಯುವ ಮೂಲಕ, ಆತನು ಅನೇಕ ಪರಿಚಿತವಾದ ಮೈಲುಗಲ್ಲುಗಳನ್ನು ದಾಟುತ್ತಾ ಮುಂದಕ್ಕೆ ನಡಿಸುವ ಬಹಳ ಸವೆದು ಹೋಗಿದ್ದ ದಾರಿಯನ್ನೇ ಅನುಸರಿಸುವವನಾಗಿದ್ದನು. ತನ್ನ ಕಷ್ಟಗಳಿಗೆ ಪರಿಹಾರವಾಗಿ ಅಂತ್ಯಕಾಲಿಕ ಚಿತ್ರಣವನ್ನು ಧೈರ್ಯವಾಗಿ ಅನುಸರಿಸುವದರಲ್ಲಿ ಆತನು ಅನೇಕ ಕ್ರೈಸ್ತರಿಗೆ ಒಗ್ಗಿಕೊಳ್ಳುವಂತಹ, ಅವರ ಸ್ವಂತ ಧರ್ಮದ ಈ ಯೆಹೂದಿ ಪೂರ್ವಭಾವಿ ಘಟನಗಳೊಂದಿಗೆ ಪರಿಚಯ ಮಾಡಿಕೊಂಡಿದ್ದಂಥ ವಾತಾವರಣದೊಳಗೆ ಸಾಗುವವನಾಗಿದ್ದನು.[12]

ಅಂತ್ಯಕಾಲಿಕ ದಾರಿಯನ್ನು ಏಕೆ ಬಳಸಲಾಯಿತು? ಇದರಲ್ಲಿ ಹಲವಾರು ಕಾರಣಾಂಶಗಳು ಸೇರಿರುತ್ತವೆ: ಲೇಖಕರು ಅಸಾಧ್ಯವಾದದ್ದನ್ನು ಮಾಡುವದಕ್ಕೆ-ಮಾನವರ ವ್ಯವಹಾರಗಳಲ್ಲಿ ದೇವರು ಮಧ್ಯಪ್ರವೇಶಿಸುವ ಕುರಿತು ಹೇಳುವದಕ್ಕೆ-ಪ್ರಯತ್ನಿಸುತ್ತಿದ್ದರು. ಅವರು "ವರ್ಣಿಸಲಿಕ್ಕಾಗದ್ದನ್ನು ವರ್ಣಿಸಬೇಕೆಂದು, ಹೇಳಲಿಕ್ಕಾಗದ್ದನ್ನು ಹೇಳುವದಕ್ಕೆ,

ಚಿತ್ರಿಸಲಿಕ್ಕಾಗದ್ದನ್ನು ಚಿತ್ರಿಸಲು ನಿರಂತರವಾದ ಪ್ರಯತ್ನವನ್ನು ಮಾಡುತ್ತಿದ್ದರು."[13] ಅಷ್ಟುಮಾತ್ರವಲ್ಲದೆ, ಅಂತ್ಯಕಾಲಿಕ ಭಾಷೆಯು ತಿಳಿಯ ಪಡಿಸುವದಕ್ಕೆ ಪರಿಚಿತವಿದ್ದ ದಾರಿಯಾಗಿತ್ತಾದ್ದರಿಂದ, ಅಮೋಘವಾದ ಚಿತ್ರಗಳು ತಡೆಯಾಗುವ ಬದಲಾಗಿ ಸಹಾಯವನ್ನು ಮಾಡುವಂತವುಗಳಾಗಿದ್ದವು.

ಬಹುಶಃ ಅತ್ಯಂಥ ಪ್ರಾಮುಖ್ಯವಾದ ಕಾರಣಾಂಶವೆಂದರೆ ಈ ವಿಧವಾದ ಬರಹವನ್ನು ಉತ್ಪಾದಿಸಿದ ರಾಜಕೀಯ ಹಾಗೂ ಧಾರ್ಮಿಕ ವಾತಾವರಣವೇ ಆಗಿತ್ತು. ಅಂತ್ಯಕಾಲಿಕ ಸಾಹಿತ್ಯವು ಬೆಳೆದಂಥ ನೆಲವು *ಕಷ್ಟಗಳಿದ್ದ ಕಾಲಗಳು* ಆಗಿತ್ತು: ಬಾಬಿಲೋನಿನಲ್ಲಿ ಸೆರೆವಾಸವನ್ನು ಅನುಭವಿಸುವದು ಯೆಹೆಜ್ಕೇಲ ಹಾಗೂ ದಾನಿಯೇಲ ಪುಸ್ತಕಗಳಿಗೆ ವೇದಿಕೆಯನ್ನು ನಿರ್ಮಿಸುತ್ತಿತ್ತು. ಒಡಂಬಡಿಕೆಗಳ ನಡುವಿನ ಕಾಲದಲ್ಲಿ ಸಿರಿಯದವರಿಂದಾದ ಶೋಷಣೆಯು ಬಹಳಷ್ಟು ಕ್ಯಾನೋನಿನಲ್ಲಿ ಸೇರಿರದ ಅಂತ್ಯಕಾಲಿಕ ಸಾಹಿತ್ಯಕ್ಕೆ ದಾರಿ ಮಾಡಿ ಕೊಟ್ಟಿತು. Nero ಮತ್ತು Domitianನ ಆಳ್ವಿಕೆಯಡಿಯಲ್ಲಿ ಕ್ರೈಸ್ತರಿಗಾದ ರೋಮನ್ ಹಿಂಸೆಯು ಪ್ರಕಟನೆ ಪುಸ್ತಕಕ್ಕೆ ಹಿನ್ನಲೆಯನ್ನು ಸೃಷ್ಟಿಸಿತ್ತು. ಅನೇಕ ವ್ಯಾಖ್ಯಾನಕಾರರು "ಕಷ್ಟದ ಕಾಲಗಳಿಗಾಗಿರುವ ಕಿರುಹೊತ್ತಿಗೆಗಳಲ್ಲಿ"[14] ಇರುವ ಸಾಂಕೇತಿಕ ಭಾಷೆಯು ಎರಡು ಉದ್ದೇಶಗಳನ್ನು ಹೊಂದಿತ್ತೆಂದು ನಂಬುತ್ತಾರೆ: (1) ಸಂಕೇತಗಳ ಅರ್ಥವನ್ನು ಅರ್ಥಮಾಡಿಕೊಂಡ ದೀಕ್ಷೆ ಹೊಂದಿದವರಿಗೆ ಸಂದೇಶವನ್ನು *ಬಯಲುಗೊಳಿಸುವದು* ಮತ್ತು (2) ದೀಕ್ಷೆ ಹೊಂದಿರದವರಿಗೆ ಸಂದೇಶವನ್ನು *ಗೋಪ್ಯವಾಗಿಡುವದು*. ಇಲ್ಲಿ ಯೇಸುವಿನ ಸಾಮ್ಯಗಳೊಂದಿಗೆ ಸಮಾನಾರ್ಥವನ್ನು ಕಲ್ಪಿಸಬಹುದಾಗಿದೆ: ಯೇಸು ತನ್ನ ಸಂದೇಶವನ್ನು ಸರಳಗೊಳಿಸುವದಕ್ಕಾಗಿ, ಅಂದರೆ ತನ್ನ ಸಂದೇಶವನ್ನು *ಬಯಲುಗೊಳಿಸುವದಕ್ಕೆ* ಸಾಮ್ಯಗಳಲ್ಲಿ ಮಾತಾಡಿದನೆಂದು ನಾವು ಅನೇಕ ಸಾರಿ ಹೇಳುತ್ತಿರುತ್ತೇವೆ. ಇದು ಸತ್ಯವೇ ಆದರೂ, ತನ್ನ ಸಂದೇಶವನ್ನು ಸ್ವೀಕರಿಸಿಕೊಳ್ಳಲು ಸಿದ್ಧರಿಲ್ಲದವರಿಂದ ಅದನ್ನು *ಗೋಪ್ಯವಾಗಿ*ಡುವದಕ್ಕಾಗಿ ಸಾಮ್ಯಗಳಲ್ಲಿ ಮಾತಾಡಿದೆನೆಂದು ಸಹ ಆತನು ಹೇಳಿದನು (ನೋಡಿರಿ ಮತ್ತಾಯ 13:10-17).

ಪ್ರಕಟನೆ ಪುಸ್ತಕದ ಸಂದೇಶವನ್ನು ಪರಿಗಣಿಸಿರಿ: ಅವರನ್ನು ಶೋಷಣೆ ಮಾಡುವವನು, ರೋಮನ್ ಸಾಮ್ರಾಜ್ಯವು ಅಂತಿಮವಾಗಿ ಪತನಗೊಳ್ಳುವದೆಂದು ಮೊದಲನೆಯ ಶತಮಾನದ ಕ್ರೈಸ್ತರಿಗೆ ಈ ಪುಸ್ತಕವು ಭರವಸವನ್ನು ಕೊಡುತ್ತದೆ. ಆ ಸಂದೇಶವನ್ನು ರೋಮನ್ ಅಧಿಕಾರಿಗಳು ಅರ್ಥಮಾಡಿಕೊಂಡಿರುತ್ತಿದ್ದರೆ ಏನಾಗಿರುತ್ತಿತ್ತು? ಮೊದಲನೆಯದಾಗಿ, ಈ ಪುಸ್ತಕದ ಪ್ರತಿಗಳನ್ನು ಪತ್ಮೊಸ್ ದ್ವೀಪದಿಂದ ಹೊರಕ್ಕೆ ಸಾಗಿಸುವ ವಿಷಯದಲ್ಲಿ ಯೋಹಾನನು ಬಹಳಷ್ಟು ಕಷ್ಟವನ್ನು ಅನುಭವಿಸಿರುತ್ತಿದ್ದನು (1:11) ಯಾಕೆಂದರೆ ಸೆರೆಯಲ್ಲಿರುವವರ ಪತ್ರ ವ್ಯವಹಾರಗಳ ಮೇಲೆ ಕಣ್ಣಿಡುವದು ಸಾಮಾನ್ಯವಾಗಿರುತ್ತಿದ್ದ ಪದ್ಧತಿಯಾಗಿತ್ತು. ಎರಡನೆಯದಾಗಿ, ರೋಮನ್ ಅಧಿಕಾರಿಗಳು ಸಂದೇಶವು ವ್ಯಾಪಕವಾಗಿ ಹರಡುವಂತೆ ಬಿಡುತ್ತಿರಲಿಲ್ಲ; ಅವರು ತಮಗೆ ಸಾಧ್ಯವಾದ ಎಲ್ಲಾ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದರು. ಮೂರನೆಯದಾಗಿ, ವಿಚಾರಣೆಯಲ್ಲಿರುವ ಕ್ರೈಸ್ತರು ದೇಶದ್ರೋಹ ಮಾಡಿದವರೆಂದು ಸಾಭಿತುಪಡಿಸುವದಕ್ಕೆ ಅಂತಹ ದಾಸ್ತವೇಜನ್ನು ಬಳಸಿಕೊಳ್ಳಬಹುದಾಗಿತ್ತು. ಅದು ಹಾಗಿದ್ದಿರುವಾಗ, ಪ್ರಕಟನೆ ಪುಸ್ತಕದ ಪ್ರತಿಯೊಂದು ರೋಮನ್ ಅಧಿಕಾರಿಗಳ ಕೈಗೆ ಸಿಕ್ಕಿದರೆ, ಅವರು ಅದನ್ನೊಮ್ಮೆ ಕಣ್ಣಾಡಿಸಿ "ಇದೊಂದು ಕ್ರೈಸ್ತರ ಅರ್ಥಹೀನ ಕೆಲಸ" ಎಂದು ಹೇಳಿ ಅದನ್ನು ತಳ್ಳಿ ಹಾಕಿರುತ್ತಿದ್ದರು. Apocalypseದ "ಗೋಪ್ಯವಾಗಿಡುವ" ಉದ್ದೇಶಕ್ಕೆ ವ್ಯತಿರೀಕ್ತವಾದ ಕಾರ್ಯವೊಂದು 17ನೇ ಅಧ್ಯಾಯದಲ್ಲಿ ಸಿಕ್ಕುತ್ತದೆ. "ಬಾಬೆಲೆಂಬ ಮಹಾ

ನಗರಿ" ಎಂಬುದು "ಭೂರಾಜರ ಮೇಲೆ ಅಧಿಕಾರ ಹೊಂದಿರುವ ಮಹಾನಗರಿಯೇ" (ವ. 18), "ಏಳು ಬೆಟ್ಟಗಳ" ಮೇಲೆ ಕೂತುಕೊಂಡಿರುವ ಪಟ್ಟಣ (ವ. 9) ಎಂದು ಗುರುತಿಸಲ್ಪಟ್ಟಿದೆಇದು ಸ್ಪಷ್ಟವಾಗಿ ರೋಮ್ ನಗರವನ್ನು ಸೂಚಿಸುವದಾಗಿದೆ. ಬಹುಶ: ಆ ನಿರ್ದಿಷ್ಟವಾದ ಸಾಂಕೇತಿಕ ವಿಷಯದಲ್ಲಿ ಕರ್ತನು ಮಾರ್ಮಿಕವಾಗಿ ಹೇಳುವದಕ್ಕಿಂತಲೂ ಸ್ಪಷ್ಟವಾಗಿ ತಿಳಿಸುವದಕ್ಕೆ ಆಯ್ಕೆ ಮಾಡಿಕೊಂಡಿರಬಹುದು ಯಾಕೆಂದರೆ ಆ ಅಂಶವು ಬಹಳ ಪ್ರಾಮುಖ್ಯವಾಗಿತ್ತು (17:9, 18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಅಂತ್ಯಕಾಲಿಕ ಸಾಹಿತ್ಯದ ಕುರಿತಾಗಿ ಇನ್ನಷ್ಟು ಹೇಳಲು ಸಾಧ್ಯವಿರುತ್ತದೆ. ಹೇಗೂ, ಈ ಹಂತದಲ್ಲಿ, ಅಂತ್ಯಕಾಲಿಕ ಸಾಹಿತ್ಯದಲ್ಲಿ ಸಂದೇಶವು *ಸಂಕೇತಗಳ ಮೂಲಕವಾಗಿ* ತಿಳಿಸಲ್ಪಡುತ್ತದೆಂಬುದನ್ನು ಮಾತ್ರವೇ ನಾವು ಒತ್ತಿ ಹೇಳುವದಕ್ಕೆ ಬಯಸುತ್ತೇವೆ.

## ಅರ್ಥಮಾಡಿಕೊಳ್ಳುವ ಸಾಮರ್ಥ್ಯ

ನಾವು ಕನಿಷ್ಠ ಪ್ರಕಟನೆ ಪುಸ್ತಕದ ಮೂಲಭೂತ ಸಂದೇಶವನ್ನಾದರೂ ಅರ್ಥಮಾಡಿಕೊಳ್ಳಬೇಕೆಂದು ದೇವರು ಅಪೇಕ್ಷಿಸುತ್ತಾನೆ. ದಾನಿಯೇಲನು ತನಗೆ ಕೊಡಲ್ಪಟ್ಟ ಪ್ರಕಟನೆಗಳ ಅಂತ್ಯಕ್ಕೆ ಬಂದಾಗ, ಆತನಿಗೆ "ದಾನಿಯೇಲನೇ, ನೀನು ಈ ಮಾತುಗಳನ್ನು ಮುಚ್ಚಿಡು, ಅವುಗಳನ್ನು ಬರೆಯುವ ಗ್ರಂಥಕ್ಕೆ *ಮುದ್ರೆ ಹಾಕು*, ಅಂತ್ಯಕಾಲದ ವರೆಗೆ ಮರೆಯಾಗಿರಲಿ . . ." ಎಂದು ಹೇಳಲಾಯಿತು (ದಾನಿಯೇಲ 12:4; ಒತ್ತಿ ಹೇಳಿದ್ದು ನನ್ನದು). ದಾನಿಯೇಲನ ರಾಜ್ಯದ/ಸಭೆಯ ಸ್ಥಾಪನೆಯಂತಹ (ದಾನಿಯೇಲ 2:44) ಅನೇಕ ಪ್ರವಾದನೆಗಳ ನೆರವೇರಿಕೆಯು ಭವಿಷ್ಯದಲ್ಲಿ ಬಹಳ ದೂರದ ಕಾಲದಲ್ಲಿ ಸಂಭವಿಸುವವುಗಳಾಗಿದ್ದರಿಂದ, ಪ್ರವಾದಿಯ ದಿನದಲ್ಲಿ ಜೀವಿಸುತ್ತಿದ್ದವರು ಈ ಪುಸ್ತಕವನ್ನು ಅರ್ಥಮಾಡಿಕೊಳ್ಳಬೇಕೆಂಬುದನ್ನು ಅಪೇಕ್ಷಿಸಲಾಗಿರಲಿಲ್ಲ (ನೋಡಿರಿ ದಾನಿಯೇಲ 8:27). ಅದಕ್ಕೆ ತದ್ವಿರುದ್ಧವಾಗಿ, ಯೋಹಾನನಿಗೆ ಹೀಗೆ ಆಜ್ಞಾಪಿಸಲಾಯಿತು, "ಈ ಪುಸ್ತಕದಲ್ಲಿರುವ ಪ್ರವಾದನಾವಾಕ್ಯಗಳನ್ನು *ಗುಪ್ತವಾಗಿಡಬೇಡ*; ಇವುಗಳು ನೆರವೇರುವ ಸಮಯವು ಸಮೀಪವಾಗಿದೆ" (ಪ್ರಕಟನೆ 22:10; ಒತ್ತಿ ಹೇಳಿದ್ದು ನನ್ನದು). ಪ್ರಕಟನೆ ಪುಸ್ತಕದ ನೆರವೇರಿಕೆಯು ಶೀಘ್ರದಲ್ಲಿಯೇ ಆರಂಭಗೊಳ್ಳಲಿತ್ತು (1:1, 3), ಮತ್ತು ಅದನ್ನು ಓದುವವರು ಆ ವಿಷಯಗಳನ್ನು ಅರ್ಥಮಾಡಿಕೊಳ್ಳಬೇಕು ಎಂದು ಅಪೇಕ್ಷಿಸಲಾಗಿತ್ತು (ನೋಡಿರಿ 13:18).

ನಾವು ಪ್ರಕಟನೆಯನ್ನು ಅರ್ಥಮಾಡಿಕೊಳ್ಳಬೇಕೆಂದು ದೇವರು ಬಯಸುತ್ತಾನೆಂದ ಮಾತ್ರಕ್ಕೆ ನಾವು ಪುಸ್ತಕದಲ್ಲಿರುವ ಸಮಸ್ತವನ್ನು ಗ್ರಹಿಸಿಕೊಳ್ಳಬಲ್ಲೆವು ಎಂದರ್ಥವಲ್ಲ. ಉದಾಹರಣೆಗೆ, 10ನೇ ಅಧ್ಯಾಯದಲ್ಲಿ ಏಳು ಗುಡುಗುಗಳು ಮಾತಾಡುತ್ತವೆ. ತಾನು ಗುಡುಗುಗಳು ಹೇಳಿದ್ದನ್ನು ಬರೆಯಬೇಕೆನ್ನುವಷ್ಟರಲ್ಲಿ, ಆತನಿಗೆ "ಆ ಏಳು ಗುಡುಗುಗಳು ನುಡಿದದ್ದನ್ನು ನೀನು ಬರೆಯದೆ *ಗುಪ್ತವಾಗಿಡು"* ಎಂದು ಹೇಳುವ ಆಕಾಶವಾಣಿಯನ್ನು ಕೇಳಿದೆನು" ಎಂದು ಯೋಹಾನನು ಹೇಳುತ್ತಾನೆ (ಪ್ರಕಟನೆ 10:4; ಒತ್ತಿ ಹೇಳಿದ್ದು ನನ್ನದು). ಬಹುಶಃ ನಮಗೆ ಅರ್ಥಮಾಡಿಕೊಳ್ಳಲಾಗದ ಅನೇಕ ಕಾರ್ಯಗಳು ಈಗಲೂ ಇರುತ್ತವೆಂಬುದನ್ನು ನಮಗೆ ಮನದಟ್ಟು ಮಾಡುವದಕ್ಕಾಗಿ ಈ ವಾಕ್ಯಭಾಗವು ಪುಸ್ತಕದಲ್ಲಿ ಇಡಲ್ಪಟ್ಟಿರಬಹುದಾಗಿದೆ (ನೋಡಿರಿ ಧರ್ಮೋ. 29:29).

ಹಾಗಿದ್ದರೂ, ಪ್ರಕಟನೆ ಪುಸ್ತಕದಲ್ಲಿರುವ *ಕೆಲವು* ಕಾರ್ಯಗಳನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವು, ಮತ್ತು ನಾವು ಅವುಗಳನ್ನು ಅರ್ಥಮಾಡಿಕೊಳ್ಳಬೇಕೆಂದು ದೇವರು *ಅಪೇಕ್ಷಿಸುತ್ತಾನೆ*. ಈ ಪುಸ್ತಕದ ಉದ್ದೇಶವು "ಪ್ರಕಟಿಸುವದು" ಆಗಿರುತ್ತದೆಯೇ, ಹೊರತು "ಗುಪ್ತವಾಗಿಡುವದು" ಆಗಿರುವದಿಲ್ಲ. ಪುಸ್ತಕದಲ್ಲಿರುವ ಕೇಂದ್ರಿಯ ಉಪದೇಶವನ್ನು ನಾವು

ಅರ್ಥಮಾಡಿಕೊಳ್ಳಲು ಅಶಕ್ತರಾದರೆ, ನಾವು "ಈ ಪ್ರವಾದನಾವಾಕ್ಯಗಳನ್ನು ಓದುವಂಥವನೂ ಕೇಳುವಂಥವರೂ ಈ ಪ್ರವಾದನೆಯಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವಂಥವರೂ ಧನ್ಯರು" (1:3) ಎಂಬ ಆಶೀರ್ವಾದವನ್ನು ನಾವು ಹೊಂದಿಕೊಳ್ಳಲಾರೆವು. ನಮ್ಮ ಮುಂದಿರುವ ಸವಾಲು ಏನೆಂದರೆ ದೇವರು ನಮಗೆ ಕಲಿಸಲು ಇಚ್ಛಿಸುವದನ್ನು ಕಂಡುಕೊಳ್ಳುವದೇ ಆಗಿದೆ.

## ಕ್ಯಾನೋನಿಕರಣ

ಪ್ರಕಟನೆ ಪುಸ್ತಕವು ಸಭೆಗಳ ಮಧ್ಯದಲ್ಲಿ ಸುತ್ತಾಡುವದಕ್ಕೆ ಆರಂಭಗೊಂಡ ಸಮಯದಿಂದಲೂ, ಅದೊಂದು ಅಪೊಸ್ತಲನಾದ ಯೋಹಾನನ ಲೇಖನಿಯಿಂದ ಬರೆಯಲ್ಪಟ್ಟ ಪ್ರಾಮಾಣ್ಯಗೊಂಡಿರುವ ಸಂಪುಟವಾಗಿರುತ್ತದೆಂದು ಒಪ್ಪಿಕೊಳ್ಳಲ್ಪಟ್ಟಿತ್ತು. ಅದು ಹೊಸ ಒಡಂಬಡಿಕೆಯಲ್ಲಿ ಆರಂಭದಲ್ಲಿಯ ಪ್ರಾಮಾಣ್ಯಗೊಂಡಿರುವ ಪುಸ್ತಕಗಳ ಸಂಗ್ರಹದಲ್ಲಿ ಸೇರ್ಪಡೆಗೊಳಿಸಲ್ಪಟ್ಟಿತ್ತು. ಶಾಸ್ತ್ರಗಳೆಂದು ಅಂಗೀಕಾರ ಮಾಡಿಕೊಳ್ಳಲ್ಪಟ್ಟ ಪುಸ್ತಕಗಳ ಪಟ್ಟಿಯನ್ನು "ಕ್ಯಾನೋನ್" ಎಂದು ಕರೆಯಲಾಗುತ್ತದೆ. ಈ ಪದವು ಲ್ಯಾಟಿನ್ ಭಾಷೆಯ "ಮಾನದಂಡ" ಅಥವಾ "ನಿಯಮ" ಎಂಬ ಪದದಿಂದ ಬಂದದ್ದಾಗಿದೆ. ಈ ಕ್ಯಾನೋನಿನಲ್ಲಿ ಆಯಾ ಪುಸ್ತಕಗಳು ಒಬ್ಬ ಅಪೊಸ್ತಲನಿಗೆ ಸಂಬಂಧಪಟ್ಟದ್ದು ಎಂಬುದರ ಆಧಾರದಲ್ಲಿ, ಅದರಲ್ಲಿರುವ ವಿಷಯ, ಕ್ರಿಸ್ತನ ಸಭೆಗಾಗಿ ಅದರಲ್ಲಿದ್ದ ಸಾರ್ವತ್ರಿಕ ಒಪ್ಪುವಿಕೆ, ಮತ್ತು ಅವುಗಳ ದೈವಿಕ ಪ್ರೇರಣೆ ಇತ್ಯಾದಿಗಳಿಂದ ಅಂಗೀಕೃತವಾದ ಪುಸ್ತಕಗಳು ಸೇರಿರುತ್ತಿದ್ದವು. Theophilus ಪ್ರಕಟನೆ ಪುಸ್ತಕವನ್ನು ಸುಮಾರು ಕ್ರಿ.ಶ. 165ರಲ್ಲಿ ಕ್ಯಾನೋನಿನಲ್ಲಿ ಸೇರಿಸಿದ್ದನು. Muratorian ಕ್ಯಾನೋನ್ (c. ಕ್ರಿ.ಶ. 170) ಸಹ ಈ ಪುಸ್ತಕವನ್ನು ಉಲ್ಲೇಖಿಸುತ್ತದೆ. ಎಲ್ಲರೂ ಅಲ್ಲದಿದ್ದಾಗ್ಯೂ, ಬಹುತೇಕ ಆದಿ ಸಭಾನಾಯಕರು ಇದರಿಂದ ಉಲ್ಲೇಖನಗಳನ್ನು ಮಾಡಿದರು. Palmer ಹೀಗೆ ಗಮನಕ್ಕೆ ತರುತ್ತಾನೆ,

> ಹೊಸ ಒಡಂಬಡಿಕೆಯಲ್ಲಿ ಬೇರೆ ಯಾವದೇ ಪುಸ್ತಕಗಳಿಗಿಂತಲೂ ಪ್ರಕಟನೆ ಪುಸ್ತಕವು ಪ್ರಾಚೀನ ಸಭೆಯಲ್ಲಿನ ಅಧಿಕವಾದ ಮೂಲಗಳಿಂದ ಪ್ರಮಾಣೀಕರಿಸಲ್ಪಟ್ಟಿದೆ. ಪ್ರಾಚೀನ ಸಭೆಯಿಂದ ನಮಗೆ ಲಭ್ಯವಿರುವ ಅತ್ಯಂಥ ಪ್ರಾಚೀನ ಪುರಾವೆಗಳು ಪ್ರಕಟನೆ ಪುಸ್ತಕಕ್ಕೆ ವ್ಯಾಪಕವಾಗಿ ಆಧಾರವಾಗಿರುವ ಬೆಂಬಲ ಮತ್ತು ಅದು ಕ್ಯಾನೋನಿನ ಭಾಗವಾಗಿದೆ ಎಂಬುದನ್ನು ತೋರ್ಪಡಿಸುತ್ತದೆ.[15]

ಸ್ವಲ್ಪ ಕಾಲದ ಬಳಿಕ, ಕೆಲವರು ಟೀಕಿಸಿದರು ಹಾಗೂ ಅಲ್ಲದೆ ವೈಯಕ್ತಿಕ ಕಾರಣಗಳಿಗಾಗಿ ಪುಸ್ತಕವನ್ನು ತಿರಸ್ಕರಿಸಿದ್ದರು. ಉದಾಹರಣೆಗೆ, ಕೆಲವರು ಸಂಕೇತಗಳನ್ನು ಹತಾಶೆಕರವಾಗಿ ಕಂಡುಕೊಂಡರು. ಇನ್ನು ಕೆಲವರು ಶೈಲಿಗೆ ಸಂಬಂಧಿಸಿದ ಕಾರಣಗಳಿಗಾಗಿ ಪ್ರಕಟನೆಯನ್ನು ಟೀಕಿಸಿದರು. ಹೇಗೂ, ಒಟ್ಟಾರೆಯಾಗಿ, ಆದಿ ಸಭೆಯು ಇದನ್ನು ಪ್ರೇರಿತ ದೇವರ ವಾಕ್ಯವೆಂದು ಯಾವ ಪ್ರಶ್ನೆಯೂ ಇಲ್ಲದೆ ಅಂಗೀಕರಿಸಿಕೊಂಡಿತ್ತು.

ಒಬ್ಬನು ಪ್ರಕಟನೆ ಪುಸ್ತಕವನ್ನು ಓದುವಾಗ ಲೇಖಕನು ಅಧಿಕಾರಯುತವಾಗಿ (1:1–3; 22:18, 19), ಈ ಪುಸ್ತಕವು ಅಂಗೀಕರಿಸಿಕೊಳ್ಳಲ್ಪಡುವದು ಎಂಬುದರಲ್ಲಿ ಸಂಶಯವಿಲ್ಲದವನಾಗಿ ಬರೆದನೆಂಬ ವಾಸ್ತವಾಂಶದಿಂದ ಪ್ರಭಾವಿತನಾಗದೆ ಓದಲು ಸಾಧ್ಯವಿಲ್ಲ. ಅದು ಆದಿ ಸಭೆಯಿಂದ ಅಂಗೀಕರಿಸಿಕೊಳ್ಳಲ್ಪಟ್ಟಿತ್ತು, ಮತ್ತು ಅಪೊಸ್ತಲನಾದ ಯೋಹಾನನನ್ನು ಬಲ್ಲವರಾಗಿದ್ದವರಿಂದ ಇದು ಆತನಿಂದಲೇ ಬರೆಯಲ್ಪಟ್ಟಿದ್ದೆಂದು ಅಂಗೀಕರಿಸಿಕೊಳ್ಳಲ್ಪಟ್ಟಿತ್ತು. ಈ ಸಂಪುಟವು ನಿಜಕ್ಕೂ ನಮಗೋಸ್ಕರ ಪ್ರಿಯ ಶಿಷ್ಯನಾದ ಯೋಹಾನನಿಂದ

ದಾಖಲಿಸಲ್ಪಟ್ಟಿರುವಂಥ "ಯೇಸು ಕ್ರಿಸ್ತನ ಪ್ರಕಟನೆ" ಎಂಬುದಕ್ಕೆ ಈ ವಾಸ್ತವಾಂಶಗಳು ಪುರಾವೆಯನ್ನು ಒದಗಿಸುತ್ತದೆ.

## ಅರ್ಥನಿರೂಪಣೆಗೆ ಅನುಸರಿಸುವ ದಾರಿಗಳು

ತತ್ವಜ್ಞಾನಿಯಾದ Aristotleನು (384-322 ಕ್ರಿ.ಪೂ.) "ಉತ್ತನವಾಗಿ ಆರಂಭಿಸಿದರೆ ಅರ್ಧವನ್ನು ಪೂರ್ತಿಗೊಳಿಸಿದಂತೆಯೇ"[16] ಎಂಬ ನೀತಿವಚನವನ್ನು ಬರೆದನು. ಈ ಮಾತುಗಳು ಜೀವಿತದ ಅನೇಕ ಕೆಲಸಗಳ ವಿಷಯದಲ್ಲಿ ಸತ್ಯವಾಗಿರುತ್ತವೆ; ಅವುಗಳು ಪ್ರಕಟನೆ ಪುಸ್ತಕದ ಅಧ್ಯಯನದಲ್ಲಿಯಂತೂ ಎರಡರಷ್ಟು ಸತ್ಯವಾಗಿವೆ. ಒಂದು ರಾಕೆಟ್ ಸ್ಫೋಟಿಸಲ್ಪಡುವಾಗ, ಅದರ ಪಥದಲ್ಲಿ ಕೆಲವೇ ಡಿಗ್ರಿಗಳಷ್ಟು ಅತ್ತಿತ್ತ ತಿರುಗಿದರೂ ಅದು ಎಲ್ಲಿ ಹೋಗಿ ಬೀಳುತ್ತದೆ ಎಂಬುದರಲ್ಲಿ ನೂರಾರು ಮೈಲುಗಳಷ್ಟು ವ್ಯತ್ಯಾಸವಾಗಬಲ್ಲದು. ಪ್ರಕಟನೆ ಪುಸ್ತಕದ ನಿಮ್ಮ ಅಧ್ಯಯನವನ್ನು ಸರಿಯಾಗಿ ಆರಂಭಿಸಿರಿ, ಮತ್ತು ನೀವು ಗುರಿಯ ಕಡೆಗೆ ಸರಿಯಾಗಿ ತಲುಪುವಿರಿ. ಒಂದು ತಪ್ಪಾದ ಸ್ಥಾನದಿಂದ ಆರಂಭಿಸಿರಿ, ಮತ್ತು ಆಗ ನೀವು ಒಂದು ರೀತಿಯ ವಿಲಕ್ಷಣವಾದ ಕಲ್ಪನೆಗೆ ಬಂದು ತಲುಪುವಿರಿ.

ಈ ವಿಭಾಗವು ಪ್ರಕಟನೆ ಪುಸ್ತಕದ ನಮ್ಮ ಅಧ್ಯಯನದಲ್ಲಿ ನಾವು ಅನುಸರಿಸುವ ದಾರಿಯ ಕುರಿತಾಗಿರುತ್ತದೆ. ಇದಕ್ಕಿಂತಲೂ ಬೇರೆ ಇನ್ನಾವ ಹಿನ್ನಲೆಯ ವಿಷಯವೂ ಪ್ರಾಮುಖ್ಯವಾದದ್ದಲ್ಲ. ಈ ಪುಸ್ತಕದ ವಿಷಯದಲ್ಲಿ ಒಬ್ಬನು ಅನುಸರಿಸುವ ದಾರಿಯು ಆತನು ಈ ಪುಸ್ತಕದಲ್ಲಿನ ಪ್ರತಿಯೊಂದು ಅಂಶವನ್ನು ಹೇಗೆ ಅರ್ಥನಿರೂಪಣೆ ಮಾಡುತ್ತಾನೆಂಬುದರ ಮೇಲೆ ಪರಿಣಾಮವನ್ನು ಬೀರುವದಾಗಿದೆ. ಆದ್ದರಿಂದ ನಾವು ಉತ್ತಮವಾಗಿ ಆರಂಭಿಸುವದು ಕಡ್ಡಾಯವಾದದ್ದು.

ಬೈಬಲ್ ಮೌಖಿಕವಾಗಿ ಪ್ರೇರಿತವಾದದ್ದೆಂದು ನಂಬುವವರು ಪ್ರಕಟನೆ ಪುಸ್ತಕಕ್ಕೆ ನಾಲ್ಕು ವಿಧವಾದ ದಾರಿಗಳನ್ನು ಅನುಸರಿಸುತ್ತಾರೆ, ಆದಾಗ್ಯೂ ಅಸಂಖ್ಯಾತ ಬೇರೆ ಬೇರೆ ವಿಧಗಳು ಹಾಗೂ ಸಂಯೋಜನೆಗಳಿರುತ್ತವೆ. ನಾವು ಒಂದೊಂದಾಗಿ ಈ ನಾಲ್ಕು ಅನುಸರಿಸುವ ದಾರಿಗಳ ಬಗ್ಗೆ ಸಮೀಕ್ಷೆಯನ್ನು ಮಾಡುವೆವು, ಅವುಗಳಲ್ಲಿನ ಸಾಧಕಗಳನ್ನು ಮತ್ತು ಬಾಧಕಗಳನ್ನು ಎತ್ತಿ ತೋರಿಸಲಿದ್ದೇವೆ. ಬಳಿಕ ಈ ವ್ಯಾಖ್ಯಾನ ಪುಸ್ತಕದಲ್ಲಿ ನಾವು ಬಳಸುವ ಅನುಸರಿರುವ ದಾರಿಯ ಬಗ್ಗೆ ವಿವರಿಸುತ್ತೇವೆ. ಪ್ರತಿಯೊಂದು ಅನುಸರಿರುವ ದಾರಿಯನ್ನು ಕೂಲಂಕುಶವಾಗಿ ಪರಿಶೀಲಿಸಿದ ಬಳಿಕ, ಪ್ರಕಟನೆ ಪುಸ್ತಕದ ಅರ್ಥನಿರೂಪಣೆಯನ್ನು ಮಾಡುವದಕ್ಕೆ ಎರಡು ಸಾರಭೂತವಾದ ಮುಖ್ಯ ಕಾರ್ಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು:

1. *ಪುಸ್ತಕವು ಬರೆಯಲ್ಪಟ್ಟ ವೇಳೆಯಲ್ಲಿ ಒಂದು ಅರ್ಥವನ್ನು ಹೊಂದಿದ್ದಿರಲೇ ಬೇಕು.* ಯೇಸು "ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು" (1:1) ತೋರಿಸುವವನಾಗಿದ್ದನು. ಯೋಹಾನನು ಹೀಗೆ ಹೇಳಿದನು, "ಅವು [ಪುಸ್ತಕವು ಹೇಳುವಂಥ ಕಾರ್ಯಗಳು] ನೆರವೇರುವ ಸಮಯವು ಸಮೀಪವಾಗಿದೆ" (1:3). ಪುಸ್ತಕವು ಬಾಧೆಯನ್ನನುಭವಿಸುತ್ತಿದ್ದ ಕ್ರೈಸ್ತರಿಗಾಗಿ, ಅವರಿಗೆ ಆದರಣೆಯನ್ನುಂಟು ಮಾಡಲು ಮತ್ತು ನಂಬಿಗಸ್ತರಾಗಿರುವಂತೆ ಅವರನ್ನು ಪ್ರೋತ್ಸಾಹಿಸುವದಕ್ಕಾಗಿ ಬರೆಯಲ್ಪಟ್ಟಿತು. ಆದ್ದರಿಂದ, ನಮ್ಮ ಅಧ್ಯಯನದಲ್ಲಿ, ನಾವು ಅನೇಕ ಸಾರಿ "ಪ್ರಕಟನೆ ಪುಸ್ತಕವು ಈ ದಾರಿಯನ್ನನುಸರಿಸಿ ಅರ್ಥೈಸಲ್ಪಟ್ಟರೆ, ಅದು ಹಿಂಸೆಗೊಳಗಾಗಿದ್ದ ಪ್ರಥಮ ಶತಮಾನದ ಕ್ರೈಸ್ತರಿಗೆ ಯಾವ ಅರ್ಥವನ್ನು ಹೊಂದಿತ್ತು?" ಎಂದು ಕೇಳುವವರಾಗಿರುತ್ತೇವೆ.

2. *ಈ ಪುಸ್ತಕವು ಈ ಕಾಲಕ್ಕೆ ಅರ್ಥವನ್ನು ಹೊಂದಿರಲೇ ತಕ್ಕದ್ದಾಗಿದೆ.* ಈ ಪುಸ್ತಕವು

ಒಂದು ಸಾರ್ವತ್ರಿಕ ಮತ್ತು ಸರ್ವಕಾಲಕ್ಕೂ ನೆಲೆಗೊಳ್ಳುವ ಸಂದೇಶವನ್ನು ಹೊಂದಿದೆ: “ಈ ಪ್ರವಾದನಾವಾಕ್ಯಗಳನ್ನು ಓದುವವನೂ ಕೇಳುವಂಥವರೂ ಈ ಪ್ರವಾದನೆಯಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವವರೂ” ಆಶೀರ್ವಾದ ಹೊಂದುವರು ಎಂದು ಘೋಷಿಸಲ್ಪಟ್ಟಿದೆ (1:3). “ದೇವರಾತ್ಮನು ಸಭೆಗಳಿಗೆ ಹೇಳುವದನ್ನು ಕಿವಿಯುಳ್ಳವನು ಕೇಳಲಿ” ಎಂದು ಬೇಡಿಕೊಳ್ಳಲ್ಪಟ್ಟಿದ್ದಾನೆ (2:7). ಪುಸ್ತಕದ ಮುಕ್ತಾಯದ ಭಾಗದಲ್ಲಿ, “ಈ ಪುಸ್ತಕದ ಪ್ರವಾದನಾವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ” ಒಂದು ವಿಶೇಷವಾದ ಬುದ್ಧಿವಾದವು ಹೇಳಲ್ಪಟ್ಟಿದೆ (22:18). ಹೀಗೆ, ನಮ್ಮ ಅಧ್ಯಯನದ ಪ್ರತಿಯೊಂದು ವಿಭಾಗದಲ್ಲಿಯೂ, ನಾವು ಹೀಗೆ ಕೇಳಿಕೊಳ್ಳಬೇಕು, “ಪ್ರಕಟನೆ ಪುಸ್ತಕವು ಈ ವಿಧವಾಗಿ ಅರ್ಥನಿರೂಪಣೆ ಮಾಡಲ್ಪಡುವದಾದರೆ, ಈ ದಿನದಲ್ಲಿ ಜೀವಿಸುವವರಾದ ನಮಗೆ ಇದು ಯಾವ ಅರ್ಥವನ್ನು ಹೊಂದಿರುವದು?”


## ಭವಿಷ್ಯವಾದದ ಅನುಸರಣಾ ದಾರಿ

*ಈ ಅನುಸರಣಾ ದಾರಿಯ ಅರ್ಥವಿವರಣೆ.* ಪ್ರಕಟನೆ ಪುಸ್ತಕವು ಬರೆಯಲ್ಪಡುವ ವೇಳೆಯಲ್ಲಿ ಅದು ಬಣ್ಣಿಸುವ ಬಹುಪಾಲು ಘಟನೆಗಳು ದೂರದ ಭವಿಷ್ಯಕಾಲದಲ್ಲಿ ಸಂಭವಿಸುವಂಥವುಗಳಾಗಿದ್ದವೆಂಬ ಅಭಿಪ್ರಾಯವನ್ನು ಭವಿಷ್ಯವಾದದ ದಾರಿಯು ಹೊಂದಿರುತ್ತದೆ. ವಾಸ್ತವದಲ್ಲಿ, *ಈ ದಿನವು ಸಹ* ಪ್ರಕಟನೆ ಪುಸ್ತಕವು ಬಹುಪಾಲು *ಈಗಲೂ* ಭವಿಷ್ಯದಲ್ಲಿ ಸಂಭವಿಸುವ ಘಟನೆಗಳನ್ನು ಬಣ್ಣಿಸುತ್ತದೆಂದು ಭವಿಷ್ಯವಾದಿಗಳು ಕಲಿಸುತ್ತಾರೆ. ವಿಶೇಷವಾಗಿ, ಈ ದಾರಿಯು ಹೇಳುವದೇನೆಂದರೆ ಬಹುಪಾಲು ಪುಸ್ತಕವು ಕ್ರಿಸ್ತನ ಎರಡನೆಯ ಬರೋಣದ ತಕ್ಷಣದಲ್ಲೇ ಸಂಭವಿಸುವ ಘಟನೆಗಳನ್ನೊಳಗೊಂಡಿದೆ ಎಂಬದೆ. ಈ ದೃಷ್ಟಿಕೋನವು ಕೆಲವು ಸಾರಿ “ಅಂತಿಮಗತಿ” ಶಾಸ್ತ್ರದ ದೃಷ್ಟಿಕೋನ ಎಂದು ಸಹ ಕರೆಯಲ್ಪಡುತ್ತದೆ ಯಾಕೆಂದರೆ ಪ್ರಕಟನೆಯ ಪುಸ್ತಕ ಬಹುಪಾಲು ಘಟನೆಗಳು ಯುಗಾಂತ್ಯಕ್ಕೆ ಸಂಬಂಧಿಸಿರುತ್ತವೆಂದು ಇದು ಹೇಳುವದಾಗಿದೆ. “ಅಂತಿಮಗತಿ ಶಾಸ್ತ್ರ” ಎಂಬುದು “ಕಡೇ ಸಂಗತಿಗಳ ಅಧ್ಯಯನ” ಆಗಿರುತ್ತದೆ.

ಭವಿಷ್ಯವಾದದಲ್ಲಿ ವ್ಯತ್ಯಾಸಗಳಿರುತ್ತವೆ, ಆದರೆ ಅನೇಕ ವರ್ಷಗಳಿಂದ ಪ್ರಮುಖ ಸ್ಥಾನವನ್ನು ಹಿಡಿದುಕೊಂಡಿರುವದೆಂದರೆ *ಸಹಸ್ರವರ್ಷಪೂರ್ವಾಡಳಿತ* ನಿಲುವು ಆಗಿರುತ್ತದೆ. “ಪೂರ್ವ” ಅಂದರೆ “ಮುಂಚೆ,” ಮತ್ತು “ಸಹಸ್ರ” ಎಂಬುದು ಒಂದು ಸಾವಿರ ವರ್ಷಗಳನ್ನು ಸೂಚಿಸುತ್ತದೆ. ಈ ಪದವು *ಒಂದು ಸಾವಿರ-ವರ್ಷ* (ಸಹಸ್ರ) ಆಡಳಿತಕ್ಕೆ ಮುಂಚೆ (ಪೂರ್ವ) ಯೇಸುವು ಹಿಂದಿರುಗಿ ಬರುವನು ಎಂಬುದನ್ನು ಸೂಚಿಸುತ್ತದೆ. ವಿಶೇಷವಾಗಿ, ಬಹುಪಾಲು ಸಹಸ್ರವರ್ಷಪೂರ್ವಾಡಳಿತ ವಾದಿಗಳು ನಂಬುವದೇನೆಂದರೆ ಯೇಸು ಭೂಮಿಗೆ ಹಿಂದಿರುಗಿ ಬರುವನು ಮತ್ತು ಒಂದು ಸಾವಿರ ವರ್ಷಗಳ ಕಾಲ ಯೆರೂಸಲೇಮಿನಲ್ಲಿ ಆಳ್ವಿಕೆ ಮಾಡುವನು ಎಂಬದೆ (20:2-5ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). ಈ ವಿಧವಾದ ಸಹಸ್ರವರ್ಷಪೂರ್ವಾಡಳಿತವಾದವು “ದೈವವ್ಯವಸ್ಥೆವಾದ” ಎಂದು ಕರೆಯಲ್ಪಡುತ್ತದೆ. ಈ ದೃಷ್ಟಿಕೋನದ ಪ್ರಕಾರ, ಸಾವಿರ ವರ್ಷಗಳ ಆಳ್ವಿಕೆಯ ಬಳಿಕ ಎಲ್ಲರಿಗೂ ಸಂಭವಿಸುವ ಒಂದು ಸಾಮಾನ್ಯ ನ್ಯಾಯತೀರ್ಪು ಬರುವದು, ಆ ಕಾಲದಲ್ಲಿ ಜನರನ್ನು ಪರಲೋಕ ಅಥವಾ ನರಕಕ್ಕೆ ಕಳುಹಿಸಲಾಗುವದು. ಕೆಲವು ಸಹಸ್ರವರ್ಷಪೂರ್ವಾಡಳಿತ ವಾದಿಗಳು ಅಂತಿಮ ನ್ಯಾಯತೀರ್ಪು ಕೇವಲ ದುಷ್ಟರಿಗೆ ಮಾತ್ರವೇ ಸಂಭವಿಸುವದೆಂದು ಕಲಿಸುತ್ತಾರೆ.

ನಾವು ಪ್ರಾಥಮಿಕವಾಗಿ ಈ ವಿಧವಾಗಿ ಅರ್ಥೈಸುವ ದಾರಿಯು ಹೇಗೆ ಪ್ರಕಟನೆ ಪುಸ್ತಕದ ಅರ್ಥನಿರೂಪಣೆಯ ಮೇಲೆ ಪರಿಣಾಮ ಬೀರುವದೆಂಬುದರ ಬಗ್ಗೆ ಕಳಕಳಿ ಹೊಂದಿದ್ದೇವೆ.

ಸಹಸ್ರವರ್ಷಪೂರ್ವಾಡಳಿತ ವಾದಿಗಳು ಅನೇಕ ವಿವರಣೆಗಳಲ್ಲಿ ತಮ್ಮೊಳಗೆ ಏಕಾಭಿಪ್ರಾಯ ಹೊಂದಿರುವದಿಲ್ಲ, ಆದರೆ, ಕೆಲವು ವ್ಯತ್ಯಾಸಗಳೊಂದಿಗೆ, ಬಹಳಷ್ಟು ಮಂದಿ ಈ ಕೆಳಗೆ ಕೊಡಲಾಗಿರುವ ಪ್ರಕಟನೆ ಪುಸ್ತಕದ ಸಂಕ್ಷಿಪ್ತ ವಿವರಣೆಯನ್ನು ಅನುಸರಿಸುತ್ತಾರೆ. ನಾವು ಅದನ್ನು ನಿರಾಕರಿಸಲು-ಅದು ಸುಳ್ಳು ಎಂಬುದನ್ನು ಸೂಚಿಸುವದಕ್ಕೆ- ಕರ್ಣರೇಖೆಯನ್ನು (ಒಂದು ಮೂಲೆಯಿಂದ ಎದುರು ಮೂಲೆಗೆ ಎಳೆದಿರುವ ಗೆರೆ) ಎಳೆದಿದ್ದೇವೆಂಬುದನ್ನು ಗಮನಿಸಿರಿ. ಆ ರೇಖಾನಕ್ಷೆಯ ಒಂದು ಮೇಲ್ನೋಟ ಈ ಕೆಳಗಿನಂತಿದೆ.




*"ಯೆಹೂದ್ಯರ ತಿರಸ್ಕಾರ."* ಯೇಸು ಒಂದು ಭೂಲೋಕದ ರಾಜ್ಯವನ್ನು ಸ್ಥಾಪಿಸುವದಕ್ಕೆ ಬಂದನೆಂದು, ಆದರೆ ಆತನು ಹಾಗೆ ಮಾಡುವದಕ್ಕಾಗಲಿಲ್ಲ ಯಾಕೆಂದರೆ ಯೆಹೂದ್ಯರು ಒಟ್ಟಾರೆ ಜನಾಂಗವಾಗಿ ಆತನನ್ನು ತಿರಸ್ಕರಿಸಿದ್ದರು ಎಂದು ಬಹುಪಾಲು ಸಹಸ್ರವರ್ಷಪೂರ್ವಾಡಳಿತ ವಾದಿಗಳು ಕಲಿಸುತ್ತಾರೆ. ಹೀಗೆ ಯೇಸುವಿನ ರಾಜ್ಯದ ಯೋಜನೆಗಳು ಮುಂದೂಡಲ್ಪಟ್ಟವು ಎಂದು ಅವರು ನಂಬುತ್ತಾರೆ. ರೇಖಾನಕ್ಷೆಯುದ್ದಕ್ಕೂ ಸಾಗುವ ದಪ್ಪವಾದ, ಕಂದು ಬಣ್ಣದ ಗೆರೆಗಳು, ಈ ದೃಷ್ಟಿಕೋನದ ಪ್ರಕಾರವಾಗಿ ದೇವರ ಪ್ರವಾದನಾತ್ಮಕ ಯೋಜನೆಗಳನ್ನು ಮತ್ತು ಉದ್ದೇಶಗಳನ್ನು ಪ್ರತಿನಿಧಿಸುತ್ತವೆ.

*"ಸಭಾ ಯುಗ."* ಯೇಸು ತನ್ನ ರಾಜ್ಯವನ್ನು ಸ್ಥಾಪಿಸುವದಕ್ಕಾಗಲಿಲ್ಲವಾದ್ದರಿಂದ, ಆತನು ಮುಂದೆ ರಾಜ್ಯವನ್ನು ಸ್ಥಾಪಿಸುವದಕ್ಕೆ ಶಕ್ತನಾಗುವ ವರೆಗೆ ಸಭೆಯನ್ನು ಒಂದು ತಾತ್ಕಾಲಿಕ ವ್ಯವಸ್ಥೆಯನ್ನಾಗಿ ಏರ್ಪಡಿಸಿದನು ಎಂದು ಸಹಸ್ರವರ್ಷಪೂರ್ವಾಡಳಿತ ವಾದಿಗಳು ನಂಬುತ್ತಾರೆ. ಒಂದು ಸಾಮಾನ್ಯ ನಿಮಯವಾಗಿ, ಸಹಸ್ರವರ್ಷಪೂರ್ವಾಡಳಿತ ವಾದಿಗಳು ಸಭೆ ಮತ್ತು ರಾಜ್ಯದ ನಡುವೆ ವ್ಯತ್ಯಾಸವನ್ನು ಮಾಡುತ್ತಾರೆ. ನಕ್ಷೆಯಲ್ಲಿ "ಸಭಾ ಯುಗ"ದ ಸುತ್ತಲು ಗೆರೆಗಳು ಭಾಗಿಕೊಂಡಿರುವದು ದೇವರ ಪ್ರವಾದನಾತ್ಮಕ ಯೋಜನೆಗಳು ಹಾಗೂ ಉದ್ದೇಶಗಳು ತಾತ್ಕಾಲಿಕವಾಗಿ ಅಡ್ಡಿಪಡಿಸಲ್ಪಟ್ಟವು ಎಂಬುದನ್ನು ಸೂಚಿಸುತ್ತದೆ.

*ಅಧ್ಯಾಯಗಳು 1-3: ಪ್ರಕಟನೆ ಪುಸ್ತಕದ 1 ರಿಂದ 3 ಅಧ್ಯಾಯಗಳು ಸಭೆಯು ಅಸ್ತಿತ್ವದಲ್ಲಿರುವ ಹೆಚ್ಚುಕಡಿಮೆ ಎರಡು ಸಾವಿರ ವರ್ಷಗಳ ಕುರಿತು ಹೇಳುತ್ತವೆಂದು ಸಹಸ್ರವರ್ಷಪೂರ್ವಾಡಳಿತ ವಾದಿಗಳು ನಂಬುತ್ತಾರೆ.* ಏಳು ಸಭೆಗಳು ಸಭೆಯ ಏಳು ಯುಗಗಳನ್ನು ಪ್ರತಿನಿಧಿಸುತ್ತವೆಂದು ಸಹಸ್ರವರ್ಷಪೂರ್ವಾಡಳಿತ ವಾದಿಗಳು ಉಪದೇಶಿಸುತ್ತಾರೆ. ಇನ್ನು ಕೆಲವು ಸಹಸ್ರವರ್ಷಪೂರ್ವಾಡಳಿತ ವಾದಿಗಳು ಪ್ರಕಟನೆ ಪುಸ್ತಕವು ಬರೆಯಲ್ಪಡುವ ವೇಳೆ ಏಳು ಸಭೆಯು ನಿಜವಾಗಿಯೂ ಅಸ್ತಿತ್ವದಲ್ಲಿದ್ದವು-ಮತ್ತು ಅವುಗಳು

ಅಂದಿನ ಮತ್ತು ಇಂದಿನ ಸಭೆಗಳ ಪ್ರಾತಿನಿಧಿಕವಾಗಿರುತ್ತವೆ-ಎಂದು ಒಪ್ಪಿಕೊಳ್ಳುತ್ತಾರೆ.

"*ಯೆಹೂದ್ಯರ ಅಂಗೀಕಾರ.*" ಒಂದು ಹಂತದಲ್ಲಿ, ಯೆಹೂದ್ಯರು ಒಟ್ಟಾರೆಯಾಗಿ ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿಕೊಳ್ಳುವರೆಂದು, ಮತ್ತು ಆಗದ ದೇವರ "ಪ್ರವಾದನಾತ್ಮಕ ಕ್ಷಣಗಣನೆ" ಆರಂಭಗೊಳ್ಳುವದೆಂದು ಅವರು ಮುಂತಿಳಿಸುತ್ತಾರೆ.

*"ಎತ್ತಲ್ಪಡುವಿಕೆ ಮತ್ತು ಸಂಕಟಕಾಲ (7 ವರ್ಷಗಳು)."* ಸಹಸ್ರವರ್ಷಪೂರ್ವಾಡಳಿತ ವಾದಿಗಳು ನಂಬುವದೇನೆಂದರೆ ಯೆಹೂದ್ಯರು ಅಂಗೀಕರಿಸುವಿಕೆಯು ಏಳು-ವರ್ಷಗಳ ಕಾಲಾವಧಿಯನ್ನು ಆರಂಭಗೊಳಿಸುವದು ಎಂಬದೆ. ವಿಶ್ವಾಸಿಗಳಿಗಾದರೋ, ಇದು ಎತ್ತಲ್ಪಡುವಿಕೆಯೊಂದಿಗೆ, ನಂಬಿಗಸ್ತರು ಯೇಸುವನ್ನು ಸಂಧಿಸುವದಕ್ಕೆ ಅಂತರಿಕ್ಷಕ್ಕೆ ಏರಿ ಹೋಗುತ್ತಿರುವಾಗ ಆರಂಭಗೊಳ್ಳುವದು. "ಎತ್ತಲ್ಪಡುವಿಕೆ [rapture]" ಎಂಬ ಪದವು ಲ್ಯಾಟಿನ್ ಪದದಿಂದ ಬಂದದ್ದಾಗಿದ್ದು "ಮೇಲಕ್ಕೆ ಒಯ್ಯಲ್ಪಡುವದು" ಎಂಬುದನ್ನು ಸೂಚಿಸುತ್ತದೆ. ಸಹಸ್ರವರ್ಷಪೂರ್ವಾಡಳಿತ ವಾದಿಗಳು ಈ ಪದವನ್ನು ನಾಮಪದ ಮತ್ತು ಕ್ರಿಯಾಪದ ಎರಡನ್ನಾಗಿಯೂ ಬಳಸುತ್ತಾರೆ: ಯೇಸು ತನ್ನ ಜನರನ್ನು "ಎತ್ತಿಕೊಳ್ಳುವನು" (ಅವರನ್ನು ಮೇಲಕ್ಕೆ ಹಿಡಿದುಕೊಳ್ಳುವನು) ಮತ್ತು ಅವರು ಆತನೊಂದಿಗೆ ಎತ್ತಲ್ಪಡುವಿಕೆ ವೇಳೆ ಆತನೊಂದಿಗೆ ಇರುವರು ಎಂದು ಅವರು ಹೇಳುತ್ತಾರೆ. ಅವರು ಹೇಳುವದೇನೆಂದರೆ, ನಂಬಿಗಸ್ತರು (ವಿಶ್ವಾಸಿಗಳು) ಹೊರಟು ಹೋದ ಬಳಿಕ, ಭೂಮಿಯ ಮೇಲೆ ಏಳು ವರ್ಷಗಳ ಕಾಲಾವಧಿಯ ಸಂಕಟಕಾಲವು ಆರಂಭಗೊಳ್ಳುವದು. ಭೂಮಿಯ ಮೇಲೆ ಅಸ್ತವ್ಯಸ್ತತೆ, ಗೋಳಾಟಗಳು ಆಳ್ವಿಕೆ ಮಾಡುತ್ತಿರುವ ವೇಳೆ ಯೇಸು ಹಾಗೂ ಆತನ ಹಿಂಬಾಲಕರು ಅಂತರಿಕ್ಷದಲ್ಲಿ ಸುತ್ತಾಡುತ್ತಿರುವರೆಂದು ಇವರು ಎದುರು ನೋಡುತ್ತಾರೆ.

*ಅಧ್ಯಾಯಗಳು 4-19: ಸಹಸ್ರವರ್ಷಪೂರ್ವಾಡಳಿತ ವಾದಿಗಳು ಪ್ರಕಟನೆ ಪುಸ್ತಕದ 4 ರಿಂದ 19 ಅಧ್ಯಾಯಗಳು ಈ ಏಳು ವರ್ಷಗಳ ಕಾಲದ ವಿವರಗಳನ್ನು ಕೊಡುತ್ತವೆ, ಈ ವಿಭಾಗದ ಬಹುಪಾಲು ಭಾಗವು (6 ರಿಂದ 19 ಅಧ್ಯಾಯಗಳು) ಸಂಕಟಕಾಲದ ಕುರಿತು ತಿಳಿಸುತ್ತವೆಂದು ನಂಬುತ್ತಾರೆ.*

*"ಭೂಮಿಯ ಮೇಲೆ ಯೇಸುವಿನ ಆಳ್ವಿಕೆ (1,000 ವರ್ಷಗಳು)."* ಏಳು ವರ್ಷಗಳ ಅಂತ್ಯದಲ್ಲಿ, ಯೇಸು ಭೂಮಿಗೆ ಹಿಂದಿರುಗಿ ಬರುವನು, ತನ್ನ ವೈರಿಗಳನ್ನು ಸೋಲಿಸುವನು, ಮತ್ತು ಒಂದು ಭೂಲೋಕದ ರಾಜ್ಯವನ್ನು ಸ್ಥಾಪನೆ ಮಾಡುವನೆಂದು ಸಹಸ್ರವರ್ಷಪೂರ್ವಾಡಳಿತ ವಾದಿಗಳು ನಂಬುತ್ತಾರೆ. ಆತನು ಯೆರೂಸಲೇಮ್ ಪಟ್ಟಣದಲ್ಲಿ ಒಂದು ಸಾವಿರ ವರ್ಷಗಳ ಕಾಲ ಭೂಲೋಕದ ಸಿಂಹಾಸನದ ಮೇಲೆ ಆಳ್ವಿಕೆ ಮಾಡುವನೆಂದು ಅವರು ಎದುರು ನೋಡುತ್ತಾರೆ.

*ಒಂದು* "*ಸ್ವಲ್ಪ ಕಾಲ.*" ಸಾವಿರ ವರ್ಷಗಳ ಬಳಿಕ ಒಂದು ಕ್ಲುಪ್ತ ಕಾಲಾವಧಿಯು ಬರಲಿದ್ದು ಅದರಲ್ಲಿ ಸೈತಾನನಿಗೆ ಒಂದು ಬಲಿಷ್ಠ ಸೈನ್ಯವನ್ನು ಕೂಡಿಸಿಕೊಳ್ಳುವಂತೆ ಅನುಮತಿ ಕೊಡಲಾಗುವದೆಂದು ಅವರು ನಂಬುತ್ತಾರೆ. ಈ "ಸ್ವಲ್ಪ ಕಾಲ" ಮುಗಿದ ಬಳಿಕ, ಯೇಸು ಸೈತಾನನನ್ನೂ ಆತನ ದುಷ್ಟ ಶಕ್ತಿಗಳನ್ನೂ ಒಂದು ಯುದ್ಧದಲ್ಲಿ ಸೋಲಿಸಲಿರುವನು.

*"ನ್ಯಾಯತೀರ್ಪು."* ಸಹಸ್ರವರ್ಷಪೂರ್ವಾಡಳಿತವಾದಿಗಳ ಪ್ರಕಾರವಾಗಿ, ಯೇಸು ಮತ್ತು ಸೈತಾನನ ನಡುವಿನ ಯುದ್ಧದ ನಂತರ ನ್ಯಾಯತೀರ್ಪಿನ ದಿನವು ಬರುವದು.

*ಅಧ್ಯಾಯ 20: ಈ ಅಧ್ಯಾಯವು ಸಾವಿರ-ವರ್ಷ ಆಳ್ವಿಕೆ, "ಸ್ವಲ್ಪ ಕಾಲ," ಮತ್ತು ನ್ಯಾಯತೀರ್ಪಿನ ದಿನ ಇವುಗಳ ಕುರಿತು ಹೇಳುತ್ತದೆಂದು ಅವರು ನಂಬುತ್ತಾರೆ.*

*"ನಿತ್ಯತ್ವ."* ನ್ಯಾಯತೀರ್ಪಿನ ದಿನದ ತರುವಾಯ ನಿತ್ಯತ್ವ ಬರುತ್ತದೆ, ಆಗ ನೀತಿವಂತರ

ಪರಲೋಕದಲ್ಲಿಯೂ ಅನೀತಿವಂತರು ನರಕದಲ್ಲಿಯೂ ಇರುವರು.

*ಅಧ್ಯಾಯ 21; 22: ಪ್ರಕಟನೆ ಪುಸ್ತಕದ ಈ ಎರಡು ಅಧ್ಯಾಯಗಳು ಪರಲೋಕದ ಕುರಿತು ಹೇಳುತ್ತವೆ, ಅಲ್ಲಿ ನೀತಿವಂತರು ನಿತ್ಯನಿತ್ಯವಾಗಿ ಜೀವಿಸುವರೆಂದು ಇವರು ನಂಬುತ್ತಾರೆ.*

ಬೈಬಲಾಧಾರಿತ ಉಪದೇಶದ ಪರಿಚಯವಿರುವವರು ಈ ದೃಶ್ಯಾವಳಿಯಲ್ಲಿ ಅನೇಕ ದೋಷಗಳನ್ನು ಕಂಡು ಹಿಡಿಯುವರು, ಹೇಗೂ, ಈ ಕ್ಷಣಕ್ಕಾದರೋ, ಈ ಅರ್ಥೈಸುವ ದಾರಿಯಲ್ಲಿರುವ ಪ್ರಮುಖ ತಪ್ಪಿನ ವಿಷಯದಲ್ಲಿ ಕಳಕಳಿ ಹೊಂದಿದ್ದೇವೆ. ಇದನ್ನು ಕುರಿತು ಆಲೋಚಿಸಿರಿ: ಪ್ರಕಟನೆ ಪುಸ್ತಕದ ಮೂರು ಅಧ್ಯಾಯಗಳು ಹೆಚ್ಚುಕಡಿಮೆ ಎರಡು ಸಾವಿರ ವರ್ಷಗಳ ವಿವರಗಳನ್ನೊಳಗೊಂಡಿದ್ದು, *ಹದಿನಾರು ಅಧ್ಯಾಯಗಳು ಕೇವಲ ಏಳು ವರ್ಷಗಳ ವಿವರಗಳನ್ನು ಕೊಡುತ್ತವೆ,* ಮತ್ತು ಒಂದು ಸಾವಿರ ವರ್ಷಗಳ ಬಗ್ಗೆ ಕೇವಲ ಒಂದು ಅಧ್ಯಾಯದಲ್ಲಿ ಮಾತ್ರವೇ ಹೇಳಿ ಮುಗಿಸಲಾಗಿರುತ್ತದೆಂದು ಸಹಸ್ರವರ್ಷಪೂರ್ವಾಡಳಿತ ವಾದಿಗಳು ಉಪದೇಶಿಸುತ್ತಾರೆ! ಬಹುಪಾಲು ಸಹಸ್ರವರ್ಷಪೂರ್ವಾಡಳಿತವಾದಿಗಳ ಪ್ರಕಾರ, ಪ್ರಕಟನೆ ಪುಸ್ತಕವು ಪ್ರಾಥಮಿಕವಾಗಿ ಏಳು ವರ್ಷಗಳ ಸಂಕಟ ಕಾಲದಲ್ಲಿ ಭೂಮಿಯ ಮೇಲಿರುವ ಅಸ್ತವ್ಯಸ್ತತೆಯ ಕುರಿತು ಮಾತ್ರವೇ ಆಗಿರುತ್ತದೆ.

ಪ್ರತಿಯೊಂದು ಅರ್ಥೈಸುವ ದಾರಿಯ ಕುರಿತು ಚರ್ಚಿಸುವ ವೇಳೆ, ಆ ನಿರ್ದಿಷ್ಟವಾದ ಪ್ರಕಾರದ ಅರ್ಥನಿರೂಪಣೆಯನ್ನು ಗುರುತಿಸುವಂತೆ ವಾಚಕನಿಗೆ ಸಹಾಯ ಮಾಡುವದಕ್ಕಾಗಿ ಕೆಲವು ಮೂಲಗಳ ಬಗ್ಗೆ ಪ್ರಸ್ತಾಪಿಸಲಾಗುವದು. ಇಷ್ಟೊಂದು ವರ್ಷಗಳಿಂದಲೂ, ಭವಿಷ್ಯವಾದದ ಅಭಿಪ್ರಾಯವನ್ನು ಹರಡಿಸುವದಕ್ಕೆ Scofield Reference Bible ಒಂದು ಪ್ರಮುಖ ಸಾಧನವಾಗಿರುತ್ತದೆ.[17] ಭವಿಷ್ಯವಾದದ ಅಭಿಪ್ರಾಯದ ಕುರಿತು ಅತ್ಯಂಥ ಜನಪ್ರಿಯ ಪ್ರತಿಪಾದನೆ ಎಂದರೆ Hal Lindsey ಬರೆದಿರುವ *The Late Great Planet Earth* ಎಂಬ ಪುಸ್ತಕವಾಗಿದೆ.[18]

*ಈ ಅರ್ಥೈಸುವ ದಾರಿಯ "ಬಲಗಳು."* ಭವಿಷ್ಯವಾದವು ಎಷ್ಟೊಂದು ಸಮಸ್ಯೆಗಳಿಂದ ಕೂಡಿರುತ್ತದೆಂದರೆ ನಾವು "ಬಲಗಳು" ಎಂಬುದನ್ನು ಉದ್ಧರಣ ಚಿಹ್ನೆಯಲ್ಲಿಡಬೇಕಾಗುತ್ತದೆ. ಭವಿಷ್ಯವಾದವು ಒಂದು ಜನಪ್ರಿಯವಾಗಿರುವ ದಾರಿಯಾಗಿದೆ; ಬೈಬಲಿನ ಅಸ್ಪಷ್ಟವಾದ ಪುಟಗಳಲ್ಲಿ ಇಂದಿನ ಸುದ್ದಿಪತ್ರಿಕೆಗಳ ತಲೆಬರಹಗಳನ್ನು ಹುಡುಕುವ ಕುತೂಹಲ ಹೊಂದಿರುವವರಿಗೆ ಆಕರ್ಷಕವೇನಿಸುತ್ತದೆ. ಈ ದಾರಿಯು ಸಹ ಈ ದಿನಕ್ಕಾಗಿ ಒಂದು ಸಂದೇಶವನ್ನು ಹೊಂದಿದೆ: ಬಹುಪಾಲು ದೈವಿಕವ್ಯವಸ್ಥೆಯ ಸುವಾರ್ತಿಕರಿಂದ ಬೋಧಿಸಲ್ಪಟ್ಟಿರುವ ಪ್ರಕಾರ, ಸಂದೇಶವು "ಪಶ್ಚಾತ್ತಾಪ ಪಡಿರಿ! ಯೇಸು ಶೀಘ್ರವೇ ಬರಲಿದ್ದಾನೆ!" ಎಂದಾಗಿರುತ್ತದೆ.

ತಾವು "ಪ್ರಕಟನೆ ಪುಸ್ತಕವನ್ನು ಅಕ್ಷರಶಃ" ಎಂದು ಅರ್ಥಮಾಡಿಕೊಳ್ಳುವದರಲ್ಲಿಯೇ ತಮ್ಮ ಬಲವು ಇರುತ್ತದೆಂದು ಭವಿಷ್ಯವಾದಿಗಳು ನಂಬುತ್ತಾರೆ. ನಮ್ಮಲ್ಲಿ ಬಹಳಷ್ಟು ಮಂದಿ ಮಾಡುವದಕ್ಕಿಂತಲೂ ಅಧಿಕವಾಗಿ ಇವರು ಪ್ರಕಟನೆ ಪುಸ್ತಕದ ಆಯ್ದ ಭಾಗಗಳನ್ನು ಅಕ್ಷರಶಃವಾಗಿ ತೆಗೆದುಕೊಳ್ಳುತ್ತಾರೆಂಬುದು ಸತ್ಯವಾದದ್ದು; ಅದಕ್ಕೊಂದು ಪ್ರಮುಖವಾದ ಉದಾಹರಣೆಯೆಂದರೆ ಪ್ರಕಟನೆ 20ನೇ ಅಧ್ಯಾಯದ "ಸಾವಿರ ವರ್ಷಗಳು." ಹೇಗೂ, ನಾವು ಹಲವಾರು ಪ್ರಶ್ನೆಗಳನ್ನ ಮುಂದಿಡಬಹುದಾಗಿದೆ: ಒಬ್ಬನು ಸಾಂಕೇತಿಕ ಭಾಷೆಯನ್ನು ಅಕ್ಷರಶಃ ಅರ್ಥನಿರೂಪಣೆ ಮಾಡುವದು ಒಂದು ಬಲದ ಸೂಚನೆಯೋ, ಅಥವಾ ಅರ್ಥನಿರೂಪಣೆ ಮಾಡುವದಕ್ಕೆ ಆತನಿಗಿರುವ ಕುಶಲತೆಗಳ ಒಂದು ದುರ್ಬಲತೆಗೆ ಸೂಚನೆಯೋ? ಪುನಃ, ಒಬ್ಬನು ತನ್ನ ದೈವಶಾಸ್ತ್ರೀಕವಾದ ನಿಲುವನ್ನು ಸಾಂಕೇತಿಕ ಚಿತ್ರದ ಮೇಲೆ

ಆಧಾರಗೊಳಿಸುವದನ್ನು ಅವಶ್ಯಕವೆಂದು ಕಂಡುಕೊಳ್ಳುವದು ಒಂದು ಬಲದ ಸೂಚನೆಯೋ, ಅಥವಾ ಆತನ ನಿಲುವು ದುರ್ಬಲವಾದದ್ದೆಂಬುದಕ್ಕೆ ಅದೊಂದು ಸೂಚನೆಯೋ?

ಈ ಮುಂಚೆ ಗಮನಿಸಿರುವ ಪ್ರಕಾರ, ಅಂತ್ಯಕಾಲಿಕ ಸಾಹಿತ್ಯದ ಒಂದು ಗುಣಸ್ವಭಾವವೆಂದರೆ ಅದು *ಸಂಕೇತಗಳ ಮೂಲಕ* ಕಲಿಸುತ್ತದೆ. ಸಾಂಕೇತಿಕ ಭಾಷೆಯೂ ಸೇರಿದಂತೆ, ಆಲಂಕಾರಿಕ ಭಾಷೆಯನ್ನು ಅರ್ಥನಿರೂಪಿಸುವದಕ್ಕೆ ಮುಖ್ಯ ದಾರಿಯೆಂದರೆ, ಅದನ್ನು ಅಕ್ಷರಶಃ ಎಂಬಂತೆ ಕಾಣಬಾರದು, ಆದರೆ ಬದಲಾಗಿ ಅದನ್ನು *ಸ್ವಾಭಾವಿಕವಾಗಿಯೇ* ಅರ್ಥೈಸಿಕೊಳ್ಳಬೇಕು-ಬೇರೆ ಮಾತುಗಳಲ್ಲಿ ಹೇಳುವದಾದರೆ, ಅದನ್ನು ಆಲಂಕಾರಿಕ ಭಾಷೆಯ *ಹಾಗೆಯೇ* ಕಾಣಬೇಕು. ಯೇಸುವು "ನಾನೇ ಬಾಗಲು" (ಯೋಹಾನ 10:9) ಎಂದು ಹೇಳಿದನು, ಆದರೆ ನಾವು ಆತನ ಹೇಳಿಕೆಯನ್ನು *ಅಕ್ಷರಶಃ* ತೆಗೆದುಕೊಳ್ಳುವದಿಲ್ಲ. ಅಂದರೆ, ಯೇಸು ಒಂದು ಬಾಗಲು ಪಟ್ಟಿಗೆ ಕೀಲು ಹಾಕಿ ಜೋಡಿಸಲ್ಪಟ್ಟಿದ್ದಾನೆಂದು ನಾವು ನಂಬುವದಿಲ್ಲ. ಬದಲಾಗಿ, ನಾವು ಆತನ ಮಾತುಗಳನ್ನು *ಸ್ವಾಭಾವಿಕವಾಗಿ* ತೆಗೆದುಕೊಳ್ಳುತ್ತೇವೆ. ರಕ್ಷಣೆಯೊಳಗೆ ಪ್ರವೇಶಿಸುವದಕ್ಕೆ ತಾನೊಬ್ಬನೇ ದಾರಿಯಾಗಿದ್ದಾನೆಂಬದನ್ನು ಒತ್ತಿ ಹೇಳುವದಕ್ಕಾಗಿ ಯೇಸು ಆಲಂಕಾರಿಕ (ಸಾಂಕೇತಿಕ) ಭಾಷೆಯನ್ನು ಬಳಸಿದನೆಂದು ನಾವು ಒಪ್ಪಿಕೊಳ್ಳುತ್ತೇವೆ.

*ಈ ಅರ್ಥೈಸುವ ದಾರಿಯ ದುರ್ಬಲತೆಗಳು.* ಭವಿಷ್ಯವಾದದ ಒಂದು ದುರ್ಬಲತೆಯೆಂದರೆ ಅದು ಪ್ರಕಟನೆ ಪುಸ್ತಕದ ಕುರಿತು ಒಂದು ಅಸಮತೋಲನವುಳ್ಳ ಅಭಿಪ್ರಾಯವನ್ನು ಹೊಂದಿರುತ್ತದೆ. ಪ್ರಕಟನೆ ಪುಸ್ತಕದ ಬಹುಪಾಲು ಭಾಗವು ಏಳು ವರ್ಷಗಳ ಕಾಲಾವಧಿಯ ಕುರಿತು ಹೇಳುವದಕ್ಕೆ ಬರೆಯಲ್ಪಟ್ಟಿದೆ ಎಂದು ಘೋಷಿಸುವ ಯಾವದೇ ಅರ್ಥೈಸುವ ದಾರಿಯ ಬಗ್ಗೆ ನಾವು ಸಂಶಯಾಸ್ಪದಿಂದ ಇರಬೇಕು.

ಮತ್ತೊಂದು ದುರ್ಬಲತೆಯೆಂದರೆ ಇದು Bruce Metzgerನು ಕರೆಯುವ ಪ್ರಕಾರ ಒಂದು "ಭಾವಶೂನ್ಯ ಅಕ್ಷರಶಃತೆ"[19] ಮೇಲೆ ಅವಲಂಭಿತವಾಗಿರುತ್ತದೆ. ವಾಕ್ಯಭಾಗವು ಸ್ವತಃ ಅನೇಕ ಸಾರಿ ಸಂಕೇತಗಳ ಅರ್ಥವನ್ನು ವಿವರಿಸುತ್ತವೆ (1:20; 4:5; 5:6, 8; 12:3, 9; 17:9, 12, 15, 18; 19:8; 20:14), ಎಲ್ಲವನ್ನೂ ಅಲ್ಲದಿದ್ದರೂ, ಪುಸ್ತಕದ ಬಹಳಷ್ಟು ಭಾಗವನ್ನು ಅಕ್ಷರಶಃ ತೆಗೆದುಕೊಳ್ಳಕೂಡದು ಎಂಬುದನ್ನು ಒತ್ತಿ ಹೇಳುತ್ತದೆ.

ಈ ಅರ್ಥೈಸುವ ದಾರಿಯಲ್ಲಿನ ಮುಖ್ಯ ದುರ್ಬಲತೆಯೆಂದರೆ ಇದು ಘಟನೆಗಳು ಬೇಗನೆ ಸಂಭವಿಸಲಿವೆ ಎಂದು ಯೋಹಾನನು ನುಡಿದ ಹೇಳಿಕೆಯೊಂದಿಗೆ ಅಸಮಂಜಸತೆಯನ್ನು ಹೊಂದಿರುತ್ತದೆ: "ಯೇಸು ಕ್ರಿಸ್ತನ ಪ್ರಕಟನೆಯು. ಆತನು ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು ತನ್ನ ದಾಸರಿಗೆ ತೋರಿಸುವದಕ್ಕಾಗಿ ದೇವರಿಂದ ಈ ಪ್ರಕಟನೆಯನ್ನು ಹೊಂದಿದನು" (1:1). "ಬೇಕಾಗಿರುವ" ಎಂಬ ಪದವು δεῖ (*dei*) ಎಂಬ ಪದದ ಅನುವಾದವಾಗಿದ್ದು "ಒಂದು ನೈತಿನ ಅವಶ್ಯಕತೆಯನ್ನೊಳಗೊಂಡಿರುವ ಗ್ರೀಕ್ ಅಕರ್ತೃಕ ಕ್ರಿಯಾಪದವಾಗಿದೆ."[20] ಯೇಸು ತಾನು "ಯೆರೂಸಲೇಮಿಗೆ ಹೋಗಿ . . . ಬಹು ಕಷ್ಟಗಳನ್ನನುಭವಿಸ*ಬೇಕು*" ಎಂಬುದನ್ನು ತೋರಿಸಲು ಈ ಪದವನ್ನು ಬಳಕೆ ಮಾಡಿದನು (ಮತ್ತಾಯ 16:21; ಒತ್ತಿ ಹೇಳಿದ್ದು ನನ್ನದು). ಅಲ್ಲದೆ, "ಬೇಗನೆ" ಎಂದು ಅನುವಾದಿಸಲ್ಪಟ್ಟಿರುವ ἐν τάχει (*en tachei*) ಎಂಬುದರ ಅರ್ಥವು "ಶೀಘ್ರದಲ್ಲಿ" ಅಥವಾ "ಸ್ವಲ್ಪ ಕಾಲದಲ್ಲಿ" ಎಂದಾಗಿರುತ್ತದೆ. ಅಲ್ಲದೆ ಪೌಲನು ತಿಮೊಥೆಯನಿಗೆ "ನನ್ನ ಬಳಿಗೆ *ಬೇಗ* ಬರುವದಕ್ಕೆ ಪ್ರಯತ್ನ ಮಾಡು" ಎಂದು ಹೇಳಿದಾಗ ಈ ಪದವನ್ನು ಬಳಕೆ ಮಾಡಿದನು (2 ತಿಮೊಥೆ 4:9; ಒತ್ತಿ ಹೇಳಿದ್ದು ನನ್ನದು). ಪ್ರಕಟನೆ ಪುಸ್ತಕವು ಭವಿಷ್ಯದಲ್ಲಿ ಸಾವಿರಾರು ವರ್ಷಗಳ ಬಳಿಕ ಸಂಭವಿಸಲಿದ್ದ ಕಾರ್ಯಗಳನ್ನು ತಿಳಿಸುವದಕ್ಕೆ ಬರೆಯಲ್ಪಡಲಿಲ್ಲ.

ಒಂದು ಗಮನಾರ್ಹವಾದ ದುರ್ಬಲತೆಯು ಏನೆಂದರೆ ಈ ಅರ್ಥನಿರೂಪಣೆಯು ಹಿಂಸೆಗೊಳಗಾದ ಪ್ರಥಮ ಶತಮಾನದ ಕ್ರೈಸ್ತರಿಗೆ ಸ್ವಲ್ಪವಾದ ಅಥವಾ ಯಾವದೇ ಸಂದೇಶವನ್ನು ಹೊಂದಿಲ್ಲದೆ ಇರಬಹುದಾಗಿದೆ. ನೀವು ಒಂದು ಭಯಂಕರವಾದ ನೋವಿನಲ್ಲಿದ್ದು ನಿಮ್ಮ ಸ್ನೇಹಿತನು ನಿಮ್ಮ ಬಳಿಗೆ ಬಂದು, "ನಿನಗೆ ನೋವಾಗುತ್ತಿದೆ ಎಂದು ಬಲ್ಲೆನು, ಮತ್ತು ನೀನೊಂದು ವಿಷಯ ತಿಳಿದುಕೊಳ್ಳಬೇಕೆಂದು ಇಚ್ಛೆಸುತ್ತೇನೆ, ಏನೆಂದರೆ *ಇಂದಿನಿಂದ ಸಾವಿರಾರು ವರ್ಷಗಳಲ್ಲಿ* ದೇವರು ಎಲ್ಲವನ್ನೂ ಸರಿಪಡಿಸುವವನು!" ಎಂದು ಹೇಳುತ್ತಾನೆಂಬುದನ್ನು ಊಹಿಸಿಕೊಳ್ಳಿರಿ. ಅದು ನಿಮಗೆ ಆದರಣೆಯನ್ನು ಉಂಟು ಮಾಡುವದೋ. ಅಥವಾ ನಿಮಗೆ "ಬಹಳ ಒಳ್ಳೇದು, ಆದರೆ ನನಗೆ *ಈಗ* ಏನಾದರೂ ಭರವಸೆಯ ಅಗತ್ಯವಿದೆ" ಎಂದು ಹೇಳಬೇಕೆಂದು ಅನ್ನಿಸುವದೋ?

ಈ ಅರ್ಥೈಸುವ ದಾರಿಯ ಮರಣಾಂತಿಕ ದುರ್ಬಲತೆಯು ಏನೆಂದರೆ ಇದರ ಮೂಲಭೂತ ತತ್ವಗಳು ಬೈಬಲಿನ ಸರಳವಾದ ಉಪದೇಶದೊಂದಿಗೆ ವಿರುದ್ಧವಾಗಿರುತ್ತವೆ. ಉದಾಹರಣೆಗೆ, ಈ ಅರ್ಥೈಸುವ ದಾರಿಯು ರಕ್ತದಿಂದ ಕೊಂಡುಕೊಳ್ಳಲ್ಪಟ್ಟ ನಮ್ಮ ಕರ್ತನ ಸಭೆಯ ಮೌಲ್ಯವನ್ನು ತಗ್ಗಿಸುತ್ತದೆ (ಅಪೊಸ್ತಲರ ಕೃತ್ಯಗಳು 20:28). ಅನೇಕ ಸಹಸ್ರವರ್ಷಪೂರ್ವಾಡಳಿತವಾದಿಗಳ ಪ್ರಕಾರ, ಯೇಸುವು ಯೆಹೂದ್ಯರಿಂದ ಭಂಗ ಪಡಿಸಲ್ಪಡದಿದ್ದಲ್ಲಿ, ಆತನು ತನ್ನ "ಮೊದಲನೆ ಬರೋಣದ" ವೇಳೆಯೇ ತನ್ನ ರಾಜ್ಯವನ್ನು ಭೂಮಿಯ ಮೇಲೆ ಸ್ಥಾಪಿಸಿರುತ್ತಿದ್ದನು, ಮತ್ತು ಒಂದು ಸಭೆ ಎಂಬುದು ಇರುತ್ತಲೇ ಇರಲಿಲ್ಲ. ಈ ನಂಬಿಕೆಯು ಸತ್ಯವಾಗಿರಲು ಸಾಧ್ಯವಿಲ್ಲ, ಯಾಕೆಂದರೆ ಸಭೆಯು ದೇವರ ನಿತ್ಯ ಉದ್ದೇಶದಲ್ಲಿ ಒಂದು ಜೀವಾಳವಾಗಿರುವ ಭಾಗವಾಗಿತ್ತು (ಎಫೆಸ 3:10, 11, 21). ಈ ಅರ್ಥೈಸುವ ದಾರಿಯು ಯೇಸು ಶಿಲುಬೆಯ ಮೇಲೆ ಮರಣಿಸಿರುತ್ತಿರಲಿಲ್ಲ ಎಂಬ ಸೂಚ್ಯಾರ್ಥವನ್ನು ಸಹ ನೀಡುತ್ತದೆ- ಆದರೆ ನಾವು ಯೇಸುವಿನ ರಕ್ತವಿಲ್ಲದೆ ರಕ್ಷಿಸಲ್ಪಡುವದಕ್ಕೆ ಸಾಧ್ಯವಿಲ್ಲ!

ಈ ವ್ಯಾಖ್ಯಾನ ಪುಸ್ತಕದ ಉದ್ದೇಶವು ಪ್ರಕಟನೆ ಪುಸ್ತಕದ ಸಕಾರಾತ್ಮನ ಅರ್ಥನಿರೂಪಣೆಯನ್ನು ಮುಂದಿಡುವದಾಗಿದೆ, ಹೊರತು ಒಂದು ಸಹಸ್ರವರ್ಷಪೂರ್ವಾಡಳಿತವಾದವನ್ನು ಆಳವಾಗಿ ಖಂಡಿಸುವ ಉದ್ದೇಶವಾಗಿರುವದಿಲ್ಲ.[21] ಹೇಗೂ, ಭವಿಷ್ಯವಾದದ ಅರ್ಥೈಸುವಿಕೆಯ ದಾರಿಯು ಬಹಳ ಜನಪ್ರಿಯವಾಗಿದೆ ಮತ್ತು ಇಂದು ಪ್ರಕಟನೆ ಪುಸ್ತಕದ ಬಹಳಷ್ಟು ಊಹೆಯು ಸಹಸ್ರವರ್ಷಪೂರ್ವಾಡಳಿತದ ಪ್ರಮೇಯವನ್ನು ಹೊಂದಿದೆಯಾದ್ದರಿಂದ, ನಾವು ಆಗಾಗ ಸಹಸ್ರವರ್ಷಪೂರ್ವಾಡಳಿತವಾದದ ದುರ್ಬಲತೆಗಳನ್ನು ನಮ್ಮ ವ್ಯಾಖ್ಯೆಗಳಲ್ಲಿ ಎತ್ತಿ ತೋರಿಸುತ್ತೇವೆ.

## ನಿರಂತರವಾದ-ಐತಿಹಾಸಿಕವಾದ ಅರ್ಥೈಸುವ ದಾರಿ

*ಈ ಅರ್ಥೈಸುವ ದಾರಿಯ ಅರ್ಥವಿವರಣೆ.* ನಿರಂತರ-ಐತಿಹಾಸಿಕ ಅರ್ಥೈಸುವ ದಾರಿಯು ಪ್ರಕಟನೆ ಪುಸ್ತಕವು ಇತಿಹಾಸದ, ವಿಶೇಷವಾಗಿ ಪ್ರಥಮ ಶತಮಾನದಿಂದ ಲೋಕಾಂತ್ಯದ ವರೆಗಿನ ಸಭೆಯ ಇತಿಹಾಸದ ಒಂದು ವಿವರವಾದ ನೀಲಿನಕ್ಷೆಯನ್ನು ಒದಗಿಸುತ್ತದೆಂಬ ಅಭಿಪ್ರಾಯವುಳ್ಳದ್ದಾಗಿದೆ.

> ಈ ಅಭಿಪ್ರಾಯವನ್ನು ಹೊಂದಿರುವವರು ಪಂಚಾಶತ್ತಮ ದಿನದಿಂದ ಮೊದಲ್ಗೊಂಡು ಅಂತ್ಯಕಾಲದ ತನಕ ಸಭೆಯ ಘಟನೆಗಳ ಒಂದು ಸಾಂಕೇತಿಕ ಚಿತ್ರಣವೆಂದು ಕಾಣುತ್ತಾರೆ. ಅವರು . . . ಪುಸ್ತಕದಲ್ಲಿ ನಿಜವಾದ ಯುದ್ಧಗಳು (ಟೂರ್ಸ್ ಯುದ್ಧಗಳು), ಚಳುವಳಿಗಳು (ಮುಹಮ್ಮದಿ ಚಳುವಳಿ, ಪ್ರೋಟೆಸ್ಟಂಟ್ ಸುಧಾರಣೆ), ವ್ಯಕ್ತಿಗಳು (ನೆಪೋಲಿಯನ್, ಪೋಪ್,

ಹಿಟ್ಲರ್), ಅಥವಾ ಘಟನೆಗಳು (Constantineನ ಸಹಿಷ್ಣುತೆ ರಾಜಶಾಸನ) ಇತ್ಯಾದಿಗಳು ಹೆಸರಿಸಲ್ಪಡುವದನ್ನು ಕಾಣುವದಕ್ಕೆ ಯೋಚಿಸುತ್ತಾರೆ.[22]

ಈ ಅರ್ಥೈಸುವ ದಾರಿಯು ಕಾಲವೃತ್ತಾಂತಿಕ ಅಭಿಪ್ರಾಯ, ಐತಿಹಾಸಿಕ ಅರ್ಥೈಸುವ ದಾರಿಯ-ಸಂಕ್ಷಿಪ್ತ ವಿವರಣೆ ಅಥವಾ ಅರ್ಥನಿರೂಪಣೆಯ ಐತಿಹಾಸಿಕ (ಅಥವಾ ಇತಿಹಾಸವಾದಿ) ವಿಧಾನ ಎಂದು ಸಹ ಕರೆಯಲ್ಪಟ್ಟಿದೆ. ಈ ದಾರಿಯನ್ನು ಇತಿಹಾಸದ-ತತ್ವಜ್ಞಾನ ಅಭಿಪ್ರಾಯ ಅಥವಾ ಸಮಕಾಲಿನ-ಇತಿಹಾಸಿಕ ಅಭಿಪ್ರಾಯದೊಂದಿಗೆ ಗಲಿಬಲಿಗೊಳಿಸಕೊಳ್ಳಕೂಡದು, ಅವುಗಳ ಅನಂತರದಲ್ಲಿ ಚರ್ಚಿಸಲಾಗುವ ಅರ್ಥೈಸುವ ದಾರಿಗಳ ಪರ್ಯಾಯ ಬಿರುದುಗಳಾಗಿವೆ.

ನಿರಂತರವಾದ-ಐತಿಹಾಸಿಕ ಅರ್ಥೈಸುವ ದಾರಿಯು ಪ್ರೊಟೆಸ್ಟೆಂಟ್‌ರ ಮಧ್ಯದಲ್ಲಿ ಜನಪ್ರಿಯವಾಗಿರುತ್ತದೆ. ಕೆಲವು ದಶಕಗಳ ಹಿಂದಿನ ತನಕ, ಬಹುಪಾಲು ಪ್ರೊಟೆಸ್ಟೆಂಟ್ ವ್ಯಾಖ್ಯಾನಕಾರರು ಈ ಅಭಿಪ್ರಾಯವನ್ನು ಹಿಡಿದುಕೊಂಡಿದ್ದರು. ಬಹಳಷ್ಟು ಸಂಕೇತಗಳನ್ನು ಸಾಮಾನ್ಯ ಅರ್ಥದಲ್ಲಿ ರೋಮನ್ ಕ್ಯಾಥೋಲಿಕತ್ವಕ್ಕೆ ಮತ್ತು ನಿರ್ದಿಷ್ಟವಾಗಿ ಪೋಪ್‌ನಿಗೆ ಅನ್ವಯಿಸುವಂತೆ ಅರ್ಥನಿರೂಪಿಸಲ್ಪಡುತ್ತಿದ್ದವು. ಈ ಅರ್ಥೈಸುವ ದಾರಿಯ ಪ್ರಭಾವಶಾಲಿ ಬರಹಗಾರರೆಂದರೆ Albert Barnes ಮತ್ತು Adam Clarke.[23] John T. Hindsನು ಪ್ರಕಟನೆ ಪುಸ್ತಕದ ಕುರಿತ ತನ್ನ ವ್ಯಾಖ್ಯಾನ ಗ್ರಂಥದಲ್ಲಿ ಬಹುವಾಗಿ Barnesನನ್ನು ಅನುಸರಿಸುತ್ತಾನೆ, ಅದು ಹೊಸ ಒಡಂಬಡಿಕೆಯ ಮೇಲಿನ ಜನಪ್ರಿಯ *Gospel Advocate* ಸರಣಿಯ ಭಾಗವಾಗಿರುತ್ತದೆ.[24]

*ಈ ಅರ್ಥೈಸುವ ದಾರಿಯ ಬಲಗಳು.* ನಿರಂತರವಾದ-ಐತಿಹಾಸಿಕ ಅರ್ಥೈಸುವ ದಾರಿಯು ಕ್ಯಾಥೋಲಿಕತ್ವವನ್ನು ವಿರೋಧಿಸುವವರಿಗೆ ವಿಶೇಷವಾಗಿ ಇಷ್ಟವಾಗುವಂತಿತ್ತು. ವ್ಯಾಖ್ಯಾನಕಾರರು ಯುರೋಪಿನ ಇತಿಹಾಸವನ್ನು ಪ್ರಕಟನೆ ಪುಸ್ತಕದಲ್ಲಿನ ದರ್ಶನಗಳೊಂದಿಗೆ ಹೇಗೆ ಸಮಾನಾರ್ಥದಲ್ಲಿ ವೇಳಾಪಟ್ಟಿಯನ್ನು ಸಿದ್ಧಗೊಳಿಸಿರುತ್ತಾರೆ ಎಂಬುದು ನಿಜಕ್ಕೂ ಮನಮೋಹಕವಾಗಿರುತ್ತದೆ. ಈ ಅರ್ಥೈಸುವ ದಾರಿಯ ಬಲವು ಏನೆಂದರೆ ಇದು ಈ ದಿನಕ್ಕಾಗಿ ಸಂದೇಶವೊಂದನ್ನು ಹೊಂದಿದೆ: "ಇಡೀ ಇತಿಹಾಸವು ದೇವರ ನಿಯಂತ್ರಣದಲ್ಲಿರುತ್ತದೆ." ಸಾಮಾನ್ಯದಲ್ಲಿ, ಈ ಅರ್ಥೈಸುವ ದಾರಿಯು ಭವಿಷ್ಯವಾದಿಗಳಿಂದ ಮುಂದಿಡಲ್ಪಟ್ಟಿರುವ ಯಾವದೇ ಅಪಾಯಗಳನ್ನು ಸ್ವಾಭಾವಿಕವಾಗಿ ಹೊಂದಿರುವದಿಲ್ಲ.

*ಈ ಅರ್ಥೈಸುವ ದಾರಿಯ ದುರ್ಬಲತೆಗಳು.* ಒಂದು ದುರ್ಬಲತೆಯೆಂದರೆ ಈ ದಾರಿಯು ವ್ಯಾಪಕವಾಗಿ ಊಹಾತ್ಮಕ ಹಾಗೂ ವೈಲಕ್ಷಣಗಳನ್ನಾಧರಿಸಿದ್ದಾಗಿದೆ. ವ್ಯಾಖ್ಯಾನಕಾರರು ಸಭೆಯ ಮೊದಲ ಕೆಲವು ಶತಮಾನಗಳನ್ನು ದಾಟಿ ಹೋದರೆಂದರೆ, ಅರ್ಥನಿರೂಪಣೆಗಳು ಬಹಳವಾಗಿ ವ್ಯತ್ಯಾಸಗೊಳ್ಳುತ್ತವೆ. ಒಬ್ಬ ವ್ಯಾಖ್ಯಾನಕಾರನು ಇಂಥಿಂಥ ದರ್ಶನವು ಮಾರ್ಟಿನ್ ಲೂಥರ್ ಹಾಗೂ ಸುಧಾರಣೆಯನ್ನು ಸೂಚಿಸುವದಾಗಿದೆ ಎಂದು ನಂಬಿದರೆ, ಮತ್ತೊಬ್ಬನು ಅದನ್ನು ಮುದ್ರಣ ಆಲಯದ ಆವಿಷ್ಕಾರ ಎಂದು ಗುರುತಿಸಿದನು. ನಿರಂತರವಾದ-ಐತಿಹಾಸಿಕ ಅರ್ಥೈಸುವ ದಾರಿಯು ಪ್ರೊಟೆಸ್ಟೆಂಟರಿಂದ ವ್ಯಾಪಕವಾಗಿ ಅಂಗೀಕಾರ ಮಾಡಿಕೊಳ್ಳಲ್ಪಟ್ಟಿದ್ದಾಗ್ಯೂ, ಕ್ಯಾಥೋಲಿಕ್ ವ್ಯಾಖ್ಯಾನಕಾರರು ಸಹ ಪ್ರೊಟೆಸ್ಟೆಂಟ್ ಸುಧಾರಣೆಯು ಪ್ರಕಟನೆ ಪುಸ್ತಕದ "ಮೃಗ" ಎಂಬುದಾಗಿ "ಸಾಭಿತುಪಡಿಸಲು" ಇದನ್ನು ಬಳಸಿಕೊಂಡಿರುತ್ತಾರೆ!

ಒಂದು ಸಂಬಂಧಿದ ದುರ್ಬಲತೆ ಏನೆಂದರೆ ವ್ಯಾಖ್ಯಾನಕಾರರು ತಮ್ಮ ಇಷ್ಟಾನುಸಾರದಂತೆ ಪಾಶ್ಚಾತ್ಯ ಯೂರೋಪಿನ ಘಟನೆಗಳ ಮೇಲೆ ಮುಖ್ಯ ಗಮನವನ್ನು

ಹರಿಸಿರುತ್ತಾರೆ, ಸುವಾರ್ತೆಯು ತಲುಪಿರುವಂತಹ ಇತರ ಸ್ಥಳಗಳನ್ನು ವ್ಯಾಪಕವಾಗಿ ನಿರ್ಲಕ್ಷಿಸಿರುತ್ತಾರೆ. ನಿಶ್ಚಯವಾಗಿಯೂ, ದೇವರು ಇಡೀ ಲೋಕದ ಬಗ್ಗೆ ಕಳಕಳಿ ಹೊಂದಿದ್ದಾನೆ.

ಈ ಅರ್ಥೈಸುವ ದಾರಿಯ ದುರಾದೃಷ್ಟಕರವಾದ ದುರ್ಬಲತೆಯು ಏನೆಂದರೆ ಇದು ಅನೇಕ ಸಾರಿ ಯೇಸುವಿನ ಎರಡನೆಯ ಬರೋಣವನ್ನು ಮುಂತಿಳಿಸುವದಕ್ಕೆ ಬಳಸಲ್ಪಟ್ಟಿರುತ್ತದೆ. ಅವರು ಸಾಮಾನ್ಯವಾಗಿ "ಒಂದು ದಿನ = ಒಂದು ವರ್ಷ" ಎಂದು ಭಾವಿಸುತ್ತಾರೆ, ಅದು ಪ್ರಕಟನೆ ಪುಸ್ತಕದ ವಿಷಯದಲ್ಲಿ ಅದು ಅನಗತ್ಯವಾದ ಭಾವಿಸಿಕೊಳ್ಳುವಿಕೆಯಾಗಿದೆ. "ಒಂದು ದಿನ = ಒಂದು ವರ್ಷ" ಭಾವನೆಯು ಬೆರಳೆಣಿಕೆಯಷ್ಟು ವಾಕ್ಯಭಾಗಗಳಲ್ಲಿ ಸಿಕ್ಕಬಹುದಾಗಿದೆ, ಆದರೆ ಬಹುಪಾಲು ಪ್ರವಾದನಾತ್ಮಕ ಸಾಹಿತ್ಯದಲ್ಲಿ ಸಿಕ್ಕುವದಿಲ್ಲ. (ನೋಡಿರಿ, ಉದಾಹರಣೆಗೆ, ಯೆಶಾಯ 7:8; ಯೆರೆಮೀಯ 29:10; ದಾನಿಯೇಲ 9:24; ಮತ್ತಾಯ 20:19.) ಈ ಭಾವನೆಯನ್ನು ಪುಸ್ತಕಕ್ಕೆ ಅನ್ವಯಿಸಬೇಕೆಂಬುದನ್ನು ಪ್ರಕಟನೆ ಪುಸ್ತಕದಲ್ಲಿರುವ ಯಾವದೂ ಸೂಚಿಸುವದಿಲ್ಲ. ಒಂದು ವೇಳೆ "ಒಂದು ದಿನ = ಒಂದು ವರ್ಷ" ಎಂದಾಗಿದ್ದಲ್ಲಿ, ಪ್ರಕಟನೆ 20:4ನೇ ವಚನವು ಕ್ರಿಸ್ತನು 360,000 ವರ್ಷಗಳ ವರೆಗೆ ಆಳ್ವಿಕೆ ಮಾಡುವನೆಂಬ ಅರ್ಥವನ್ನು ಕೊಡುತ್ತದೆ! ಅಷ್ಟುಮಾತ್ರವಲ್ಲದೆ, ಸಾಮಾನ್ಯವಾಗಿರುವ ಅಂತ್ಯಕಾಲಿಕ ಸಾಹಿತ್ಯದಲ್ಲಿ ಯಾವದೂ ಪ್ರಕಟನೆ ಪುಸ್ತಕದಲ್ಲಿ ಅಂತಹ ಭಾವನೆಯನ್ನು ಬಳಸಬೇಕೆಂಬುದನ್ನು ಸೂಚಿಸುವದಿಲ್ಲ. ಕ್ರಿಸ್ತನ ಪುನರಾಗಮನಕ್ಕೆ ನಿಖರವಾದ ಸಮಯವನ್ನು ನಿಗದಿ ಪಡಿಸುವದಕ್ಕೆ ಪ್ರಯತ್ನಿಸಿರುವ ಬಹಳಷ್ಟು ಮಂದಿ ಈ "ಒಂದು ದಿನ = ಒಂದು ವರ್ಷ" ಭಾವನೆಯನ್ನು ಬಳಿಸಿರುತ್ತಾರೆ. ಅವರ ವೇಳಾಪಟ್ಟಿಯ ಪ್ರಕಾರವಾಗಿ ಯೇಸುವು ಕಾಣಿಸಿಕೊಳ್ಳುವದಕ್ಕೆ ವಿಫಲವಾಗಿದ್ದು ಅವರನ್ನು ಸುಳ್ಳು ಪ್ರವಾದಿಗಳೆಂಬುದನ್ನು ಬೈಲಿಗೆ ತಂದಿರುತ್ತದೆ. ಯಾವ ಮನುಷ್ಯ ಜೀವಿಯೂ ಕ್ರಿಸ್ತನ ಎರಡನೆಯ ಬರೋಣದ ಸಮಯವನ್ನು ತಿಳಿಯುವದಕ್ಕೆ ಸಾಧ್ಯವಿಲ್ಲ (ಮತ್ತಾಯ 24:36; 1 ಥೆಸಲೋನಿಕ 5:2; 2 ಪೇತ್ರ 3:10; ಪ್ರಕಟನೆ 3:3; 16:15).

ಒಂದು ಗಂಭೀರವಾದ ದುರ್ಬಲತೆಯು ಏನೆಂದರೆ, ನಿರಂತರವಾದ-ಐತಿಹಾಸಿಕ ಅರ್ಥೈಸುವ ದಾರಿಯ ಪ್ರಕಾರವಾಗಿ, ಪ್ರಕಟನೆ ಪುಸ್ತಕದ ಬಹುಪಾಲು ಭಾಗವು ಪ್ರಥಮ ಶತಮಾನದಿಂದ ಬಹುದೂರವಾಗಿರುವ ಘಟನೆಗಳ ಕುರಿತು ಹೇಳುತ್ತದೆ ಎಂದಾಗಿರುತ್ತದೆ. ಹೇಗೂ, ಯೋಹಾನನು 1:1ರಲ್ಲಿ "ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳ" ಕುರಿತು ಪುಸ್ತಕವು ತಿಳಿಸುತ್ತದೆಂದು ಹೇಳುತ್ತಾನೆ, ಮತ್ತು 1:3ರಲ್ಲಿ ಆತನು "ಸಮಯವು ಸಮೀಪವಾಗಿದೆ" ಎಂದು ಘೋಷಿಸಿದನು.

ಇನ್ನೊಂದು ದುರ್ಬಲತೆಯೆಂದರೆ ಈ ಅಭಿಪ್ರಾಯವು ಸಾಮಾನ್ಯವಾಗಿ ದರ್ಶನಗಳನ್ನು ಕಾಲವೃತ್ತಾಂತಿಕವಾಗಿ ಕಾಣುತ್ತದೆ, ಅಂತ್ಯ ಕಾಲದ ವರೆಗೂ ಒಂದು ಘಟನೆಯಾದ ಬಳಿಕ ಮತ್ತೊಂದು ಘಟನೆ ಸಂಭವಿಸುತ್ತದೆಂದಾಗಿರುತ್ತದೆ. ಇದು ಪ್ರಕಟನೆ ಪುಸ್ತಕದಲ್ಲಿ ವಿವಿಧ ಹಂತಗಳಲ್ಲಿ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಉದಾಹರಣೆಗೆ, ಪುಸ್ತಕದ ಅರ್ಧಭಾಗಕ್ಕೆ ಬಂದಾಗ, 12ನೇ ಅಧ್ಯಾಯವು ಯೇಸುವಿನ ಜನನವನ್ನು ಬಣ್ಣಿಸುತ್ತದೆ (12ನೇ ಅಧ್ಯಾಯದ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಒಂದು ಎದ್ದು ಕಾಣುವ ದುರ್ಬಲತೆಯು ಏನೆಂದರೆ, ಈ ಅರ್ಥನಿರೂಪಣೆಯು ಸರಿ ಎಂದಾದರೆ, ಪ್ರಕಟನೆ ಪುಸ್ತಕದವು ಹಿಂಸೆಯನ್ನನುಭವಿಸುತ್ತಿದ್ದ ಪ್ರಥಮ ಶತಮಾನದ ಕ್ರೈಸ್ತರಿಗೆ ಅಷ್ಟೇನೂ ಆದರಣೆಯನ್ನು ಕೊಟ್ಟಿರಲಿಲ್ಲವೇನಿಸುತ್ತದೆ. ಈ ಪುಸ್ತಕವು ಅವರಿಗೆ ಒಂದು ಬಗೆಹರಿಸಲಾಗದ ಒಗಟಿನಂತೆ ಇದ್ದಿರಬಹುದಾಗಿದೆ. ಅವರು ಭವಿಷ್ಯದ ಇತಿಹಾಸದ ಕುರಿ

ಪ್ರವಾದನೆಗಳ ಗೂಢಾರ್ಥಗಳನ್ನು ಕಂಡು ಹಿಡಿಯುವದಕ್ಕೆ ಶಕ್ತರಾಗಿದ್ದಾಗ್ಯೂ, ಆಗಲೂ ಅದು ತಕ್ಷಣಕ್ಕೆ ಯಾವದೇ ಪ್ರಯೋಜನವನ್ನು ಹೊಂದಿಲ್ಲದ್ದಾಗಿತ್ತು. ಶಿರಚ್ಛೇಧ ಹೊಂದಲಿದ್ದ ಕ್ರೈಸ್ತನೊಬ್ಬನಿಗೆ "ಸಭೆಯು ಮತಭ್ರಷ್ಟಗೊಳಿಸಲ್ಪಡುವದು, ಆದರೆ ನಂಬಿಗಸ್ತರು ಕ್ರಮೇಣದಲ್ಲಿ ಜಯಶಾಲಿಯಾಗುವರು" ಎಂದು ಹೇಳುವದನ್ನು ಊಹಿಸಿಕೊಳ್ಳಿರಿ. ಅಂಥ ಸುದ್ಧಿಯು ಶಿರಚ್ಛೇಧ ಮಾಡುವವರನ್ನು ಎದುರುಗೊಳ್ಳಲಿದ್ದ ಆತನಿಗೆ ಬಲವನ್ನು ಒದಗಿಸುವದೋ?

ಈ ಅರ್ಥೈಸುವ ದಾರಿಯ ಮರಣಾಂತಿಕ ದುರ್ಬಲತೆಯು-ಅದಕ್ಕೆ ತನ್ನ ಸಾರ್ವತ್ರಿಕ ಮನಸೆಳೆಯುವಿಕೆಯನ್ನು ಕಳೆದುಕೊಳ್ಳುವಂತೆ ಮಾಡಿದ ದೋಷ-ಯಾವದೆಂದರೆ ಇದು ಕ್ರಿಸ್ತನ ಹಿಂದಿರುಗಿ ಬರುವದಕ್ಕೆ ಎಷ್ಟು ಕಾಲವಾಗುತ್ತದೆಂಬುದು ನಮಗೆ ತಿಳಿಯುವದಿಲ್ಲ. ಬಹಳಷ್ಟು ನಿರಂತರವಾದ-ಐತಿಹಾಸಿಕ ವ್ಯಾಖ್ಯಾನಕಾರರು ಪುಸ್ತಕದ ಅಂತಿಮ ಘಟನೆಗಳನ್ನು ತಮ್ಮ ಸ್ವಂತ ಕಾಲಾವಧಿಯಲ್ಲಿಯೇ ಸಂಭವಿಸುವವೆಂದು ಹೇಳುತ್ತಾರೆ; ಇಲ್ಲವಾದರೆ, ಅನೇಕ ದರ್ಶನಗಳನ್ನು ವಿವರಿಸುವದಕ್ಕೆ ಸಾಧ್ಯವಾಗುವದಿಲ್ಲ. ಇದರರ್ಥವು ಇತಿಹಾಸದಲ್ಲಿ ಹೊಸ ಹಾಗೂ ಗಮನಾರ್ಹವಾದ ಘಟನೆಗಳ ಸಂಭವಿಸಿದಂತೆಲ್ಲಾ ಅವರ ವೇಳಾಪಟ್ಟಿಯನ್ನು ನಿರಂತರವಾಗಿ ಪರಿಷ್ಕರಿಸುತ್ತಲೇ ಇರಬೇಕು ಎಂದಾಗಿರುತ್ತದೆ. ಇದರ ಬಗ್ಗೆ ಯೋಚಿಸಿರಿ: ಕ್ರಿಸ್ತನು ಇನ್ನು ನಾಲ್ಕು ಸಾವಿರ ವರ್ಷಗಳ ತನಕ ಬರದೆ ಇರುವದಾದರೆ ಹೇಗಿರುತ್ತದೆ? ಅದರರ್ಥವು ಪ್ರಕಟನೆ ಪುಸ್ತಕದ ಕೇವಲ ಮೂರರಲ್ಲಿ ಒಂದು ಭಾಗವಷ್ಟೇ ನೆರವೇರಿರುತ್ತದೆ ಎಂದಾಗುತ್ತದೆ, ಮತ್ತು ಪುಸ್ತಕದ ಮೂರರಲ್ಲಿ ಎರಡು ಭಾಗದಷ್ಟರ ಕುರಿತು ನಮಗೆ ಏನೇನೂ ತಿಳಿಯದು ಎಂದಾಗುತ್ತದೆ.

ಈ ಅಭಿಪ್ರಾಯವನ್ನು ಎತ್ತಿ ಹಿಡಿಯುವವರು ಕ್ಯಾಥೋಲಿಕತ್ವದ ದೋಷಗಳ ಬಗ್ಗೆ ಕಳಕಳಿ ಹೊಂದಿದ್ದರೆಂಬ ವಾಸ್ತವಾಂಶವನ್ನು ನಾವು ಶ್ಲಾಘಿಸುತ್ತೇವೆ, ಆದರೆ ಆ ದೋಷಗಳನ್ನು ಬಯಲಿಗೆ ತರುವದಕ್ಕೆ ಬೈಬಲ್ ಅದಕ್ಕಿಂತ ಉತ್ತಮವಾದ ವಾಕ್ಯಭಾಗಗಳನ್ನೊಳಗೊಂಡಿದೆ. ಪ್ರಕಟನೆ ಪುಸ್ತಕದ ಬಹು ಮುಖ್ಯ ಉದ್ದೇಶವು "ಸಭಾ ಯುದ್ಧದಲ್ಲಿ ನಮಗೆ ಯುದ್ಧಾಯುಧಗಳನ್ನು ಒದಗಿಸಿ ಕೊಡುವದು"[25] ಅಲ್ಲ, ಆದರೆ ವೇದನೆಗೊಳಗಾಗಿರುವವರನ್ನು ಸಂತೈಸುವದೇ ಆಗಿದೆ.

## Preterist (ಪ್ರವಾದನೆಗಳು ನೆರವೇರಿ ಬಿಟ್ಟಿವೆ) ಎಂಬ ಅರ್ಥೈಸುವ ದಾರಿ

*ಈ ಅರ್ಥೈಸುವ ದಾರಿಯ ಅರ್ಥವಿವರಣೆ.* ಮೂರನೆಯ ಅರ್ಥೈಸುವ ದಾರಿಯು ಸಾಮಾನ್ಯವಾಗಿ preterist ಎಂದು ಕರೆಯಲ್ಪಡುತ್ತದೆ. "Preterist" ಎಂಬುದು ಲ್ಯಾಟಿನ್ ಪದದಿಂದ ಬಂದದ್ದಾಗಿದ್ದು "ಆಚೆ" ಅಥವಾ "ಗತಕಾಲ" ಎಂಬ ಅರ್ಥವನ್ನು ಹೊಂದಿದೆ. ಪ್ರಕಟನೆ ಪುಸ್ತಕದ ವಿಷಯದಲ್ಲಿ, preterist ಅರ್ಥೈಸುವ ದಾರಿಯು ಎಲ್ಲವೂ ಅಲ್ಲದಿದ್ದರೂ ಪುಸ್ತಕದ ಬಹುಪಾಲು ಭಾಗವು ಸಭೆಯ ಆದಿ ಶತಮಾನಗಳಲ್ಲಿ ಸಂಭವಿಸಿತು-ಅಂದರೆ, *ನಮ್ಮ ಗತಕಾಲದಲ್ಲಿ* ಸಂಭವಿಸಿತು-ಎಂದು ಅಭಿಪ್ರಾಯ ಹೊಂದಿರುತ್ತದೆ.

Preterist ಅರ್ಥೈಸುವ ದಾರಿಯ ಒಂದು ಅತಿರೇಕದ ರೂಪವು ಪ್ರಕಟನೆ ಪುಸ್ತಕ ಪ್ರತ್ಯೇಕವಾಗಿ ಬರೆಯುವ ಹೊತ್ತಿನಲ್ಲಿ ಈಗಾಗಲೇ ಗತಿಸಿ ಹೋಗಿದ್ದ ಘಟನೆಗಳನ್ನು ಕುರಿತು, ಅಥವಾ ಕನಿಷ್ಠ ಆ ಸಮಯದ ಸ್ವಲ್ಪ ಹೊತ್ತಿನಲ್ಲಿಯೇ ಸಂಭವಿಸಿರುತ್ತವೆಂದು ಬೋಧಿಸುತ್ತದೆ: ಮೆಸ್ಸೀಯನ ಬರೋಣ, ಸಭೆಯ ಸ್ಥಾಪನೆ, ಮತ್ತು ಯೆರೂಸಲೇಮಿನ ನಾಶನಗಳನ್ನು ಉದಾಹರಣೆಯಾಗಿ ಹೇಳಬಹುದು. ಈ ಅಭಿಪ್ರಾಯದ ಪ್ರಕಾರವಾಗಿ, ಕ್ರಿಸ್ತನಲ್ಲಿ ದೇವರ ಉದ್ದೇಶಗಳ ನೆರವೇರಿರುವಿಕೆಯ ಒಂದು ಪುನರಾವಲೋಕನವೇ ಪ್ರಕಟನೆ ಪುಸ್ತಕವಾಗಿರುತ್ತದೆ. ಅದರ ಫಲಿತವಾಗಿ, ಇದು ಪುನರಾವಲೋಕನದ ಅರ್ಥೈಸುವ ದಾರಿ ಎಂದು ಸಹ ಕರೆಯಲ್ಪಟ್ಟಿದೆ. Foy E. Wallace, Jr.ನು, ಈ ಅಭಿಪ್ರಾಯದ ಬಲವಾದ

ಪ್ರತಿಪಾದಕನಾಗಿದ್ದನು.[26] ಇದು ಬಲವಾದ ಅಂಶಗಳನ್ನು ಹೊಂದಿದೆ, ಆದರೆ ದೇವರು ಬಹುಪಾಲು ಕ್ರೈಸ್ತರಿಗೆ ಪರಿಚಿತವಿದ್ದ ಮಾಹಿತಿಯನ್ನು ಪುನರಾವಲೋಕನ ಮಾಡುವದಕ್ಕಾಗಿ ಏಕೆ ಅಂತಹ ವಿಚಿತ್ರವಾದ ವಿಧಾನವನ್ನು (ಅಂತ್ಯಕಾಲಿಕ ಸಾಂಕೇತಿವಾದವನ್ನು) ಬಳಸುವನು?

ಈ ಅರ್ಥೈಸುವ ದಾರಿಯು ಬಂದಿರುವ ಕೆಲವೊಂದು ಅಂತಿಮ ನಿರ್ಣಯಗಳು "ಕ್ರಿ.ಶ. 70 ಊಹೆ" ಯನ್ನು ಪ್ರತಿಪಾದಿಸುವವರಿಂದ ಶ್ಲಾಘಿಸಲ್ಪಟ್ಟಿವೆ. "ಕ್ರಿ.ಶ. 70 ಊಹೆ"ಯ ಹೃದಯ ಭಾಗವೆಂದರೆ ಯೆರೂಸಲೇಮ್ ನಾಶನಗೊಳಿಸಲ್ಪಟ್ಟ ಕ್ರಿ.ಶ. 70ರಲ್ಲಿ ಎರಡನೆಯ ಬರೋಣವು ಸಂಭವಿಸಿತು ಎಂಬುದೆ.[27] ಈ **ದೋಷಪೂರಿತ ಸಿದ್ಧಾಂತವು ಪ್ರಪಂಚದ ಅನೇಕ ಭಾಗಗಳಲ್ಲಿರುವ ಸಭೆಗಳೊಳಗೆ ಹಂಚಿಕೆ ಮಾಡಲ್ಪಟ್ಟಿರುತ್ತದೆ**.

ನಂತರದಲ್ಲಿ ಬರುವ ಹೇಳಿಕೆಗಳು ಹೆಚ್ಚಾಗಿ ಶಾಸ್ತ್ರೀಯ preterist (ಗತಕಾಲಿಕ) ಅರ್ಥೈಸುವ ದಾರಿಯನ್ನು ಗುರಿ ಮಾಡಿಕೊಂಡು ಹೇಳಿದವುಗಳಾಗಿವೆ, ಅದು ಸಮಕಾಲಿನ-ಐತಿಹಾಸಿಕ ಅಭಿಪ್ರಾಯಕ್ಕೆ ಸಹ ಹೆಸರು ಪಟ್ಟಿಯನ್ನು ಕೊಟ್ಟಿರುತ್ತದೆ. J. W. Robertsನ ಪ್ರಕಟನೆ ಪುಸ್ತಕದ ಕುರಿತಾದ ವ್ಯಾಖ್ಯಾನ ಗ್ರಂಥದಲ್ಲಿ ಒಂದು ಬದಲಾವಣೆಗಳನ್ನು ಮಾಡಿಕೊಂಡ ಗತಕಾಲಿಕ (preterist) ದಾರಿಯನ್ನು ಬಳಸಲಾಗಿದೆ.[28]

*ಈ ಅರ್ಥೈಸುವ ದಾರಿಯ ಬಲಗಳು*. ಈ ದಾರಿಯ ಒಂದು ಬಲವೆಂದರೆ ಇದು ಪ್ರಥಮ ಶತಮಾನದ ಐತಿಹಾಸಿಕ ಪರಿಸ್ಥಿತಿಯಲ್ಲಿ ದೃಢವಾಗಿ ಬೇರೂರಿರುತ್ತದೆ. ಬೈಬಲಿನ ಪುಸ್ತಕಗಳು ಬರೆಯಲ್ಪಟ್ಟ ಇತಿಹಾಸದ ಬಗ್ಗೆ ಏನನ್ನಾದರೂ ತಿಳಿದುಕೊಳ್ಳುವಾಗ ಬೈಬಲಿನಲ್ಲಿನ ಬಹುಪಾಲು ಪುಸ್ತಕಗಳ ಕುರಿತ ನಮ್ಮ ತಿಳುವಳಿಕೆಯು ಹೆಚ್ಚಳಗೊಳ್ಳುತ್ತದೆ. ಈ ಅರ್ಥೈಸುವ ದಾರಿಯ ಇನ್ನೊಂದು ಬಲವೆಂದರೆ, ಇದು ಪ್ರಥಮ ಶತಮಾನದ ಕ್ರೈಸ್ತರಿಗೆ ಒಂದು ಬಲವಾದ ಸಂದೇಶವನ್ನು ಹೊಂದಿರುತ್ತದೆ: "ರೋಮನ್ ಸಾಮ್ರಾಜ್ಯವು ಅಪರಾಜೇಯವಾಗಿ ಕಾಣಿಸಬಹುದು, ಆದರೆ ದೇವರು ಈಗಲೂ ಅಧಿಕಾರದಲ್ಲಿದ್ದಾನೆ. ಅಂತ್ಯದಲ್ಲಿ, ರೋಮ್ ಸಾಮ್ರಾಜ್ಯವು ನಾಶಗೊಳಿಸಲ್ಪಡುವದು ಮತ್ತು ನಿಮ್ಮ ನ್ಯಾಯವು ಸ್ಥಾಪಿಸಲ್ಪಡುವದು!"

*ಈ ಅರ್ಥೈಸುವ ದಾರಿಯ ದುರ್ಬಲತೆಗಳು*. ಒಂದು ಕಟ್ಟುನಿಟ್ಟಿನ ಅರ್ಥದಲ್ಲಿ preterist ಅಭಿಪ್ರಾಯವು ಹೇಳುವದೇನೆಂದರೆ ಪ್ರಕಟನೆ ಪುಸ್ತಕದಲ್ಲಿರುವಂಥದ್ದೆಲ್ಲವೂ ರೋಮನ್ ಸಾಮ್ರಾಜ್ಯದ ದಿನಗಳಲ್ಲಿ ನೆರವೇರಿತು ಎಂಬದೆ. ಈ ಭಾವನೆಯು ಪ್ರಕಟನೆ ಪುಸ್ತಕವನ್ನು "ಪ್ರಥಮ ಶತಮಾನಕ್ಕಾಗಿ ಬರೆದ ಒಂದು ಕಿರುಹೊತ್ತಿಗೆ"[29] ಗಿಂತಲೂ ಸ್ವಲ್ಪ ಅಧಿಕವೆಂಬಂತೆ ಚಿತ್ರಿಸುತ್ತದೆ. ಇಂಥ ಅಭಿಪ್ರಾಯದಲ್ಲಿ ಎರಡು ದುರ್ಬಲತೆಗಳು ಸ್ಪಷ್ಟವಾಗಿ ತೋರುತ್ತವೆ. ಪ್ರಕಟನೆ ಪುಸ್ತಕವು ಇಂದು ಕೇವಲ ಒಂದು ಮಿತಿಯುಳ್ಳ ಸಂದೇಶವನ್ನು ಈ ದಿನಕ್ಕಾಗಿ ಹೊಂದಿರುವದು. ಎರಡನೆಯದಾಗಿ, ಈ ಪುಸ್ತಕದಲ್ಲಿರುವ "ಕಡೇ ಸಂಗತಿಗಳ" ಕುರಿತಾದ ಸ್ಪಷ್ಟವಾಗಿರುವ ಬೋಧನೆಯನ್ನು ನಿರ್ಲಕ್ಷಿಸುವದಾಗಿದೆ.

ಭವಿಷ್ಯವಾದದ ಅರ್ಥೈಸುವ ದಾರಿಯಂತಲ್ಲದೆ, ಪ್ರಕಟನೆ ಪುಸ್ತಕವನ್ನು ಅರ್ಥೈಸುವ preterist ದಾರಿಯು ಬೇರೆ ಕಡೆಗಳಲ್ಲಿರುವ ಸರಳವಾಗಿರುವ ವಾಕ್ಯಭಾಗಗಳನ್ನು ಉಲ್ಲಂಘನೆ ಮಾಡುವದಿಲ್ಲ. ಅಲ್ಲದೆ preterist ಅರ್ಥೈಸುವ ದಾರಿಯು ನಿರಂತರವಾದ-ಐತಿಹಾಸಿಕ ಅರ್ಥೈಸುವ ದಾರಿಯಲ್ಲಿರುವ ಅಂತರ್ಗತವಾದ ದುರ್ಬಲತೆಗಳನ್ನು ಒಳಗೊಂಡಿರುವದಿಲ್ಲ: ಅದು ಕಾಲ ಕಾಲಕ್ಕೆ ತಕ್ಕಂತೆ ಪರಿಷ್ಕರಿಸಲ್ಪಡುವ ಅಗತ್ಯವನ್ನ ಹೊಂದಿರುವದಿಲ್ಲ. ಹೀಗೆ ಇದರ ವಿಷಯದಲ್ಲಿ ಬಹಳಷ್ಟು ಕಾರ್ಯಗಳು ಪ್ರಶಂಸಣೀಯವಾಗಿವೆ, ಆದರೆ ಅದು ಇಂದಿನ ವಾಚಕರಿಗೆ ಪ್ರಯೋಜನಕರವಾಗಿರ ಬೇಕಾದರೆ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಗತಕಾಲಿಕವಾದಿಗಳೆಂದು (preterists) ಎಂದು ಹೇಳಿಕೊಳ್ಳುವ

ಬಹುಪಾಲು ಮಂದಿ ತಾವು ಪ್ರಕಟನೆ ಪುಸ್ತಕವನ್ನು ಅರ್ಥೈಸಿಕೊಳ್ಳುವ ದಾರಿಯನ್ನು ಸ್ವಲ್ಪ ಮಟ್ಟಿಗೆ ಬದಲಾವಣೆ ಮಾಡಿ*ಕೊಂಡಿರುತ್ತಾರೆ*. ಉದಾಹರಣೆಗೆ, ಕಡೇ ಕೆಲವು ಅಧ್ಯಾಯಗಳು ನ್ಯಾಯತೀರ್ಪಿನ ದಿನ ಹಾಗೂ ನಿತ್ಯತ್ವದ ಕುರಿತು ಮಾತಾಡುತ್ತಿವೆ ಎಂದು ಬಹುಪಾಲು ಜನರು ನಂಬುತ್ತಾರೆ. ಆ ಮಟ್ಟಿಗೆ ನೋಡುವದಾದರೆ, ಅವರು "ಕಟ್ಟುನಿಟ್ಟಿನ" preteristಗಳು ಆಗಿರುವದಿಲ್ಲ.

## ಸಾಂಕೇತಿಕ ಅರ್ಥೈಸುವ ದಾರಿ

*ಈ ಅರ್ಥೈಸುವ ದಾರಿಯ ಅರ್ಥವಿವರಣೆ.* ಸಾಂಕೇತಿ ಅರ್ಥೈಸುವ ದಾರಿಯು ಅನೇಕ ಹೆಸರುಗಳಿಂದ ಕರೆಯಲ್ಪಟ್ಟಿರುತ್ತದೆ, ಉದಾಹರಣೆಗೆ ಇತಿಹಾಸದ-ತತ್ವಜ್ಞಾನ ಅರ್ಥೈಸುವ ದಾರಿ, ನಾಟಕೀಯ ವಿಧಾನ, ಆದರ್ಶವಾದಿ ಅಭಿಪ್ರಾಯ, ಪ್ರವಾದನಾತ್ಮಕ-ತತ್ವ ವ್ಯವಸ್ಥೆ, ಆತ್ಮೀಕ ಪಂಥ, ಮತ್ತು ಕಾಲಾತೀತ ಭಾವನೆ ಇತ್ಯಾದಿ. ನಾವು "ಸಾಂಕೇತಿ ಅರ್ಥೈಸುವ ದಾರಿ" ಎಂಬ ಪದವನ್ನು ಬಳಸುತ್ತೇವೆ ಯಾಕೆಂದರೆ ನಮಗೆ ಅತಿ ಪರಿಚಿತವಿರುವ ಪದವು ಅದೇ ಆಗಿದೆ.

ಸಾಂಕೇತಿಕ ಅರ್ಥೈಸುವ ದಾರಿಯ ಅಭಿಪ್ರಾಯವು ಏನೆಂದರೆ ಪ್ರಕಟನೆ ಪುಸ್ತಕವು *ಪ್ರತಿಯೊಂದು* ಯುಗದಲ್ಲಿ ನಡೆಯುವ ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಹೋರಾಟ, ಅಂತಿಮವಾಗಿ ಒಳ್ಳೇದು ಜಯವನ್ನು ಹೊಂದುವಂಥ ಹೋರಾಟದ ಕುರಿತು ಮಾತಾಡುತ್ತದೆ ಎಂಬದೆ. ಅದು ಹೆಚ್ಚು ಅಥವಾ ಕಡಿಮೆ ಪ್ರಕಟನೆ ಪುಸ್ತಕದ ಐತಿಹಾಸಿಕ ಹಿನ್ನಲೆಯ ಬಗ್ಗೆ ಕಾಳಜಿಯಿಲ್ಲದ್ದಾಗಿದೆ ಮತ್ತು ಪುಸ್ತಕದಲ್ಲಿರುವ ಘಟನೆಗಳನ್ನು, ಜನರನ್ನು, ಅಥವಾ ಸ್ಥಳಗಳಾವವೆಂದು ಗುರುತಿಸುವದಕ್ಕೆ ಸ್ವಲ್ಪ ಅಥವಾ ಯಾವದೇ ಪ್ರಯತ್ನವನ್ನು ಮಾಡುವದಿಲ್ಲ. ಈ ಅರ್ಥೈಸುವ ದಾರಿಯು ದರ್ಶನಗಳ ಒಟ್ಟಾರೆಯಾದ ಮುಖ್ಯತ್ವವು ಅವುಗಳ ವಿವರಣೆಗಳಿಗಿಂತಲೂ ಹೆಚ್ಚು ಪ್ರಾಮುಖ್ಯವಾದದ್ದೆಂಬುದರ ಮೇಲೆ ಒತ್ತು ಕೊಡುತ್ತದೆ.

ಬಹುಶಃ ಸಾಂಕೇತಿ ಅರ್ಥೈಸುವ ದಾರಿಯು William Hendriksenನಿಂದ ಪ್ರತಿನಿಧಿಸಲ್ಪಟ್ಟಿರುತ್ತದೆ. ಆತನು ತನ್ನ ಪ್ರಮೇಯ ೬ರಲ್ಲಿ, ಹೀಗೆ ಬರೆಯುತ್ತಾನೆ,

> ಮುದ್ರೆಗಳು, ತುತೂರಿಗಳು, ಕೋಪದ ಪಾತ್ರಗಳು ಮತ್ತು ಅದರಂತಹ ಸಂಕೇತಗಳು ನಿರ್ದಿಷ್ಟವಾದ ಘಟನೆಗಳನ್ನಾಗಲಿ, ಇಂಥಿಂಥ ಸಂಭವಗಳನ್ನಾಗಲಿ, ಇತಿಹಾಸದ ವಿವರಗಳನ್ನಾಗಲಿ ಸೂಚಿಸುವದಿಲ್ಲ, ಆದರೆ ಪ್ರಪಂಚದ ಇತಿಹಾಸದುದ್ದಕ್ಕೂ ಕಾರ್ಯಮಾಡುತ್ತಿರುವ ತತ್ವಗಳನ್ನು-ಮಾನವ ನಡವಳಿಕೆ ಮತ್ತು ದೈವಿಕವಾದ ನೈತಿಕ ಸರ್ಕಾರದ ತತ್ವಗಳನ್ನು-ಸೂಚಿಸುತ್ತದೆ; ವಿಶೇಷವಾಗಿ ಹೊಸ ದೈವಿಕ ವ್ಯವಸ್ಥೆಯುದ್ದಕ್ಕೂ ಕಾರ್ಯಮಾಡುವ ತತ್ವಗಳನ್ನು ಸೂಚಿಸುತ್ತದೆ.[30]

Hendriksenನು ಪ್ರಕಟನೆ ಪುಸ್ತಕದ ಐತಿಹಾಸಿಕ ಹಿನ್ನಲೆಯನ್ನು ಸಂಪೂರ್ಣವಾಗಿ ಅಲಕ್ಷಿಸುವದಿಲ್ಲ,[31] ಆದರೆ ಆತನ ವ್ಯಾಖ್ಯಾನ ಪುಸ್ತಕದಲ್ಲಿ ಸಾಂಕೇತಿಕ ಅರ್ಥೈಸುವ ದಾರಿಯು ಎದ್ದು ಕಾಣುತ್ತದೆ.

*ಈ ಅರ್ಥೈಸುವ ದಾರಿಯ ಬಲಗಳು.* ಸಾಂಕೇತಿಕ ಅರ್ಥೈಸುವ ದಾರಿಯು ಎಲ್ಲಾ ಅರ್ಥನಿರೂಪಣೆಯ ವಿಧಾನಗಳಲ್ಲಿ "ಕನಿಷ್ಠ ಅಪಾಯಕಾರಿ" ದಾರಿಯಾಗಿದೆ: ಇದು ಬೇರೆ ಕೆಲವು ಅಭಿಪ್ರಾಯಗಳಲ್ಲಿರುವಂತಹ ಲಂಗುಲಗಾಮು ಇಲ್ಲದ ಊಹೆಗಳನ್ನು ದೂರವಿಡುತ್ತದೆ. ಅಷ್ಟುಮಾತ್ರವಲ್ಲದೆ, ಇದು ಕಾಲಾತೀತ ತತ್ವಗಳ ಮೇಲೆ ಮುಖ್ಯಗಮನವನ್ನು ಇಡುತ್ತದೆ, ಇದು ಅತ್ಯಂಥ ಕಾರ್ಯರೂಪದ ದಾರಿಗಳಲ್ಲೊಂದಾಗಿದೆ. ಒಬ್ಬನಿಗೆ ಪ್ರಕಟನೆ ಪುಸ್ತಕದ ಹಿನ್ನಲೆಯ

ಕುರಿತು ಏನನ್ನಾದರೂ ತಿಳಿದಿದ್ದರೂ ಸರಿಯೇ ಅಥವಾ ತಿಳಿಯದಿದ್ದರೂ ಸರಿಯೇ, ಆಗಲೂ ಇದು ಒಂದು ಸಂದೇಶವನ್ನು ಹೊಂದಿರುತ್ತದೆ - ಮೊದಲ ಶತಮಾನ ಹಾಗೂ ಈಗಿನ ಕಾಲ ಎರಡಕ್ಕೂ ಜೀವಾಳವಾಗಿರುವ ಒಂದು ಸಂದೇಶ: "ಕರ್ತನು ಆಳುತ್ತಾನೆ! ಕರ್ತನಲ್ಲಿ ದೃಢವಾಗಿರಿ! ಆತನ ಧ್ಯೇಯು ಜಯಶಾಲಿಯಾಗುವದು!"

*ಈ ಅರ್ಥೈಸುವ ದಾರಿಯ ದುರ್ಬಲತೆ.* ಶಾಸ್ತ್ರೀಯ ಸಾಂಕೇತಿಕ ಅರ್ಥೈಸುವ ದಾರಿಯ ಪ್ರಾಥಮಿಕ ದುರ್ಬಲತೆಯು ಯಾವದೆಂದರೆ ಪ್ರಕಟನೆ ಪುಸ್ತಕವು ಬರೆಯಲ್ಪಟ್ಟ ಕಾಲದಲ್ಲಿದ್ದ ಆತ್ಮೀಕ ಹಾಗೂ ರಾಜಕೀಯ ಪರಿಸ್ಥಿತಿಯ ಕುರಿತು ಒತ್ತು ಕೊಡದಿರುವಿಕೆಯೇ. ನಾವು ಪುಸ್ತಕ ಮೂಲಭೂತ ಬೋಧನೆಗಳಿಂದ ಆಶೀರ್ವದಿಸಲ್ಪಡಬೇಕಾದರೆ ಪುಸ್ತಕದ ಐತಿಹಾಸಿಕ ಹಿನ್ನಲೆಯೊಂದಿಗೆ ಪರಿಚಿತರಾಗಿರಬೇಕಾದ ಅಗತ್ಯವಿಲ್ಲ. ಹೇಗೂ, ಒಬ್ಬನು ಪ್ರಕಟನೆ ಪುಸ್ತಕವನ್ನು ಓದಿದ ಹಾಗೆ ಮತ್ತು ಅಧ್ಯಯನ ಮಾಡಿದ ಹಾಗೆ, ಅದು ನಿರ್ದಿಷ್ಟವಾದ ಐತಿಹಾಸಿಕ ಉಲ್ಲೇಖನಗಳನ್ನೊಳಗೊಂಡಿರುತ್ತದೆ ಎಂಬ ನಿರ್ಣಯಕ್ಕೆ ಬರುವದರಿಂದ ತಪ್ಪಿಸಿಕೊಳ್ಳುವದು ಕಷ್ಟಕರವಾಗಿರುತ್ತದೆ. ಉದಾಹರಣೆಗೆ, 17ನೇ ಅಧ್ಯಾಯದ ಜಾರಸ್ತ್ರೀಯು "ಭೂರಾಜರ ಮೇಲೆ ಅಧಿಕಾರ ಹೊಂದಿರುವ ಮಹಾನಗರಿಯೇ" (ವ. 18) ಮತ್ತು ಏಳು ಬೆಟ್ಟಗಳ ಮೇಲೆ ಕುಳಿತುಕೊಂಡವಳು (ವ. 9) ಎಂದು ಗುರುತಿಸಲ್ಪಟ್ಟಿರುತ್ತಾಳೆ. ಈ ಬಣ್ಣನೆಯು ಸ್ಪಷ್ಟವಾಗಿ ರೋಮ್ ನಗರವನ್ನು ಸೂಚಿಸುತ್ತದೆ, ಅದು ಏಳು ಬೆಟ್ಟಗಳ ಮೇಲೆ ಕಟ್ಟಲ್ಪಟ್ಟದ್ದಾಗಿದೆ. ಹಾಗಾದರೆ ಸಾಂಕೇತಿಕ ಅರ್ಥೈಸುವ ದಾರಿಯು ಕೆಲವೊಂದು ಬದಲಾವಣೆ ಸೂಕ್ತವಾಗಿರುತ್ತದೆಂದು ತೋರುತ್ತದೆ.

## "ಬುದ್ಧಿವಂತಿಕೆಯಿಂದ-ಆರಿಸಿಕೊಳ್ಳಿರಿ" ಅರ್ಥೈಸುವ ದಾರಿ

ಈ ಅರ್ಥೈಸುವ ದಾರಿಯು ಮುಂಚಿನ ದಾರಿಗಳಿಗಿಂತ ಭಿನ್ನವಾದದ್ದಲ್ಲ. ಬದಲಾಗಿ, ಇದು ಒಂದು ಸಲಹೆಯಾಗಿದ್ದು ಪ್ರತಿಯೊಂದು ಅರ್ಥೈಸುವ ದಾರಿಯು ಬಲಗಳನ್ನು ಹಾಗೂ ದುರ್ಬಲಗಳನ್ನು ಹೊಂದಿದೆಯಾದ್ದರಿಂದ ಹಲವಾರು ಅರ್ಥೈಸುವ ದಾರಿಗಳ ಉತ್ತಮ ಅಂಶಗಳನ್ನು ಆರಿಸಿಕೊಳ್ಳಬೇಕು ಎಂದು ತಿಳಿಸುವದಾಗಿದೆ. Leon Morris ನಂತಹ ಅನೇಕ ಪ್ರಸ್ತುತ ಕಾಲದ ವ್ಯಾಖ್ಯಾನಕಾರರು ಈ ವಿಧಾನವನ್ನು ಅನುಸರಿಸಿರುತ್ತಾರೆ.[32] ಈ ಕಾರ್ಯವಿಧಾನದ ಒಂದು ಉತ್ತಮವಾದ ದೃಷ್ಟಾಂತವನ್ನು Ray Summersನ *Worthy Is the Lamb* ಎಂಬ ಪುಸ್ತಕದಲ್ಲಿ ಕಾಣಬಹುದಾಗಿದೆ. Summersನು ಮೂಲಭೂತವಾಗಿ ಒಬ್ಬ preterist (ಗತಕಾಲಿಕವಾದಿ); ಆದರೆ ಈ ದಿನಕ್ಕೆ ಅನ್ವಯಿಸಿಕೊಳ್ಳುವ ಅಗತ್ಯವಿದೆ ಎಂಬುದನ್ನು ಮನಗಾಣುತ್ತಾನೆ, ಆದ್ದರಿಂದ ಸಾಂಕೇತಿಕ ಅರ್ಥೈಸುವ ದಾರಿಯ ಅಂಶಗಳನ್ನು ಬಳಸಿಕೊಂಡು ಈಗಿನ-ದಿನದ ಪ್ರಭಾವವನ್ನು ಸೇರ್ಪಡೆಗೊಳಿಸುತ್ತಾನೆ. ಆತನು ತನ್ನ ಈ ಸಂಯೋಜನೆಗೊಳಿಸುವ ದಾರಿಯನ್ನು "ಐತಿಹಾಸಿಕ-ಹಿನ್ನಲೆ ವಿಧಾನ" ಎಂದು ಕರೆಯುತ್ತಾನೆ.[33] ಇದೇ ಅರ್ಥೈಸುವ ದಾರಿಗೆ ಬಳಸಲಾಗುವ ಇನ್ನೊಂದು ಹೆಸರು "ಐತಿಹಾಸಿಕ-ಪ್ರವಾದನಾತ್ಮಕ" ಎಂಬದೆ. ಇದನ್ನು "*preterist/*ಸಾಂಕೇತಿಕ ಅಭಿಪ್ರಾಯ" ಎಂದು ಸಹ ಕರೆಯಬಹುದು, ಅಂದರೆ, ಸಾಕೇತಿಕಕ್ಕಿಂತಲೂ preteristದ ಮೇಲೆ ಹೆಚ್ಚು ಒತ್ತು ಕೊಡುವಂತಹ ಅರ್ಥೈಸುವ ದಾರಿ ಎಂದಾಗಿರುತ್ತದೆ.

ಜನರು ಎಲ್ಲಿಯೇ ಜೀವಿಸಿದಾಗ್ಯೂ ಅಥವಾ ಶೈಕ್ಷಣಿಕ ಹಿನ್ನಲೆಯುಳ್ಳವರಾಗಿದ್ದಾಗ್ಯೂ ಅವರಿಗೆ ಕೊಡುವದಕ್ಕೆ ಸಾಂಕೇತಿಕ ಅರ್ಥೈಸುವ ದಾರಿಯು ಬಹಳಷ್ಟನ್ನು ಹೊಂದಿದೆ ಎಂದು ನಾವು ನಂಬುತ್ತೇವೆ. ಹಾಗಿದ್ದರೂ, ಐತಿಹಾಸಿಕ ಹಿನ್ನಲೆಯ ಕುರಿತು ಸ್ವಲ್ಪ ತಿಳುವಳಿಕೆಯಿದ್ದರೆ ಅದು ಪುಸ್ತಕದ ಕುರಿತಾದ ನಮ್ಮ ತಿಳುವಳಿಕೆಗೆ ಸಹಾಯವನ್ನು ಮಾಡಬಲ್ಲದು ಎಂದು ನಾವು

ಯೋಚಿಸುತ್ತೇವೆ. ಆದುದರಿಂದ, ನಾವು ಈ ಸಂಯೋಜನೆಯನ್ನು ಸಲಹೆ ಮಾಡುತ್ತೇವೆ: "ಸಾಕೇತಿಕ/preterist ದೃಷ್ಟಿಕೋನ" - ಬೇರೆ ಮಾತುಗಳಲ್ಲಿ ಹೇಳುವದಾದರೆ, preteristಕ್ಕಿಂತಲೂ ಸಾಂಕೇತಿಕದ ಮೇಲೆ ಹೆಚ್ಚು ಒತ್ತಿನೊಂದಿಗೆ ಇರುವದು.

ಸಾರಾಂಶದಲ್ಲಿ, ಒಬ್ಬನು ಪ್ರಕಟನೆ ಪುಸ್ತಕದ ಅಧ್ಯಯನವನ್ನು ಮುಂದುವರೆಸಿದಂತೆ, ಆತನು ಬಹುಶಃ ಪುಸ್ತಕವನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂಬುದಕ್ಕೆ ತನ್ನದೇ ಆಗಿರುವ ದಾರಿಯನ್ನು ಅಭಿವೃದ್ಧಿಪಡಿಸಿಕೊಳ್ಳುವನು. ಈ ಪ್ರಕ್ರಿಯೆಯು ಸಂಭವಿಸಿದ ಹಾಗೆ, ಅತಿ ಹೆಚ್ಚಾಗಿ ಸಾಂಕೇತಿಕ ಮತ್ತು preterist ಅರ್ಥೈಸುವ ದಾರಿಗಳನ್ನು ಅವಲಂಭಿಸುವದು, ಮತ್ತು ಭವಿಷ್ಯವಾದದ ಅರ್ಥೈಸುವ ದಾರಿಯಿಂದ ದೂರವಿರುವದು ಸೂಕ್ತವಾದದ್ದು, ಮತ್ತು ನಿರಂತರವಾದ-ಐತಿಹಾಸಿಕ ಅರ್ಥೈಸುವ ದಾರಿಯು ಬಳಸುವ ರೀತಿಯಲ್ಲಿ ಕಾಲ-ನಿರ್ಣಯ ಮಾಡುವದರ ಅಪಾಯವನ್ನು ಗುರುತಿಸಿಕೊಳ್ಳಬೇಕು.

"ಬುದ್ಧಿವಂತಿಕೆಯಿಂದ-ಆರಿಸಿಕೊಳ್ಳಿರಿ" ಎಂಬುದಕ್ಕಿರುವ ಇತರ ಬಿರುದುಗಳಲ್ಲಿ "ಸಾರಸಂಗ್ರಹಿ" ಅಥವಾ "ಸಮನ್ವವಾದಿ" ಎಂಬವುಗಳು ಸೇರಿರುತ್ತವೆ. ನಾವು ಈ ಅರ್ಥೈಸುವ ದಾರಿಯನ್ನು ಕೇವಲ 2 ತಿಮೊಥೆ 2:15ರಲ್ಲಿ ನೀಡಲಾಗಿರುವ ಕರೆಗೆ ವಿಧೇಯರಾಗುವದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನವೆಂದಷ್ಟೆ ಯೋಚಿಸಲು ಇಷ್ಟಪಡುತ್ತೇವೆ: "ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನು."

ನೀವು ಸ್ನೇಹಿತನೊಬ್ಬನ ಸಂಗಡ ಪ್ರಕಟನೆ ಪುಸ್ತಕವನ್ನು ಚರ್ಚಿಸುವ ಪ್ರಯತ್ನವನ್ನು ಮಾಡಿದ್ದರೆ, ತಿಳಿಯಪಡಿಸುವದಕ್ಕೆ ಸಂಪೂರ್ಣ ಅಶಕ್ತರಾಗಿರುವ ಅನುಭವದೊಂದಿಗೆ ಬಹಳ ಹತಾಶೆಗೊಂಡಿರಬಹುದಾಗಿದೆ. ಪ್ರತಿಯೊಬ್ಬನು ಪುಸ್ತಕಕ್ಕೆ ಒಂದು ಬೇರೆ ಬೇರೆಯಾದ ಅರ್ಥೈಸುವ ದಾರಿಯನ್ನು ಅನುಸರಿಸುವದರ ಫಲಿತವು ಅದಾಗಿರಬಲ್ಲದು. ಇಲ್ಲಿ ಪರಿಸ್ಥಿತಿಯು ಒಬ್ಬನು ಆಂಗ್ಲ ಶಬ್ದಕೋಶವನ್ನು ಹಾಗೂ ಮತ್ತೊಬ್ಬನು ಜರ್ಮನ್ ಶಬ್ದಕೋಶವನ್ನು ಇಟ್ಟುಕೊಂಡು "cat" (ಬೆಕ್ಕು) ಎಂಬುದನ್ನು ಹೇಗೆ ಉಚ್ಚರಿಸಬೇಕೆಂಬುದಾಗಿ ವಾಗ್ವಾದ ಮಾಡಿದ ರೀತಿಯದ್ದಾಗಿರುತ್ತದೆ. ಇಬ್ಬರು ವ್ಯಕ್ತಿಗಳು ಪ್ರಕಟನೆ ಪುಸ್ತಕವನ್ನು ಪ್ರಯೋಜನಕರವಾಗಿ ಚರ್ಚೆ ಮಾಡುವದಕ್ಕೆ ಮುನ್ನ, ಅದನ್ನು ಹೇಗೆ ಅರ್ಥೈಸಬೇಕೆಂಬ ದಾರಿಯ ಬಗ್ಗೆ *ಇತ್ಯರ್ಥ* ಮಾಡಿಕೊಳ್ಳತಕ್ಕದ್ದು.

ನಾವು ಅಧ್ಯಯನ ಮಾಡಿರುವ ಅರ್ಥೈಸುವ ದಾರಿಗಳ ಕುರಿತು ಒಂದು ಅಂತಿಮವಾಗಿ ಗಮನವನ್ನು ಹರಿಸುವದು ಸೂಕ್ತವಾಗಿರುತ್ತದೆ. ಆಶ್ಚರ್ಯಕರವೆಂದರೆ, ಎಲ್ಲಾ ನಾಲ್ಕು ಅರ್ಥೈಸುವ ದಾರಿಗಳ ಪ್ರಾಥಮಿಕ ಮುಕ್ತಾಯವು ಒಂದೇ ಆಗಿರುತ್ತದೆ: ಎಲ್ಲವನ್ನೂ ಹೇಳಿದ ಮೇಲೆ ಮತ್ತು ಮಾಡಿದ ಬಳಿಕ, ನಾವು ದೇವರಿಗೆ ನಂಬಿಗಸ್ತರಾಗಿ ಉಳಿಯುವದಾದರೆ, *ನಾವು ಜಯಗೊಳ್ಳುವೆವು*. ಆ ಸತ್ಯವನ್ನು ನಿಮ್ಮ ಪೂರ್ಣ ಬಲದೊಂದಿಗೆ ಹಿಡಿದುಕೊಳ್ಳಿರಿ.

## ಸೂಚನೆಗಳು ಮತ್ತು ಸಂಕೇತಗಳು

ನಾವು ಪ್ರಪಂಚದ ನಕ್ಷೆಯನ್ನು ಬರೆಯುವದಕ್ಕೆ ಆರಂಭಿಸಿದ ವೇಳೆ, ಭೂಮಿಯ ಬಹಳಷ್ಟು ಭಾಗವು ಇನ್ನೂ ಅನ್ವೇಷಿಸಲ್ಪಡದೆ ಇತ್ತು. ಈ ಆರಂಭಿಕ ನಕ್ಷೆ ತಯಾರಕರ ಪಾಲಿಗಾದರೋ, ತಿಳಿಯದೆ ಇದ್ದ ಪ್ರಾಂತ್ಯಗಳು ನಿಷೇಧಿಸಲ್ಪಟ್ಟವುಗಳು ಹಾಗೂ ಅಪಾಯಕಾರಿಯಾದವುಗಳು, ಭೀತಿಯುಂಟು ಮಾಡುವ ಪೌರಾಣಿಕ ಜೀವಿಗಳಿರುವಂಥವುಗಳು ಎಂದು ಗ್ರಹಿಸಲ್ಪಟ್ಟಿದ್ದವು. ಒಂದು ಪ್ರಾಚೀನ ಕಾಲದ ನಕ್ಷೆಯೊಂದು ಒಂದು ಪರಿಚಯವಿಲ್ಲದ ಪ್ರಾಂತ್ಯದ ಕಡೆಗೆ ಬಾಣದ ಗುರುತು ಹಾಕಲ್ಪಟ್ಟದ್ದಾಗಿತ್ತು ಮತ್ತು ಅದರ ಮುಂದೆ ಹೀಗೆ ಬರೆದಿತ್ತು: "ಇಲ್ಲಿ ಪುರಾತನ

ಘಟಸರ್ಪಗಳಿರಲಿ!" ಎಂದಿತ್ತು - "ಇಲ್ಲಿವೆ ನೋಡಿರಿ ಪುರಾತನ ಘಟಸರ್ಪಗಳು" ಎಂದು ಹೇಳುವ ಪ್ರಾಚೀನ ರೀತಿಯಾಗಿತ್ತು.

ಬಹಳಷ್ಟು ಜನರಿಗೆ, ಪ್ರಕಟನೆ ಪುಸ್ತಕವು ಅಪರಿಚಿತವಾಗಿರುವ ಪ್ರಾಂತ್ಯವಾಗಿರುತ್ತದೆ ಮತ್ತು ಅನ್ವೇಷಿಸಲ್ಪಡದ ಜಗತ್ತಿನ ಕುರಿತು ಆರಂಭಿಕ ನಕ್ಷೆ ತಯಾರಿಕರಿಗಿದ್ದ ಅದೇ ಭಯ ಹಾಗೂ ಗಾಭರಿಯಿಂದಲೇ ಪ್ರಕಟನೆ ಪುಸ್ತಕವನ್ನು ಇವರು ಕಾಣುವವರಾಗಿರುತ್ತಾರೆ. ಇಂದಿನ ಅಂಜಿಕೆಯುಳ್ಳ ಅನ್ವೇಷಕರು ಸಹ ಸತ್ಯಪೂರ್ವಕವಾಗಿ ಹೀಗೆ ಹೇಳಬಲ್ಲರು, "ಇಲ್ಲೊಂದು ಪುರಾತನ ಘಟಸರ್ಪ ಇರಲಿ!" ಎಂದು ಹೇಳಬಹುದಾಗಿದೆ ಯಾಕೆಂದರೆ ಪ್ರಕಟನೆ ಪುಸ್ತಕದ ಹೃದಯ ಭಾಗದಲ್ಲಿ ನಾವು ಹೀಗೆ ಓದುತ್ತೇವೆ "ಕೆಂಪಾದ ಮಹಾ ಘಟಸರ್ಪವಿತ್ತು; ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಇದ್ದವು" (12:3). ಘಟಸರ್ಪದ ಜೊತೆಯಲ್ಲಿ, ಪುಸ್ತಕದ ಭೂಪ್ರದೇಶದಲ್ಲಿ ಇತರ ವಿಚಿತ್ರ ಹಾಗೂ ವಿಲಕ್ಷಣವಾದ ಜೀವಿಗಳು ಅಲೆದಾಡುತ್ತವೆ: ಮುಂದೆ ಹಾಗೂ ಹಿಂದೆ ಕಣ್ಣುಗಳುಳ್ಳ ರೆಕ್ಕೆಯುಳ್ಳ ಜೀವಿಗಳು (4:6-8), ಚೇಳಿನ ರೀತಿ ಬಾಲಗಳುಳ್ಳ ಮಿಡತೆಗಳು (9:3-11), ಏಳು ತಲೆಗಳುಳ್ಳ ಭಯಾನಕವಾದ ಮೃಗ (13:1, 2), ಮತ್ತು ಕಪ್ಪೆಗಳ ರೀತಿಯಲ್ಲಿ ಕಾಣಿಸುವ ಮೂರು ಅಶುದ್ಧಾತ್ಮಗಳು (16:13, 14) ಇತ್ಯಾದಿಗಳು. ಈ ವಿಚಿತ್ರವಾದ ಜೀವಿಗಳು - ಜೊತೆಗೆ ಪುಸ್ತಕದಲ್ಲಿರುವ ಇತರ ಭಯಹುಟ್ಟಿಸುವ ಚಿತ್ರಗಳು - ಅಂಜಿಕೆಯುಳ್ಳ ಪ್ರಯಾಣಿಕನಿಗೆ ಪ್ರಕಟನೆ ಪುಸ್ತಕದ ನೀಳನೋಟವನ್ನು ಅಪಶಕುನದಂತೆ ಕಾಣುವ ಹಾಗೆ ಮಾಡಬಲ್ಲವು.

ಈ ವಿಭಾಗದ ಉದ್ದೇಶವು ಈ ಅಪರಿಚಿತ ಚಿತ್ರಗಳೊಂದಿಗೆ ಹೆಚ್ಚು ನಿರಾಳಗೊಳ್ಳುವಂತೆ ವಾಚಕನಿಗೆ ಸಹಾಯ ಮಾಡುವದೇ ಆಗಿದೆ. ನಾವು ಸಾಮಾನ್ಯವಾಗಿರುವ ಸಂಕೇತಗಳು ಹಾಗೂ ನಿರ್ದಿಷ್ಟವಾಗಿ ಪ್ರಕಟನೆ ಪುಸ್ತಕದಲ್ಲಿರುವ ಸಂಕೇತಗಳ ಬಗ್ಗೆ ಕಲಿಯಲಿದ್ದೇವೆ.

## ಸಂಕೇತತತ್ವ

"ಸಂಕೇತ" ಎಂಬುದು ಗ್ರೀಕ್ ಭಾಷೆಯ ಕ್ರಿಯಾಪದವಾಗಿರುವ συμβάλλω (*sumballō*) ಎಂಬುದರ ನಾಮಪದವಾಗಿದೆ, ಅದು σύν (*sun*, "ಯೊಂದಿಗೆ") ಮತ್ತು βάλλω (*ballō*, "ಎಸೆಯುವದು") ಎಂಬ ಪದಗಳ ಸಂಯೋಜನೆಯಾಗಿದೆ. "ಸಂಕೇತ" ಎಂಬುದರ ಅರ್ಥವು "ಎಸೆಯಲ್ಪಟ್ಟಿರುವಂಥದ್ದು [ಬೇರೆ ಯಾವದೋ ಒಂದರ ಜೊತೆಯಲ್ಲಿ]" ಎಂದಾಗಿರುತ್ತದೆ. "ಸಂಕೇತ" ಎಂಬ ಪದವು ಭಾವನೆಯೊಂದನ್ನು ತಿಳಿಯಪಡಿಸುವದಕ್ಕೆ "ಒಟ್ಟಾಗಿ ಎಸೆಯಲ್ಪಟ್ಟಿರುವ" ಎರಡು ಭಾವನೆಗಳನ್ನು ಸೂಚಿಸುತ್ತದೆ - ಒಂದು ಸ್ಪರ್ಶಿಸಿ ನೋಡಲ್ಪಡತಕ್ಕದ್ದು ಮತ್ತು ಇನ್ನೊಂದು ಸ್ಪರ್ಶಿಸಿ ನೋಡಲಿಕ್ಕಾಗದಂಥದ್ದು. ಈ ಪದವು "ಸಾಮ್ಯ" ಎಂಬ ಪದದ ರೀತಿಯಾಗಿದ್ದು, ಅದರ ಅರ್ಥವು "ಜೊತೆಯಾಗಿ ಎಸೆಯಲ್ಪಟ್ಟದ್ದು" ಎಂದಾಗಿರುತ್ತದೆ. ಶಬ್ದಕೋಶವು "ಸಂಕೇತ" ಎಂಬ ಪದದ ಅರ್ಥವನ್ನು ಹೀಗೆ ನಿರೂಪಿಸುತ್ತದೆ, "ಬೇರೆ ಒಂದು ಸಂಗತಿಯನ್ನು ಅದರೊಂದಿಗಿನ ಸಂಬಂಧ, ಹೋಲಿಕೆ, ಅಥವಾ ರೀತಿನೀತಿ ಮೂಲಕ ಪ್ರತಿನಿಧಿಸುವಂಥದ್ದು, ವಿಶೇಷವಾಗಿ ಕಣ್ಣಿಗೆ ಕಾಣಿಸದಂಥ ಒಂದನ್ನು ಪ್ರತಿನಿಧಿಸುವ ಭೌತಿಕ ವಸ್ತು."[34]

ಜನರು ನಿಯತಕ್ರಮವಾಗಿ ಆಗಾಗ ಸಂಕೇತಗಳ ಜೊತೆ ವ್ಯವಹರಿಸುತ್ತಿರುತ್ತಾರೆ. ನಾವು ಒಂದು ತಲೆಬುರುಡೆ ಹಾಗೂ ಕೆಳಗೆ ಅಡ್ಡವಾಗಿ ಕತ್ತರಿ ಗುರುತಿನಂತೆ ಎಲುಬುಗಳನ್ನಿಟ್ಟಿರುವ ಚಿತ್ರದ ಬಾಟಲಿಯೊಂದನ್ನು ನೋಡುವಾಗ, ಅದರಲ್ಲಿ ವಿಷವಿರುತ್ತದೆಂದು ನಮಗೆ ತಿಳಿಯುತ್ತದೆ-ಆದ್ದರಿಂದ ನಾವು ಅದನ್ನು ಮಕ್ಕಳ ಕೈಗೆ ಸಿಕ್ಕದ ಸ್ಥಳದಲ್ಲಿ ಇಡುತ್ತೇವೆ. ತಲೆಬುರುಡೆ ಹಾಗೂ ಕತ್ತರಿ ಗುರುತಿನಂತೆ ಇಟ್ಟಿರುವ ಎಲುಬುಗಳು *ವಿಷದ ಚಿತ್ರವಲ್ಲ*;

ಬದಲಾಗಿ ಅವುಗಳು ವಿಷಕ್ಕೆ *ಸಂಕೇ ತ*ವಾಗಿವೆ. ಅಮೆರಿಕದಲ್ಲಿ ಅನೇಕ ಸಾರಿ ಸಂಪಾದಕೀಯ ವ್ಯಂಗ ಚಿತ್ರಗಳಲ್ಲಿ ಆಗಾಗ ಆನೆ ಮತ್ತು ಕತ್ತೆ ಕಾಣಿಸಿಕೊಳ್ಳುತ್ತವೆ. ಒಂದು ಆನೆಯು ರಿಪಬ್ಲಿಕ್ ರಾಜಕೀಯ ಪಕ್ಷದ ಸಂಕೇತವಾಗಿದ್ದರೆ, ಒಂದು ಕತ್ತೆಯು ಡೆಮೊಕ್ರಟಿಕ್ ಪಕ್ಷದ ಸಂಕೇತವಾಗಿದೆ.

ಪ್ರಕಟನೆ ಪುಸ್ತಕವು ಜೀವನದ ಪ್ರತಿಯೊಂದು ಕ್ಷೇತ್ರದಿಂದ ಸಂತೇತಗಳನ್ನು ಸಮೃದ್ಧವಾಗಿ ಹೊಂದಿರುವದಾಗಿದೆ. ನಾವು ಪ್ರಕಟನೆ ಪುಸ್ತಕವನ್ನು ಅರ್ಥಮಾಡಿಕೊಳ್ಳಲು ಬಯಸುವದಾದರೆ, ಇವುಗಳು "ಸಂಬಂಧ ಅಥವಾ ಹೋಲಿಕೆ ಮೂಲಕ ಬೇರೊಂದನ್ನು ಪ್ರತಿನಿಧಿಸುತ್ತವೆ" ಎಂಬುದನ್ನು ಅರ್ಥಮಾಡಿಕೊಳ್ಳತಕ್ಕದ್ದು. ಅಗೋಚರವಾಗಿರುವ ಸತ್ಯಗಳನ್ನು ಪ್ರತಿನಿಧಿಸುವದಕ್ಕೆ ಗೋಚರವಾಗಿರುವ ವಸ್ತುಗಳು ಬಳಸಲ್ಪಡುವವು.

ಪ್ರಕಟನೆ ಪುಸ್ತಕದಲ್ಲಿರುವ *ಎಲ್ಲವೂ* ಸಾಂಕೇತಿಕವಾಗಿರುವದಿಲ್ಲ. 1:4ನೇ ವಚನವು ಯೋಹಾನನನ್ನು ಹೆಸರಿಸುವಾಗ, ಅದು ಯಾವದೋ "ಅಗೋಚರವಾದ ಭಾವನೆ" ಅಲ್ಲ, ಆದರೆ ಯೋಹಾನನೆಂಬ ಒಬ್ಬ ನಿಜವಾದ ವ್ಯಕ್ತಿಯನ್ನೇ ಸೂಚಿಸುತ್ತದೆ. ದೇವರು, ಕ್ರಿಸ್ತನು, ಮತ್ತು ಪವಿತ್ರಾತ್ಮನ ಕುರಿತ ಪ್ರಸ್ತಾಪಗಳು (1:1, 4, 5) ದೇವತ್ವದ ಸದಸ್ಯರನ್ನು ಕುರಿತು ಮಾತಾಡುತ್ತಿವೆ, ಹೊರತು ನಾವು ಕಂಡು ಹಿಡಿಯಬೇಕಾಗಿರುವ ಯಾವದೋ ಗುಪ್ತವಾಗಿರುವ ಸತ್ಯವನ್ನು ಅಲ್ಲ. ಹಾಗಾದರೆ, ಪ್ರಕಟನೆ ಪುಸ್ತಕವು ಸಾಂಕೇತಿಕ ಹಾಗೂ ಅಕ್ಷರಶಃ ಭಾಷೆಯ ಸಮ್ಮಿಶ್ರಣವಾಗಿರುತ್ತದೆ. ಹೇಗೂ, ಇದೊಂದು ಅಂತ್ಯಕಾಲಿಕ ಸಾಹಿತ್ಯವಾಗಿದೆಯಾದ್ದರಿಂದ, ಪುಸ್ತಕದಲ್ಲಿ ಸಾಂಕೇತಿಕ ಭಾಷೆಯು *ಪ್ರಬಲವಾಗಿರುತ್ತದೆ.*

## ಸಂಕೇತಗಳನ್ನು ಅರ್ಥಮಾಡಿಕೊಳ್ಳುವದು

ಪ್ರಕಟನೆ ಪುಸ್ತಕದ ಪ್ರಥಮ ವಾಚಕರು "ಅಂತ್ಯಕಾಲಿಕ ಬರಹವನ್ನು ಗೌರವಿಸಿದರು ಮತ್ತು ಒಬ್ಬ ವ್ಯಕ್ತಿಯು ಅಂತಹ ಪುಸ್ತಕವೊಂದನ್ನು ಓದುವಾಗ ಅನುಸರಿಸತಕ್ಕ ಕೆಲವೊಂದು ಆಂತರಿಕ ನಿಯಮಗಳನ್ನು ಅರ್ಥಮಾಡಿಕೊಂಡಿದ್ದರು."[35] ಆ "ನಿಮಯಗಳು" ವಿಷಯವಾಗಿರುವ ಕೆಲವು ವಿಚಾರಗಳನ್ನು ನಾವು ಆಲೋಚಿಸಿಕೊಳ್ಳೋಣ.

ಅನುಸರಿಸಬೇಕಾಗಿರುವ ಅತ್ಯಂಥ ಪ್ರಾಮುಖ್ಯವಾದ ತತ್ವವೆಂದರೆ ಇದಾಗಿದೆ: *ಪ್ರಕಟನೆ ಪುಸ್ತಕವು ಸಂಕೇತಗಳ ಮೂಲಕ ಸಂದೇಶವನ್ನು ತಿಳಿಯಪಡಿಸುತ್ತದೆ, ಮತ್ತು ಅದಕ್ಕನುಗುಣವಾಗಿಯೇ ಒಬ್ಬನು ಅದರ ಅರ್ಥನಿರೂಪಣೆ ಮಾಡತಕ್ಕದ್ದು.* ಈ ತತ್ವದ ಅರ್ಥವೇನೆಂದರೆ ಪ್ರಕಟನೆ ಪುಸ್ತಕದಲ್ಲಿ ನಾವು ಓದುವ ಬಹಳಷ್ಟು ಕಾರ್ಯವು ಸಾಂಕೇತಿಕವಾಗಿರುವದರಿಂದ, "ನಾವು ಅದನ್ನು ಅರ್ಥೈಸುವ ವೇಳೆ ರೂಢಿಯಾಗಿ ಬಳಸುವ ನಿಯಮವನ್ನು ಹಿಮ್ಮೊಗಗೊಳಿಸಬೇಕು."[36] ಸಾಮಾನ್ಯವಾದ ನಿಯಮವು ಇಲ್ಲಿದೆ: ಒಂದು ವಾಕ್ಯಭಾಗವು ಒಂದು ಅಸಾಧ್ಯತೆ ಅಥವಾ ಒಂದು ಅಸ್ಪಷ್ಟತೆಯನ್ನೊಳಗೊಂಡಿರುವ *ಹೊರತು*, ಅದೊಂದು ವಿರುದ್ಧೋಕ್ತಿ ಅಥವಾ ಅಸಾಮಂಜಸ್ಯತೆಯನ್ನು ಹೊಂದಿರುವ *ಹೊರತು*, ಅದೊಂದು ಅನೈತಿಕವಾದ ಅಂತಿಮ ನಿರ್ಣಯಕ್ಕೆ ಬರುವ *ಹೊರತು*, ಸನ್ನಿವೇಶವು ಒಂದು ಸಾಂಕೇತಿಕವಾದ ಬಳಕೆಯನ್ನು ಕೇಳುವ *ಹೊರತು*, ಪ್ರೇರಿತ ಲೇಖಕನು ಸಾಂಕೇತಿಕ ಭಾಷೆಯು ಬಳಸಲ್ಪಟ್ಟಿದೆ ಎಂದು ನಮಗೆ ಹೇಳುವ *ಹೊರತು*, ಅಥವಾ ಸಾಂಕೇತಿಕ ಭಾಷೆಯು ಬಳಸಲ್ಪಟ್ಟಿದೆ ಎಂದು ನಮ್ಮ ಸಾಮಾನ್ಯ ಪರಿಜ್ಞಾನವು ನಮಗೆ ಹೇಳುವ *ಹೊರತು* ಒಂದು ವಾಕ್ಯಭಾಗವನ್ನು ಅಕ್ಷರಶಃ ಎಂದು ಅರ್ಥಮಾಡಿಕೊಳ್ಳತಕ್ಕದ್ದು. ಅಂತ್ಯಕಾಲಿಕ ಭಾಷೆಯ ವಿಷಯದಲ್ಲಿ ಈ ನಿಯಮವನ್ನು ಹಿಮ್ಮೊಗಗೊಳಿಸಬೇಕಾಗಿರುತ್ತದೆ. Summers ಹೀಗೆ ಗಮನಕ್ಕೆ ತರುತ್ತಾನೆ,

> ಸಾಮಾನ್ಯವಾಗಿ ಶಾಸ್ತ್ರದಲ್ಲಿನ ಯಾವದೇ ವಾಕ್ಯಭಾಗದ ಮಾತುಗಳನ್ನು ಸಾಂಕೇತಿಕವಾಗಿ ತೆಗೆದುಕೊಳ್ಳುವದಕ್ಕೆ ಯಾವದಾದರೂ ಕಾರಣವು ಇರುವ ಹೊರತು, ಅವುಗಳನ್ನು ಅವುಗಳ ಸರಳ ಹಾಗೂ ಸ್ವಭಾವಿಕ ಅರ್ಥದಲ್ಲಿ ತೆಗೆದುಕೊಳ್ಳತಕ್ಕದ್ದು. ಪೂರ್ವಭಾವನೆಯು ಯಾವಾಗಲೂ ಅಕ್ಷರಶಃ ಅರ್ಥದ ಪರವಾಗಿಯೇ ಇರುತ್ತದೆ; ಒಬ್ಬನು ಅದನ್ನು ಬೇರೊಂದು ರೀತಿಯಲ್ಲಿ ತೆಗೆದುಕೊಳ್ಳುವದಾದರೆ, ಆತನು ಅದಕ್ಕೆ ಕಾರಣವನ್ನು ತೋರಿಸತಕ್ಕದ್ದು. ಪ್ರಕಟನೆ ಪುಸ್ತಕದ ವಿಷಯದಲ್ಲಿ ಹೀಗಿರುವದಿಲ್ಲ. ಚಿತ್ರಾತ್ಮಕ ರೂಪದಲ್ಲಿ ಮುಂದಿಡಲ್ಪಟ್ಟಿರುವ ಈ ಪುಸ್ತಕದಲ್ಲಿ, ಸಂಕೇತಗಳನ್ನು ಅಕ್ಷರಶಃ ಎಂದು ಪರಿಗಣಿಸಲ್ಪಡುವದಕ್ಕೆ ಉತ್ತಮ ಕಾರಣವು ಇರುವ ಹೊರತು ಅವುಗಳನ್ನು ಸಾಂಕೇತಿಕವಾಗಿಯೇ ತೆಗೆದುಕೊಳ್ಳಬೇಕೆಂದು ಒಬ್ಬನು ಭಾವಿಸತಕ್ಕದ್ದು.[37]

ಬೈಬಲ್ ಅರ್ಥನಿರೂಪಣೆಯ ವಿಷಯದಲ್ಲಿ ಬಳಸಲಾಗುವ ಒಂದು ಸಾಮಾನ್ಯ ಮಾತು ಎಂದರೆ "ವಾಕ್ಯಭಾಗವು ಏನು ಹೇಳುತ್ತದೋ ಅದೇ ಅರ್ಥವನ್ನು ಹೊಂದಿದೆ ಮತ್ತು ಯಾವ ಅರ್ಥವನ್ನು ಹೊಂದಿದೆಯೋ ಅದನ್ನೇ ಹೇಳುತ್ತದೆ." ಆ ತತ್ವಜ್ಞಾನವು ಅಕ್ಷರಶಃ ಭಾಷೆಯ ವಿಷಯದಲ್ಲಿ ಉತ್ತಮವಾಗಿ ಕೆಲಸ ಮಾಡುತ್ತದೆ-ಮತ್ತು ಬೈಬಲಿನ ಬಹುಪಾಲು ಭಾಗವು ಅಕ್ಷರಶಃ ಭಾಷೆಯಲ್ಲಿ ಬರೆಯಲ್ಪಟ್ಟಿದೆ-ಆದರೆ ಇದು ಸಾಂಕೇತಿಕ ಭಾಷೆಗೆ ಸರಿಹೊಂದುವದಿಲ್ಲ. ಸಾಂಕೇತಿಕ ಭಾಷೆಯು "ತಾನು ಏನನ್ನು ಹೇಳುತ್ತದೋ ಅದೇ ಅರ್ಥವನ್ನು ಹೊಂದಿರುವದಿಲ್ಲ ಮತ್ತು ಏನು ಅರ್ಥವನ್ನು ಹೊಂದಿದೆಯೋ ಅದನ್ನೇ ಹೇಳುವದಿಲ್ಲ."

ಸಂಕೇತಗಳನ್ನು ಸಾಂಕೇತಿಕವಾಗಿ ತೆಗೆದುಕೊಳ್ಳತಕ್ಕದ್ದೆಂಬುದನ್ನು ನಾವು ಅರ್ಥಮಾಡಿಕೊಳ್ಳುವಾಗ, ನಾವು ಸಾಂಕೇತಿಕವಾದ ಅರ್ಥವನ್ನು ಕಂಡುಹಿಡಿಯುವ ಸವಾಲನ್ನು ಎದುರಿಸುವದಕ್ಕೆ ಸಿದ್ಧರಾಗುತ್ತೇವೆ. ನಾವು ಅದನ್ನು ಹೇಗೆ ಕಂಡು ಹಿಡಿಯಬಲ್ಲೆವು? ಸಂದರ್ಭಾನುಸಾರ, ಸಂಕೇತಗಳನ್ನು ವಿವರಿಸುವದಕ್ಕೆ ಸ್ವತಃ ವಾಕ್ಯಭಾಗವು ನಮಗೆ ಸಹಾಯ ಮಾಡುವದು. ಉದಾಹರಣೆಗೆ, 1ನೇ ಅಧ್ಯಾಯದಲ್ಲಿನ ಏಳು ದೀಪಸ್ತಂಭಗಳು ಆಸ್ಯ ಸೀಮೆಯಲ್ಲಿರುವ ಏಳು ಸಭೆಗಳನ್ನು ಪ್ರತಿನಿಧಿಸುತ್ತವೆಂದು (1:12, 20) ಮತ್ತು ಚಿನ್ನದ ಧೂಪಾರತಿಗಳು ದೇವಜನರ ಪ್ರಾರ್ಥನೆಗಳು (5:8) ಎಂಬುದಾಗಿ ನಮಗೆ ಹೇಳಲ್ಪಟ್ಟಿರುತ್ತದೆ. ಹೇಗೂ, ಕೆಲವು ಸಾರಿ "ವಿವರಣೆ" ಯು ಅರ್ಥಮಾಡಿಕೊಳ್ಳಲು ಮೂಲ ಸಂಕೇತಕ್ಕಿಂತಲೂ ಕಷ್ಟಕರವಾಗಿರುತ್ತದೆ, ಅಥವಾ ಅದಕ್ಕಿಂತ ಕಠಿಣವಾಗಿರುತ್ತದೆ (ನೋಡಿರಿ 13:18; 17:9, 10).

ಕೆಲವು ಸಾರಿ ಸನ್ನಿವೇಶವು ಸಹಾಯ ಮಾಡುತ್ತದೆ. ಉದಾಹರಣೆಗೆ, 1ನೇ ಅಧ್ಯಾಯದಲ್ಲಿ, 4ನೇ ವಚನದ "ಏಳು ಆತ್ಮಗಳು" ಪವಿತ್ರಾತ್ಮ ಎಂಬದಾಗಿ ಸನ್ನಿವೇಶವು ನಮಗೆ ಹೇಳುತ್ತದೆ (1:4, 5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಪುನಃ ನಮಗೆ ಇಲ್ಲಿ ಅಂತ್ಯಕಾಲಿಕ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಬಳಸಲ್ಪಡುವ ಕೆಲವೊಂದು ಸಂಕೇತಗಳು ಹೇಗೆ ಬಳಸಲ್ಪಡುತ್ತವೆಂಬುದರ ಕುರಿತ ಜ್ಞಾನದ ಮೂಲಕ ಸಹಾಯವಾಗುತ್ತದೆ. ಉದಾಹರಣೆಗೆ, ಅಂಥ ಸಾಹಿತ್ಯದಲ್ಲಿ, ಒಂದು ಕೊಂಬು ಅಧಿಕಾರವನ್ನು ಸೂಚಿಸುತ್ತದೆ.

ಅಲ್ಲದೆ ಐತಿಹಾಸಿಕ ಹಿನ್ನಲೆಯ ಕುರಿತು ಸಹ ಪರಿಚಯವನ್ನು ಹೊಂದಿರುವದು ನಮಗೆ ಪ್ರಾಮುಖ್ಯವಾಗಿರುತ್ತದೆ. ಪ್ರಕಟನೆಯ "ನಿಶ್ಚಯವಾಗಿಯೂ ಸಮಕಾಲಿನ ಘಟನೆಗಳು ಹಾಗೂ ಪರಿಸ್ಥಿತಿಗಳಲ್ಲಿ *ಬೇರೂರಿರುತ್ತದೆ* ಮತ್ತು ಅವುಗಳೊಂದಿಗೆ ಸಾಮರಸ್ಯತೆಯನ್ನಿಟ್ಟುಕೊಂಡು ಅರ್ಥನಿರೂಪಣೆ ಮಾಡತಕ್ಕದ್ದು"[38] ಎಂದು Hendriksen ಗಮನಕ್ಕೆ ತರುತ್ತಾನೆ.

ನಾವು ಸಹಾಯವನ್ನು ಹೊಂದಬಹುದಾದ ಅತ್ಯಂಥ ಪ್ರಾಮುಖ್ಯವಾದ ದಾರಿಗಳಲ್ಲೊಂದೆಂದರೆ ಹಳೆಯ ಒಡಂಬಡಿಕೆಯನ್ನು ತಿಳಿದುಕೊಳ್ಳುವ ಮೂಲಕವೇ ಆಗಿದೆ.

ಪ್ರಕಟನೆ ಪುಸ್ತಕದಲ್ಲಿ ಹಳೆಯ ಒಡಂಬಡಿಕೆಯ ನೂರಕ್ಕಿಂತ ಹೆಚ್ಚು ಉಲ್ಲೇಖನಗಳು ಕಾಣಿಸುತ್ತವೆ. 39ರಿಂದ 42 ಪುಟಗಳಲ್ಲಿರುವ ಉದಾಹರಣೆಗಳನ್ನು ನೋಡಿರಿ.

ನಮ್ಮ ಅರ್ಥನಿರೂಪಣೆಗೆ ಒಂದು ಆರಂಭಿಕ ಸ್ಥಾನವನ್ನು ನಾವು ಹೊಂದಿದ ಬಳಿಕ ವ್ಯಾಖ್ಯಾನಶಾಸ್ತ್ರದ (ಬೈಬಲ್ ಅರ್ಥನಿರೂಪಣೆಯ) ತತ್ವಗಳನ್ನು ಅನ್ವಯಿಸತಕ್ಕದ್ದು. ಸಾಂಕೇತಿಕ ಭಾಷೆಯ ವಿಷಯದಲ್ಲಿ, ನಾವು ಎರಡು ಮೂಲಭೂತ ತತ್ವಗಳನ್ನು ಅನುಸರಿಸಬೇಕು. ಮೊದಲನೆಯದು *ಸಂಕೇತವನ್ನು ಅದು ಉಲ್ಲೇಖಿಸುವ ಸಂಗತಿಯೊಂದಿಗೆ ಸಾಮರಸ್ಯಗೊಳಿಸುವದು*. ಈ ಕ್ರಿಯೆಯಲ್ಲಿ ಸಂಕೇತದ ಗುಣಸ್ವಭಾವಗಳನ್ನು ಮತ್ತು ಅದು ಸೂಚಿಸುವ ವ್ಯಕ್ತಿ ಅಥವಾ ವಸ್ತುವಿನ ಗುಣಸ್ವಭಾವಗಳ ಕುರಿತು ಗಮನಿಸಿ, ನಂತರ ಅವುಗಳಲ್ಲಿರುವ ಸಾಮ್ಯತೆಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು. ಉದಾಹರಣೆಗೆ, ಲೂಕ 13:32ರಲ್ಲಿ, ಯೇಸು ಹೆರೋದನನ್ನು ನರಿ ಎಂದು ಕರೆದನು. ನರಿಯ ಗುಣಸ್ವಭಾವಗಳನ್ನು ಹೆರೋದನ ಗುಣಸ್ವಭಾವಗಳೊಂದಿಗೆ ಹೋಲಿಕೆ ಮಾಡುವಾಗ, ಯೇಸು ಹೆರೋದನಲ್ಲಿದ್ದ ಠಕ್ಕತನ ಹಾಗೂ ಕುಟಿಲತೆಯನ್ನು ಸೂಚಿಸಿ ಹೇಳಿದನೆಂದು ಸ್ಪಷ್ಟವಾಗಿ ತೋರುತ್ತದೆ. ಅದೇ ರೀತಿಯಲ್ಲಿಯೇ, ಪ್ರಕಟನೆ 1ರಲ್ಲಿ, ಸ್ಥಳೀಯ ಸಭೆಗಳು ದೀಪಸ್ತಂಭಗಳೆಂದು ಕರೆಯಲ್ಪಟ್ಟಿವೆ. ನಾವು ಆ ದಿನಗಳಲ್ಲಿ ದೀಪಸ್ತಂಭದ ಉದ್ದೇಶವನ್ನು ಮತ್ತು ಕತ್ತಲೆಯಲ್ಲಿರುವ ಲೋಕಕ್ಕೆ ಬೆಳಕಾಗಿರಬೇಕೆಂದು ಕ್ರೈಸ್ತರಿಗೆ ಕೊಡಲ್ಪಟ್ಟಿರುವ ಕರೆಯನ್ನು (ಮತ್ತಾಯ 5:14; ಫಿಲಿಪ್ಪಿ 2:15, 16) ಪರಿಗಣಿಸುವಾಗ, ಅರ್ಥವು ಸ್ಪಷ್ಟವಾಗಿ ತೋರುತ್ತದೆ: ಸತ್ಯದ ಬೆಳಕನ್ನು ಎತ್ತಿ ಹಿಡಿಯಬೇಕಾದ ಜವಾಬ್ದಾರಿಯು ಸಭೆಗೆ ಇರುತ್ತದೆ. ಒಂದು ಸಂಭಾವ್ಯ ಅನ್ವಯಿಕೆಯು ಏನೆಂದರೆ ಸಭೆಯು ತನ್ನ ಬೆಳಕನ್ನು - ಹಿಂಸೆಯ ಮಧ್ಯದಲ್ಲಿ ಸಹ - ಬಚ್ಚಿಟ್ಟುಕೊಳ್ಳಕೂಡದು.

ಸಾಂಕೇತಿಕ ಭಾಷೆಯ ವಿಷಯದಲ್ಲಿ ಎರಡನೆಯ ಮೂಲಭೂತ ತತ್ವವು ಏನೆಂದರೆ *ಸಂಕೇತವನ್ನು ಅತಿಯಾಗಿ ಅರ್ಥೈಸುವದರಿಂದ ದೂರವಿರುವದು*. ಒಬ್ಬರು ಒಮ್ಮೆ ಹೀಗೆ ಹೇಳಿದರು, "ಚರ್ಮದ ಮೇಲಿನ ಗಂಟಿನ [ನರಹುಲಿ] ಮಹತ್ವವನ್ನು ಹುಡುಕಾಡಬೇಡ." ಒಂದು ಸಂಕೇತವು (ಚಿತ್ರ) ಸಾಮಾನ್ಯವಾಗಿ ಒಂದೇ ಯೋಚನೆಯನ್ನು ವ್ಯಕ್ತಪಡಿಸುವದಕ್ಕೆ ಬಳಸಲ್ಪಡುತ್ತದೆ; ನಿಯಮದ ಪ್ರಕಾರ, ಪ್ರತಿಯೊಂದು ವಿಷಯಗಳೂ ಪ್ರಾಮುಖ್ಯವೆಂದು ನಾವು ವಾದಿಸುವದಾದರೆ ಆ ಸಂಕೇತಕ್ಕೆ ಅನ್ಯಾಯ ಮಾಡುವವರಾಗುತ್ತೇವೆ. ಉದಾಹರಣೆಗೆ, ದೇವರ ಜನರು ಕುರಿಗಳು (ಯೋಹಾನ 10:16) ಎಂದು ಕರೆಯಲ್ಪಟ್ಟಿದ್ದಾರೆ, ಆದರೆ ಅದರರ್ಥವು ಕ್ರೈಸ್ತರು ಮೈ ಮೇಲೆಲ್ಲಾ ಉಣ್ಣೆಯಿಂದ ಆವರಿಸಲ್ಪಟ್ಟಿದ್ದಾರೆ ಮತ್ತು ಹುಲ್ಲು ತಿನ್ನುತ್ತಾರೆ ಎಂದಾಗುವದಿಲ್ಲ. ಈ ಸಾಮಾನ್ಯ ಪರಿಜ್ಞಾನದ ತತ್ವವು ಪ್ರಕಟನೆ ಪುಸ್ತಕದ ವಿಷಯದಲ್ಲಂತೂ ವಿಶೇಷವಾಗಿ ಅಗತ್ಯವಿರುತ್ತದೆ. ಪುಸ್ತಕದಲ್ಲಿರುವ ವಿವಿಧ ಸಂಕೇತಗಳು ಕ್ಲಿಷ್ಟಕರವಾಗಿರುತ್ತವೆ ಮತ್ತು ಬಹು-ಸಂದೇಶಗಳುಳ್ಳವುಗಳು ಎಂಬುದು ಸತ್ಯವಾದರೂ, ನಾವು ಪ್ರತಿಯೊಂದು ಸಂಕೇತದಲ್ಲಿಯು ಒಂದೊಂದು ವಿವರಕ್ಕೂ ಅರ್ಥವನ್ನು ಒತ್ತಾಯಪೂರ್ವಕವಾಗಿ ಹುಡುಕಲು ಪ್ರಯತ್ನಿಸದಿರುವದಕ್ಕೆ ಜಾಗ್ರತೆ ವಹಿಸಿಕೊಳ್ಳಬೇಕು. Summers ಒತ್ತಿ ಹೇಳಿದ್ದೇನೆಂದರೆ, "ಅನೇಕ ವಿವರಗಳು ನಾಟಕೀಯ ಪರಿಣಾಮ ಉಂಟು ಮಾಡುವದಕ್ಕಾಗಿ ಆಗಿರುತ್ತವೆ, ಹೊರತು ವಾಕ್ಯಭಾಗವೊಂದರ ಕ್ಷಣಕ್ಷಣದ ಅರ್ಥವನ್ನು ಸೇರ್ಪಡೆಗೊಳಿಸುವದಕ್ಕಲ್ಲ. ಒಂದು ದರ್ಶನದ ವಿವರಗಳು ಮಹತ್ವಪೂರ್ಣತೆಯನ್ನು ಹೊಂದಿರಬಲ್ಲವು, ಆದರೆ ಬಹಳಷ್ಟು ಸಂದರ್ಭಗಳಲ್ಲಿ ದೃಶ್ಯಾವಳಿಯನ್ನು ಪೂರ್ಣವಾಗಿ ಭರ್ತಿ ಮಾಡುವದಕ್ಕಾಗಿಯೇ ಬಳಸಲ್ಪಡುತ್ತವೆ."[39]

ನಾವು ಒಂದು ಸಮಾನಾರ್ಥವನ್ನು ಮಾಡೋಣ: ನೋವು ಒಂದು ಮೆರವಣಿಗೆಯನ್ನು

ವಿಕ್ಷಿಸುತ್ತೀದ್ದಿರೆಂದು ಊಹಿಸಿಕೊಳ್ಳಿರಿ. ಒಂದು ಪ್ರದರ್ಶನ ಬಂಡಿಯು ನಿಮ್ಮನ್ನು ದಾಟಿಕೊಂಡು ಹೋಗುತ್ತದೆ. ಅದು ಪುಷ್ಪಗಳಿಂದ ಅಲಂಕರಿಸಲ್ಪಟ್ಟು ಅದರ ಮೇಲೆ "ಪ್ರಗತಿಯ ಆತ್ಮ" ಎಂದು ಬರೆಯಲ್ಪಟ್ಟಿರುತ್ತದೆ. ನೀವು ಪ್ರತಿಯೊಂದು ಗುಲಾಬಿ, ವೈಲೆಟ್, ಡೇಯ್ಸಿ ಹೂವುಗಳ ಅರ್ಥವನ್ನು ಕೇಳುವಿರೋ - ಅಥವಾ ನೀವು ಹೂವುಗಳು ಕೇವಲ ಒಟ್ಟಾರೆಯಾದ "ಪ್ರಗತಿಯ ಆತ್ಮ" ಎಂಬ ಮುಖ್ಯ ವಿಷಯಕ್ಕೆ ಪ್ರತಿಯೊಂದು ಹೂವು ತನ್ನ ಕೊಡುಗೆಯನ್ನು ನೀಡುವದಾಗಿದೆ ಎಂದಷ್ಟೇ ಅರ್ಥಮಾಡಿಕೊಳ್ಳುವಿರಲ್ಲವೇ? ಅದೇ ರೀತಿಯಲ್ಲಿಯೇ, ನಾವು ಪ್ರಕಟನೆ ಪುಸ್ತಕವನ್ನು ಅಧ್ಯಯನ ಮಾಡುವ ವೇಳೆ, ನಾವು ಒಟ್ಟಾರೆಯಾದ ಸಂದೇಶಕ್ಕಾಗಿ ಹುಡುಕಬೇಕು, ಹೊರತು ಪ್ರತಿಯೊಂದು ವಿವರಗಳಲ್ಲಿಯೇ ಅತಿಯಾಗಿ ಮುಳುಗಿ ಹೋಗಬಾರದು.

ನಾವು ಪ್ರತಿಯೊಂದು ದರ್ಶನವನ್ನು ಆಲೋಚಿಸುವ ವೇಳೆ, ನಾವು ಮೂರು ಹೆಜ್ಜೆಗಳನ್ನು ಹಾದು ಹೋಗಬೇಕು: (1) "ದೊಡ್ಡ ಚಿತ್ರಣವನ್ನು" ದೃಷ್ಟಿಸಿರಿ - ಪ್ರಾಥಮಿಕ ಸಂದೇಶ; (2) ವಿವರಗಳು ಆ ಸಂದೇಶಕ್ಕೆ ಇನ್ನೇನನ್ನಾದರೂ ಸೇರಿಸುತ್ತವೋ ಎಂದು ನೋಡುವದಕ್ಕಾಗಿ ಅವುಗಳನ್ನು ಪರೀಕ್ಷಿಸಲು ಸಾಗಬೇಕು; (3) ಬಳಿಕ ಹಿಂದಕ್ಕೆ ಸಾಗಿ ಪುನಃ "ದೊಡ್ಡ ಚಿತ್ರಣ" ನೋಡಬೇಕು, ಯಾಕೆಂದರೆ ನಾವು ಅದನ್ನು ಕಣ್ಣಿನಿಂದ ತಪ್ಪಿಸಿಕೊಳ್ಳಲು ಬಿಡಬಾರದು.

ಸಾಂಕೇತಿಕ ಭಾಷೆಗಾಗಿರುವ ವಿವರಣಾಶಾಸ್ತ್ರದ (ಅರ್ಥನಿರೂಪಣೆಯ ವಿಧಾನ) *ವಿಶೇಷವಾದ* ನಿಯಮಗಳಿಗೆ ಜೊತೆಯಾಗಿ, ಪ್ರಕಟನೆ ಪುಸ್ತಕದ ಅಧ್ಯಯನಕ್ಕೆ ಅನೇಕ *ಸಾಮಾನ್ಯ* ನಿಯಮಗಳು ಸಹ ಅನ್ವಯವಾಗುತ್ತವೆ.[40] ನೆನಪಿಟ್ಟುಕೊಳ್ಳುವದಕ್ಕಾಗಿ ಇಲ್ಲಿ ಕೆಲವೊಂದನ್ನು ತಿಳಿಸಲಾಗಿದೆ:

*ಒಂದು ದೊಡ್ಡ ಸಿದ್ಧಾಂತವನ್ನು ಎಂದಿಗೂ ಒಂದು ಅಸ್ಪಷ್ಟವಾದ ವಾಕ್ಯಭಾಗದ ಮೇಲೆ ಆಧಾರಗೊಳಿಸಬೇಡಿರಿ.* ಪ್ರಕಟನೆ ಪುಸ್ತಕದಲ್ಲಿರುವ ಸಾಂಕೇತಿಕ ಭಾಷೆಯ ಮೇಲೆಯೇ ಪ್ರಾಥಮಿಕವಾಗಿ ಆಧಾರವಾಗಿರುವ ಯಾವದೇ ಬೋಧನೆಯು ಸಂಶಯಾತ್ಮಕವಾಗಿರತಕ್ಕದ್ದು. ಈ ತತ್ವವನ್ನು ಉಲ್ಲಂಘಿಸಿರುವದಕ್ಕೆ ಒಂದು ಉದಾಹರಣೆಯೆಂದರೆ ಯೇಸು ಈ ಭೂಲೋಕದ ಯೆರೂಸಲೇಮಿನಲ್ಲಿ ಅಕ್ಷರಶಃ ಸಾವಿರ ವರ್ಷ ಆಳ್ವಿಕೆ ಮಾಡುವನು ಎಂಬದೆ.

*ಯಾವದೇ ವಾಕ್ಯಭಾಗವನ್ನು ಅದು ಬೇರೆ ಕಡೆಯೊಂದರಲ್ಲಿರುವ ಸ್ಪಷ್ಟವಾದ ಬೋಧನೆಗೆ ವಿರುದ್ಧವಾಗುವ ರೀತಿಯಲ್ಲಿ ಎಂದಿಗೂ ಅರ್ಥನಿರೂಪಣೆ ಮಾಡಬೇಡಿರಿ.* ಈ ತತ್ವವು ಉಲ್ಲಂಘಿಸಲ್ಪಟ್ಟಿರುವದಕ್ಕೆ ಒಂದು ಉದಾಹರಣೆಯೆಂದರೆ ಕೇವಲ 144,000 ಜನರನ್ನು ಮಾತ್ರವೇ ಪರಲೋಕಕ್ಕೆ ಹೋಗುವರು, ಮಿಕ್ಕವರೆಲ್ಲರೂ ಒಂದು ಪುನಃಸ್ಥಾಪಿಸಲ್ಪಟ್ಟ ಭೂಮಿಯ ಮೇಲೆ ಬಾಳುವರು ಎಂದು ಹೇಳುವ ಯೆಹೋವನ ಸಾಕ್ಷಿಗಳ ಬೋಧನೆಯಾಗಿರುತ್ತದೆ. ಈ ಬೋಧನೆಯು ನಂಬಿಗಸ್ತರೆಲ್ಲರೂ ಪರಲೋಕಕ್ಕೆ ಹೋಗುವರೆಂದು ತಿಳಿಸುವ 1 ಪೇತ್ರ 1:3-5 ಮತ್ತು ಇತರ ವಾಕ್ಯಭಾಗಗಳ ಬೋಧನೆಯನ್ನು ಉಲ್ಲಂಘಿಸುವದಾಗಿದೆ. ಸಾಂಕೇತಿಕ ಭಾಷೆಯು ಅಕ್ಷರಶಃ ಭಾಷೆಗೆ ಅಂದವನ್ನು ಸೇರ್ಪಡೆಗೊಳಿಸಬಲ್ಲದು, ಆದರೆ ಅದು ವ್ಯತ್ಯಾಸವಾದದ್ದನ್ನು ಕಲಿಸುವದಕ್ಕೆ ಸಾಧ್ಯವಿಲ್ಲ. ಹೊಸ ಒಡಂಬಡಿಕೆಯ ಇತರ ಭಾಗಗಳಲ್ಲಿ ಸಹ ಸಿಕ್ಕದೆ ಇರುವಂತಹ ಯಾವ ಸಿದ್ಧಾಂತವೇ ಆಗಲಿ ಪ್ರಕಟನೆ ಪುಸ್ತಕದಲ್ಲಿ ಸಿಕ್ಕುವದಿಲ್ಲ. ಹೀಗೆ ಪ್ರಕಟನೆ ಪುಸ್ತಕದಲ್ಲಿರುವ ಎಲ್ಲಾ ಬೋಧನೆ ಹೊಸ ಒಡಂಬಡಿಕೆಯ ಬೇರೆ ಭಾಗದಲ್ಲಿ ಸಿಕ್ಕುವ ಸ್ಪಷ್ಟವಾಗಿರುವ ಬೋಧನೆಯೊಂದಿಗೆ ಸಾಮರಸ್ಯತೆಯನ್ನು ಹೊಂದಿರತಕ್ಕದ್ದು.

ಪ್ರಕಟನೆ ಪುಸ್ತಕದ ಅಧ್ಯಯನಕ್ಕೆ ಇನ್ನೊಂದು ಸಾಮಾನ್ಯ ತತ್ವವು

ಮಹತ್ವಪೂರ್ಣತೆಯನ್ನು ಹೊಂದಿದೆ: *ಸಾಂಕೇತಿಕ ಭಾಷೆಯ ಅರ್ಥವು ಬದಲಾಗಬಲ್ಲದು.* ಒಂದು ಸಂಕೇತಕ್ಕೆ ಒಂದು ನಿರ್ದಿಷ್ಟವಾದ ಸನ್ನಿವೇಶದಲ್ಲಿ ಒಂದು ಅರ್ಥವಿದ್ದರೆ, ಬೇರೊಂದು ಸನ್ನಿವೇಶದಲ್ಲಿ ಅದು ಬೇರೆಯಾದ ಅರ್ಥವನ್ನು ಹೊಂದಿರಬಲ್ಲದು. ಜನರನ್ನು ಕುರಿಗಳು ಎಂದು ಕರೆಯುವಾಗ (ಯೆಶಾಯ 53:6; 1 ಪೇತ್ರ 2:25), ಪ್ರೇರಿತ ಲೇಖಕರು ಮನಸ್ಸಿನಲ್ಲಿ ಕುರಿಗಳಿಗಿರುವ ಅಷ್ಟಾಗಿ ಇಷ್ಟವಾಗದ ಗುಣಸ್ವಭಾವಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದಾಗಿದೆ: ವಂಚನೆಗೊಳಗಾಗುವಿಕೆ, ಮೂರ್ಖತನ, ಮತ್ತು ಯೋಚಿಸದೆಯೇ ಹಿಂಬಾಲಿಸುವದು. ಇನ್ನೊಂದೆಡೆಯಲ್ಲಿ, ಯೇಸು ಒಂದು ಕುರಿಗೆ ಹೋಲಿಕೆ ಮಾಡಲ್ಪಟ್ಟಾಗ (ಯೆಶಾಯ 53:7; ಅಪೊಸ್ತಲರ ಕೃತ್ಯಗಳು 8:32; ನೋಡಿರಿ ಯೋಹಾನ 1:29; ಪ್ರಕಟನೆ 5:6), ಲೇಖಕನು ಕುರಿಯಲ್ಲಿರುವ ಹೆಚ್ಚು ಇಷ್ಟಪಡುವಂತಹ ಗುಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದನು: ಮುಗ್ಧತೆ ಮತ್ತು ಸಾಧುಗುಣ.

ಕೆಲವು ಅರ್ಥನಿರೂಪಣೆಯ ವ್ಯವಸ್ಥೆಗಳು ಒಂದು ಸಂಕೇತವು ಎಲ್ಲಿಯೇ ಸಿಕ್ಕರೂ ಸರಿಯೇ ಮತ್ತು ಯಾವ ಸನ್ನಿವೇಶದಲ್ಲಿದ್ದರೂ ಸರಿಯೇ ಅದು ಯಾವಾಗಲೂ ಒಂದೇ ಅರ್ಥವನ್ನು ಕೊಡುತ್ತದೆಂಬ ಊಹೆಯ ಮೇಲೆ ಆಧಾರವಾಗಿರುತ್ತವೆ. ಹೇಗೂ, ಇದೊಂದು ಸುಳ್ಳಾದ ಊಹೆಯಾಗಿರುತ್ತದೆ. ಕೆಲವು ಸಾರಿ ಒಂದು ಸಾಮ್ಯತೆ ಅಥವಾ ವಿರುದ್ಧ ಹೋಲಿಕೆಯನ್ನು ತೋರಿಸುವದಕ್ಕಾಗಿ ಬೇರೆ ಬೇರೆ ಸಂಕೇತಗಳು ಬಳಸಲ್ಪಡುತ್ತವೆ. ಅದಕ್ಕೆ ಒಂದು ಉದಾಹರಣೆಯೆಂದರೆ 1ನೇ ಅಧ್ಯಾಯದಲ್ಲಿನ ದೀಪಸ್ತಂಭಗಳು (ಏಳು ಸಭೆಗಳು) ಮತ್ತು 4ನೇ ಅಧ್ಯಾಯದಲ್ಲಿನ ಏಳು ದೀಪಗಳು (ಪವಿತ್ರಾತ್ಮನು). ಇನ್ನೊಂದು ಉದಾಹರಣೆಯೆಂದರೆ 12ನೇ ಅಧ್ಯಾಯ ಹಾಗೂ 17ನೇ ಅಧ್ಯಾಯಗಳಲ್ಲಿನ ಇಬ್ಬರು ಸ್ತ್ರೀಯರು (ಒಬ್ಬಳು ಪರಿಶುದ್ಧಳು ಮತ್ತು ಒಬ್ಬಳು ಜಾರಸ್ತ್ರೀ). ಈ ವಿಷಯ ಕುರಿತು ಅಂತಿಮ ಟಿಪ್ಪಣಿಯು ಹೀಗಿದೆ: ಹಳೆಯ ಒಡಂಬಡಿಕೆಯ ಉಲ್ಲೇಖನಗಳನ್ನು ಪ್ರಕಟನೆ ಪುಸ್ತಕದಲ್ಲಿರುವ ಅವುಗಳ ತದ್ರೂಪಗಳಿಗೆ ಹೋಲಿಕೆ ಮಾಡುವಾಗ, "ತಿರುವು" ಗಾಗಿ ಹುಡುಕಿರಿ - ಅರ್ಥದಲ್ಲಿ ಒಂದು "ತಿರುವು" ಸಹ ಇರುತ್ತದೆಂದು ಸೂಚಿಸುವ ಒಂದು ಬದಲಾವಣೆ.

ಅರ್ಥನಿರೂಪಣೆಯ ಇತರೆ ತತ್ವಗಳನ್ನು ಗಮನಕ್ಕೆ ತೆಗೆದುಕೊಳ್ಳಬಹುದು, ಆದರೆ ಈ ಕ್ಷಣದಲ್ಲಿ ಇವುಗಳು ಸಾಕಾಗಿರುತ್ತವೆ. ಕೆಲವು ಕೊಡಲ್ಪಟ್ಟಿರುವ ಎಲ್ಲಾ ಸಲಹೆಗಳಿಂದ ಸಹ ಯಾವದೇ ಸಹಾಯವು ಆಗುವದಿಲ್ಲ ಎಂಬುದನ್ನು ನಾವು ಅರಿತವರಾಗಿರಬೇಕು. ಕೆಲವೊಂದು ಸಂದರ್ಭದಲ್ಲಿ, ನಮಗೆ ಒಂದು ನಿರ್ದಿಷ್ಟವಾದ ಸಂಕೇತಕ್ಕೆ ಅರ್ಥವು ಗೊತ್ತಿರುವದೇ ಇಲ್ಲ ಎಂಬುದನ್ನು ಒಪ್ಪಿಕೊಳ್ಳತಕ್ಕದ್ದು. ಈ ರೀತಿಯ ಸ್ಥಿತಿಯು ಇರುವಾಗ, "ರಹಸ್ಯವಾದವುಗಳು ನಮ್ಮ ದೇವರಾಗಿರುವ ಯೆಹೋವನವು" (ಧರ್ಮೋಪದೇಶಕಾಂಡ 29:29), ನಾವು ದೇವರ ವಾಕ್ಯವನ್ನು ಮೀರಿ ಹೋಗುವ ಅಥವಾ ಅದಕ್ಕೆ ಸೇರ್ಪಡೆಗೊಳಿಸುವ ಕುರಿತು ಎಚ್ಚರಿಕೆಯಾಗಿರಬೇಕು (1 ಕೊರಿಂಥ 4:6; ಪ್ರಕಟನೆ 22:18, 19), ಮತ್ತು ದೇವರ ಜನರ ಸಾಮರಸ್ಯಕ್ಕೆ ತೊಂದರೆಯನ್ನುಂಟು ಮಾಡುವಂತೆ ಅಭಿಪ್ರಾಯಗಳಿಗೆ ಎಂದಿಗೂ ಅವಕಾಶವನ್ನು ಕೊಡಬಾರದು (ಜ್ಞಾನೋಕ್ತಿ 6:19; ರೋಮಾ 14:19, 22; ಇಬ್ರಿಯ 13:1) ಎಂಬದಾಗಿ Hugo McCord ಜ್ಞಾಪಕ ಪಡಿಸುತ್ತಾನೆ.[41]

## ಬೇರೆ ಬೇರೆ ವಿಧವಾದ ಸಂಕೇತಗಳು

ಪ್ರಕಟನೆ ಪುಸ್ತಕದಲ್ಲಿ ವಿವಿಧ ರೀತಿಯ ಸಂಕೇತಗಳು ಬಳಸಲ್ಪಟ್ಟಿವೆ, ಆದರೆ ಮೂರು ಪ್ರಬಲವಾಗಿ ಕಾಣಿಸುತ್ತವೆ: (1) ಸಂಖ್ಯೆಗಳು ಸಾಂಕೇತಕವಾಗಿ ಬಳಸಲ್ಪಟ್ಟಿವೆ, (2) ಹಳೆಯ

ಒಡಂಬಡಿಕೆಯಿಂದ ಸಾಂಕೇತಿಕತೆ, ಮತ್ತು (3) ಐತಿಹಾಸಿಕ ಹಿನ್ನಲೆಯ ಮೇಲೆ ಆಧಾರವಾಗಿರುವ ಸಂಕೇತಗಳು.

1. *ಸಂಖ್ಯೆಗಳು* ಸಾಂಕೇತಿಕವಾಗಿ *ಬಳಸಲ್ಪಟ್ಟಿವೆ.* ಪ್ರಕಟನೆ ಪುಸ್ತಕದ ಅತ್ಯಂಥ ಮಹತ್ವವುಳ್ಳ ಸಾಂಕೇತಿಕತೆ ಎಂದರೆ ಬಹುಶಃ ಅದು ಸಂಖ್ಯೆಗಳನ್ನು ಬಳಸುವದೇ ಆಗಿರುತ್ತದೆ. ಒಬ್ಬ ವ್ಯಕ್ತಿಯು ಪ್ರಕಟನೆ ಪುಸ್ತಕವನ್ನು ಓದುವದಾದರೆ ಮತ್ತು ಸಂಖ್ಯೆಗಳನ್ನೆಲ್ಲಾ ಕೆಂಪು ಲೇಖನಿಯಿಂದ ಗುರುತಿಸುತ್ತಾ ಹೋಗುವದಾದರೆ, ಪುಟಗಳೆಲ್ಲಾ ಕೆಂಪು ಬಣ್ಣದಿಂದ ತುಂಬಿ ಹೋಗುವವು. Summers ಈ ವ್ಯಾಖ್ಯೆ ನೀಡಿದನು:

> ಆ ಆರಂಭಿಕ ದಿನದಲ್ಲಿ, ಭಾಷೆಯು ಅನಾಗರೀಕ ಹಾಗೂ ಶಬ್ದಗಳು ಅತ್ಯಲ್ಪವಾಗಿರುವ ವೇಳೆಯಲ್ಲಿ, ಕೆಲವು ಸಾರಿ ಒಂದೇ ಇಬ್ರಿಯ ಪದವು ಹಲವಾರು ವಿವಿಧ ಅರ್ಥಗಳನ್ನು ತಿಳಿಸುವ ಕೆಲಸವನ್ನು ಮಾಡುವಂತೆ ಒತ್ತಾಯಿಸಲ್ಪಡುತ್ತಿತ್ತು. ಅಂಥ ಪರಿಸ್ಥಿತಿಗಳ ಅಡಿಯಲ್ಲಿ, ಮನುಷ್ಯರು ಈಗ ನಾವು ಪದಗಳನ್ನು ಬಳಸುವ ರೀತಿಯಲ್ಲಿಯೇ ಸಂಖ್ಯೆಗಳನ್ನು ಸ್ವಭಾವಿಕವಾಗಿಯೇ ಬಳಸುವವರಾದರು. ಅವುಗಳು ನೈತಿಕ ಅಥವಾ ಆತ್ಮೀಕ ಸತ್ಯದ ಸಂಕೇತಗಳಾಗಿದ್ದವು. ಒಂದು ನಿರ್ದಿಷ್ಟವಾದ ಸಂಖ್ಯೆಯು ಒಂದು ನಿಖರವಾದ ಭಾವನೆಯನ್ನು ಸೂಚಿಸುವದಾಗಿತ್ತು . . . ಅಂತಹ ಸಂಖ್ಯೆಗಳನ್ನು . . . ಗಣಿತ ಸೂತ್ರಗಳ ಅರ್ಥನಿರೂಪಣೆ ಮಾಡುವ ರೀತಿಯಲ್ಲಿಯೇ ಸರಿಯಾಗಿ ಅಕ್ಷರಶಃ ಓದುವದಕ್ಕೆ ಸಾಧ್ಯವಿಲ್ಲ.[42]

ಸಂಖ್ಯೆಗಳು ಹೇಗೆ ಸಾಂಕೇತಿಕ ಮಹತ್ವಪೂರ್ಣತೆಯನ್ನು ತೆಗೆದುಕೊಳ್ಳಬಲ್ಲವು ಎಂಬುದಕ್ಕೆ ಒಂದು ದೃಷ್ಟಾಂತವಾಗಿ, ಕೆಲವರು ಹೇಗೆ "ಹದಿಮೂರು" ಸಂಖ್ಯೆಯನ್ನು ಅಶುಭವೆಂದು ಪರಿಗಣಿಸುತ್ತಾರೆಂಬುದರ ಬಗ್ಗೆ ಆಲೋಚಿಸೋಣ. ಕೆಲವೊಂದು ಬಹುಮಹಡಿ ಕಟ್ಟಡಗಳು "ಹದಿಮೂರನೆಯ ಮಹಡಿ" ಎಂದು ಹೆಸರಿರುವ ಅಂತಸ್ತನ್ನು ಹೊಂದಿರುವದಿಲ್ಲ. ಬದಲಾಗಿ, ಹನ್ನೆರಡನೆಯ ಮಹಡಿಯಿಂದ ಒಂದೇ ಸಾರಿ ಹದಿನಾಲ್ಕನೆಯ ಮಹಡಿಗೆ ಜಿಗಿಯುತ್ತಾರೆ.

ವಾಕ್ಯಭಾಗದುದ್ದಕ್ಕೂ ಅನೇಕ ಸಂಖ್ಯೆಗಳು ಕಾಣಿಸಿಕೊಳ್ಳುತ್ತವಾದರೂ, ಬಹುಪಾಲು ಸಂಖ್ಯಾ ಸಂಕೇತಗಳು *ಮೂರು* ಅಂಕಿಗಳಿಂದ ಮಾತ್ರವೇ-"ಮೂರು," "ನಾಲ್ಕು," ಮತ್ತು "ಹತ್ತು" – ತೆಗೆದುಕೊಳ್ಳಲ್ಪಟ್ಟಿರುತ್ತವೆ.

ಅನೇಕರಿಂದ "ಮೂರು" ಒಂದು *ದೇವತ್ವದ* ಸಂಖ್ಯೆ ಎಂದು ಪರಿಗಣಿಸಲ್ಪಟ್ಟಿತ್ತು. ಕೆಲವರು ಈ ಭಾವನೆಯು ತಂದೆ, ತಾಯಿ ಹಾಗೂ ಮಗುವಿನ ನಡುವಿನ ಪ್ರೀತಿಗೆ ಸಂಬಂಧ ಪಟ್ಟದ್ದಾಗಿದೆ ಎಂದು ಕಲ್ಪನೆಗಳನ್ನು ಮಾಡಿಕೊಂಡಿರುತ್ತಾರೆ. ಬಹುಶಃ ಇದು "ತ್ರೈಯೇಕತ್ವ" -ತಂದೆ, ಮಗ, ಮತ್ತು ಪವಿತ್ರಾತ್ಮನ-ಭಾವನೆಯ ಕುರಿತಾದ ಒಂದು ಆರಂಭಿಕ ಮಿನುಗುನೋಟ ಆಗಿರುತ್ತದೆ. Homer Hailey ಹೀಗೆ ಹೇಳುತ್ತಾನೆ, "ಶಾಸ್ತ್ರದುದ್ದಕ್ಕೂ ಇದು ಬಳಸಲ್ಪಟ್ಟಿರುವದನ್ನು ಪರಿಗಣಿಸುವಾಗ, ಮೂರು 'ಒಂದು ಪೂರ್ತಿಯಾದ ಹಾಗೂ ಕ್ರಮಗೊಳಿಸಲ್ಪಟ್ಟಿರುವ ಸಮಗ್ರತೆಯ ಸಂಕೇತ' ಎಂಬಂತೆ ತೋರುತ್ತದೆ."[43]

ಎರಡನೆಯ ಮುಖ್ಯ ಅಂಕೆ ಆಗಿರುವ "ನಾಲ್ಕು," "ಬ್ರಹ್ಮಾಂಡದ ಸಂಖ್ಯೆ"-*ಸೃಷ್ಟಿಯ* ಸಂಖ್ಯೆ- ಎಂದು ಭಾವಿಸಲ್ಪಟ್ಟಿತ್ತು.[44] ಬಹುಶಃ ಈ ಸಂಬಂಧದ ಜೋಡಿಸುವಿಕೆಗೆ ಕಾರಣವು ನಾಲ್ಕು ದಿಕ್ಕುಗಳು ಆಗಿರಬಹುದಾಗಿದೆ: ಉತ್ತರ, ದಕ್ಷಿಣ, ಪೂರ್ವ, ಮತ್ತು ಪಶ್ಚಿಮ. ಪ್ರಕಟನೆ ಪುಸ್ತಕದಲ್ಲಿ "ನಾಲ್ಕು" ಅನೇಕ ಸಾರಿ ಎಲ್ಲಾ ಮಾನವ ಜನಾಂಗವನ್ನು ಸೂಚಿಸುತ್ತದೆ.

"ಹತ್ತು" ಸಂಖ್ಯೆಗೆ ಹೋಗುವ ಮುಂಚೆ, ಮೂರು ಜೊತೆಗೆ ನಾಲ್ಕು ಸೇರಿ ಆಗಿರುವ "ಏಳು" ಅಂಕೆಯಿಂದ ಆರಂಭಗೊಂಡು, ಮೂರು ಮತ್ತು ನಾಲ್ಕು ಸಂಖ್ಯೆಗಳ ಸಂಯೋಜನೆಯ ಕುರಿತು

ಆಲೋಚಿಸಿಕೊಳ್ಳೋಣ. ಪ್ರಕಟನೆ ಪುಸ್ತಕವನ್ನು ಹಾಗೆಯೇ ಸುಮ್ಮನೆ ಓದುವವನು ಸಹ "ಏಳು" ಅಂಕೆಯು ಸತತವಾಗಿ ಕಾಣಿಸಿಕೊಳ್ಳುವದನ್ನು ಕಂಡು ದಿಗ್ಭ್ರಮೆಗೊಳ್ಳುವನು; ಈ ಅಂಕೆಯು ಪ್ರಕಟನೆ ಪುಸ್ತಕದಲ್ಲಿ ಐವತ್ತಕ್ಕೂ ಹೆಚ್ಚು ಸಾರಿ ಕಾಣಿಸಿಕೊಳ್ಳುತ್ತದೆ. "ಏಳು" ಸೃಷ್ಟಿಯ ಏಳು ದಿನಗಳಿಂದ ಮೊದಲ್ಗೊಂಡು ಶಾಸ್ತ್ರದುದ್ದಕ್ಕೂ ಕಾಣಿಸಿಕೊಳ್ಳುವ ಸಂಖ್ಯೆಯಾಗಿದೆ. "ಏಳು"-"ಇಬ್ರಿಯರಿಗೆ ಅತ್ಯಂಥ ಪವಿತ್ರ ಸಂಖ್ಯೆಯಾಗಿದೆ"[45]-*ಪರಿಪೂರ್ಣತೆ*ಯನ್ನು ಪ್ರತಿನಿಧಿಸುವದಾಗಿತ್ತು. ದೇವತ್ವ ಮತ್ತು ಅದರ ಜೊತೆಗೆ ವಿಶ್ವವು ಅಸ್ತಿತ್ವದಲ್ಲಿರುವ ಎಲ್ಲದಕ್ಕೂ ಸಮಾನವಾಗಿದೆ. ಪ್ರಕಟನೆ ಪುಸ್ತಕದಲ್ಲಿ, ಏಳು ಕಾರ್ಯಗಳನ್ನು ಒಂದು ಗುಂಪಾಗಿ ಮಾಡುವಿಕೆಯಲ್ಲಿ ಅನೇಕ ಸಾರಿ ಮೂರು ಜೊತೆಗೆ ನಾಲ್ಕನ್ನು ಜೊತೆಗೂಡಿಸುವಿಕೆ ಅಥವಾ ನಾಲ್ಕರೊಂದಿಗೆ ಮೂರರ ಗುಂಪನ್ನು ಜೊತೆಗೂಡಿಸುವಿಕೆಯು ಸೇರಿರುತ್ತದೆ.

ಇನ್ನೊಂದು ಸಂಯೋಜನೆ ಎಂದರೆ "ಹನ್ನೆರಡು" ಆಗಿದ್ದು, ಅದು ನಾಲ್ಕು ಅಂಕೆಯು ಮೂರು *ಸಾರಿ* ಒಟ್ಟುಗೂಡಿ "ಹನ್ನೆರಡು" ಆಗಿರುತ್ತದೆ. ಶಾಸ್ತ್ರಗಳಲ್ಲಿ "ಹನ್ನೆರಡು" ಸತತವಾಗಿ ಬಳಸಲ್ಪಟ್ಟಿರುತ್ತದೆ: ಇಸ್ರಾಯೇಲ್ಯರ ಹನ್ನೆರಡು ಗೋತ್ರಗಳು, ಹನ್ನೆರಡು ಮಂದಿ ಅಪೊಸ್ತಲರು, ಮತ್ತು ಇತ್ಯಾದಿ. "ಹನ್ನೆರಡು" ಮತ್ತು "144" ರಂತಹ ಹನ್ನೆರಡರ ಗುಣಕಾರಗಳು ಪ್ರಕಟನೆ ಪುಸ್ತಕದಲ್ಲಿ ಆಗಾಗ ಕಂಡು ಬರುತ್ತವೆ. ಹನ್ನೆರಡು ಮೂರು ಅಂಕೆಯು (ದೇವತ್ವದ ಸಂಖ್ಯೆ) ನಾಲ್ಕರಿಂದ (ಸೃಷ್ಟಿಯ ಸಂಖ್ಯೆ) ಗುಣಕಾರಗೊಂಡ ಫಲಿತಗೊಂಡಿರುತ್ತದಾದ್ದರಿಂದ, ಅದು *ಸಂಪೂರ್ಣತೆಯ* (ಅಸ್ತಿತ್ವದಲ್ಲಿರುವ ಸಮಸ್ತವು) ವಿಚಾರವನ್ನು ಒಳಗೊಂಡಿರುತ್ತದೆ. ಇಬ್ರಿಯ ಯೋಚನೆಯಲ್ಲಿ, ಅದು ಸಾಮಾನ್ಯವಾಗಿ ಧಾರ್ಮಿಕವಾದ ಸಂಪೂರ್ಣತೆಗೆ ಸಂಬಂಧಿಸಿದ್ದಾಗಿತ್ತು.

ಪ್ರಕಟನೆ ಪುಸ್ತಕದಲ್ಲಿ ಮೂರನೆಯ ಮುಖ್ಯ ಸಂಖ್ಯೆಯು "ಹತ್ತು." "ಹತ್ತು" ಸಹ *ಸಂಪೂರ್ಣತೆಯನ್ನು*, ಪೂರ್ಣತೆ, ಅಥವಾ ಶಕ್ತಿಯನ್ನು ಸೂಚಿಸುವ ಸಂಖ್ಯೆಯಾಗಿರುತ್ತದೆ - ಬಹುಶಃ ಒಬ್ಬ ವ್ಯಕ್ತಿಯು ಹತ್ತು ಬೆರಳುಗಳನ್ನು ಹೊಂದಿದ್ದಾನೆಂಬ ವಾಸ್ತವಾಂಶದಿಂದ ಹೊರಹೊಮ್ಮಿರಬಹುದಾಗಿದೆ. ಇದರ ಬಳಕೆಯು ಬಹುಶಃ ದಶಮಾಂಶದ ವ್ಯವಸ್ಥೆಗೆ ಒಂದು ಪೂರ್ವಸೂಚಕವಾಗಿತ್ತು. "ಹತ್ತು" ಸಂಖ್ಯೆಯ ಬಳಕೆಗೆ ಅದೇ ರೀತಿಯಾದ ಒಂದು ಬೈಬಲಿನ ಉದಾಹರಣೆಯೆಂದರೆ ದಶಾಜ್ಞೆಗಳು. "ಹತ್ತು" ಮಾನವ ಜನಾಂಗದೊಂದಿಗೆ ನಿಕಟ ಸಂಬಂಧ ಹೊಂದಿತ್ತಾದ್ದರಿಂದ, ಈ ಸಂಖ್ಯೆಯು ವಿಶೇಷವಾಗಿ ಮಾನವ ಸಂಪೂರ್ಣತೆಯನ್ನು ಯೋಚನೆಯನ್ನು ಒಳಗೊಂಡಿರುತ್ತದೆ. "ಹತ್ತು" ಸ್ವತಃ ತನ್ನಿಂದ ಗುಣಕಾರ ಮಾಡಲ್ಪಟ್ಟು 100 ಅಥವಾ 1,000 ಆದಾಗ, ಅದರ ಮಹತ್ವಪೂರ್ಣತೆಯು ಇನ್ನಷ್ಟು ಅಧಿಕಗೊಂಡಿತು. ಎಲ್ಲಾ ಮೂಲೆಗಳು ಸಮಾನವಾಗಿರುವ ಒಂದು ಪರಿಪೂರ್ಣವಾದ ಘನಾಕೃತಿಯು ಪರಿಪೂರ್ಣತೆಗೆ ಇನ್ನೊಂದು ಸಂಕೇತವಾಗಿರುತ್ತದೆ (ನೋಡಿರಿ 21:16). ಹೀಗೆ ಘನಾಕೃತಿಗೊಂಡ "ಹತ್ತು" ಸಂಖ್ಯೆಯು (10 x 10 x 10, ಅಥವಾ 1,000) ನಿರ್ದಿಷ್ಟವಾಗಿ ಸಂಪೂರ್ಣತೆ ಅಥವಾ ಪರಿಪೂರ್ಣತೆಗೆ ಒಂದು ಬಲವಾದ ಸಂಕೇತವಾಗಿತ್ತು. ಅಲ್ಲದೆ "ಹತ್ತು" ಸಂಖ್ಯೆಗೆ ಸಂಬಂಧ ಹೊಂದಿರುವ ಸಂಖ್ಯೆಯು "ಐದು," ಇದು ಹತ್ತರ ಅರ್ಧ ಆಗಿರುತ್ತದೆ. ಒಂದೇ ಒಂದು ಕೈಯಲ್ಲಿರುವ ಬೆರಳುಗಳ ಸಂಖ್ಯೆಯಾಗಿ, "ಐದು" ಮಿತಿಯಾದ ಬಲ ಅಥವಾ ಕಾಲಾವಧಿಯನ್ನು ಸೂಚಿಸುವದಾಗಿದೆ.

ಇನ್ನೊಂದು ಹೆಚ್ಚುವರಿಯಾದ ಪ್ರಾಥಮಿಕ ಸಂಖ್ಯೆಯು-"ಒಂದು"-ಇಲ್ಲಿ ಕ್ಲುಪ್ತವಾಗಿ ಪ್ರಸ್ತಾಪಿಸಲ್ಪಡತಕ್ಕದ್ದು. "ಒಂದು" ಸಂಖ್ಯೆಯು ಒಗ್ಗಟ್ಟಿನ ಯೋಚನೆಯನ್ನು ಒಳಗೊಂಡಿರುತ್ತದೆ (ನೋಡಿರಿ 17:13); ಆದರೆ ಪ್ರಕಟನೆ ಪುಸ್ತಕದಲ್ಲಿ, ಒಂದು ಪ್ರಮುಖವಾಗಿ "ಒಂದು ಗಳಿಗೆ" ಎಂಬ

ಪದಗುಚ್ಛದಲ್ಲಿ ಬಳಸಲ್ಪಟ್ಟಿದೆ, ಏಕಾಂಗಿಯಾಗಿ ನಿಂತಿರುವ, ಮತ್ತು ಹೀಗೆ ಹೋಲಿಸಿ ನೋಡಿದರೆ ದುರ್ಬಲವಾಗಿರುವ ಕಾರ್ಯವೊಂದನ್ನು ಸೂಚಿಸುವದಾಗಿದೆ. "ಒಂದು ಗಳಿಗೆ" ಎಂಬುದು ಶೀಘ್ರವೇ ಗತಿಸಿ ಹೋಗುವಂಥ ಕ್ಲುಪ್ತ ಸಮಯವನ್ನು ಸೂಚಿಸುತ್ತದೆ. ಹೆಚ್ಚಿನ ಪ್ರಾಮುಖ್ಯತೆಯುಳ್ಳದ್ದೆಂದರೆ *ಎರಡು* ಸಂಖ್ಯೆಯನ್ನು ಮಾಡುವದಕ್ಕೆ ಒಂದನ್ನು ಇಮ್ಮಡಿಗೊಳಿಸುವದು. "ಎರಡು" *ಬಲಗೊಳಿಸುವ* ಸಂಖ್ಯೆಯಾಗಿದೆ (ನೋಡಿರಿ ಧರ್ಮೋಪದೇಶಕಾಂಡ 17:6; 19:15; ಪ್ರಸಂಗಿ 4:9-11; ಲೂಕ 10:1). ಪ್ರಕಟನೆ ಪುಸ್ತಕವು ಇಬ್ಬರು ಸಾಕ್ಷಿಗಳ ಕುರಿತು ಮಾತಾಡುತ್ತದೆ (11:3), ಮತ್ತು ಬೇರೆ ಸಂಖ್ಯೆಗಳು ಎರಡರಿಂದ ಗುಣಕಾರ ಮಾಡಲ್ಪಟ್ಟು ಬಲಗೊಳಿಸಲ್ಪಡುತ್ತವೆ.

ಪ್ರಕಟನೆ ಪುಸ್ತಕದ ಉಳಿದ ಭಾಗದಲ್ಲಿನ ಬಹುಪಾಲು ಸಂಖ್ಯೆಗಳು ಈಗಾಗಲೇ ಚರ್ಚಿಸಿರುವ ಸಂಖ್ಯೆಗಳ ಸಂಯೋಜನೆ ಆಗಿವೆ. ಹೇಗೂ, ಸಂಪೂರ್ಣ ಪಟ್ಟಿಯನ್ನು ಮುಂದಿಡುವದಕ್ಕೆ ಮುಂಚೆ, ನಾವು ಅತ್ಯಂಥ ಪ್ರಾಮುಖ್ಯವಾದ ಸಂಖ್ಯೆಯ-"ಏಳು"-ಕಡೆಗೆ ಗಮನವನ್ನು ಕೊಡಬೇಕು ಮತ್ತು ಈ ಸಂಖ್ಯೆಯಿಂದ ಹೊರಬರುವ ಕೆಲವು ಅಂಕೆಗಳನ್ನು ಪರಿಗಣಿಸತಕ್ಕದ್ದು. ಉದಾಹರಣೆಗೆ, ನಾವು ಸಂಖ್ಯೆ "ಆರು" ಕುರಿತು ನೋಡೋಣ. "ಆರು" ಎಂಬುದು ಒಂದು ಕಡಿಮೆ "ಏಳು" ಆಗಿರುತ್ತದೆ; "ಏಳು" ಪರಿಪೂರ್ಣತೆಯನ್ನು ಸೂಚಿಸುವದಾಗಿರುವದರಿಂದ, "ಆರು" ಅಪರಿಪೂರ್ಣತೆ ಅಥವಾ ಕೆಟ್ಟದ್ದನ್ನು ಸೂಚಿಸುತ್ತದೆ. ಆ ದಿನದ ಬಹಳಷ್ಟು ಯೆಹೂದ್ಯರ ಮಟ್ಟಿಗೆ, "ಆರು" ಸಂಖ್ಯೆಗೆ ಇಂದು "ಹದಿಮೂರು" ಸಂಖ್ಯೆಗೆ ಇರುವಂಥ ಅದೇ ಅಧಿಕಾರ್ಥವು ಇತ್ತು. ಆರು ಹೆಚ್ಚುಕಡಿಮೆ ಏಳು ಆಗಿರುವದರಿಂದ, "ಆರು" ವಂಚನೆಯ ಸೂಚ್ಯಾರ್ಥವನ್ನು ಹೊಂದಿದೆ. ಅಂತಿಮವಾಗಿ, "ಆರು" ನಾಶನವನ್ನು ಮುಂತಿಳಿಸುವದಕ್ಕೆ ಬಳಸಲ್ಪಡುತ್ತಿತ್ತು. ನಾವು 13:18ರಲ್ಲಿನ ಕುಖ್ಯಾತ "666"ಕ್ಕೆ ಬರುವಾಗ ಈ ಯೋಚನೆಯನ್ನು ಮನಸ್ಸಿನಲ್ಲಿಟ್ಟುಕೊಂಡಿರಿ. ಇದರ ವಿಷಯವಾಗಿ, 4 ಮತ್ತು 5 ಅಧ್ಯಾಯಗಳಲ್ಲಿನ ಆರು ರೆಕ್ಕೆಗಳುಳ್ಳ ಜೀವಿಸುವ ಪ್ರಾಣಿಗಳು ಒಂದು ಸವಾಲನ್ನು ಮುಂದಿಡುತ್ತವೆ. ಅವುಗಳನ್ನು ಬಹುಶಃ *ಮೂರು ಜೋಡಿ* ರೆಕ್ಕೆಗಳೆಂದು ಯೋಚಿಸಿಕೊಳ್ಳತಕ್ಕದ್ದು.

ಪ್ರಕಟನೆ ಪುಸ್ತಕದಲ್ಲಿನ ಏಳು ಸಂಖ್ಯೆಯಿಂದ ತೆಗೆದುಕೊಳ್ಳಲಾದ ಅತ್ಯಂಥ ಆಸಕ್ತಿಕರವಾದ ಅಂಕೆ ಎಂದರೆ "3½" ಅಥವಾ ಏಳರಲ್ಲಿ ಅರ್ಧ ಭಾಗ. "ಏಳು" ಸಂಪೂರ್ಣತೆಯನ್ನು ಪ್ರತಿನಿಧಿಸುತ್ತದಾದ್ದರಿಂದ, "3½" *ಅಸಂಪೂರ್ಣತೆ*ಯನ್ನು ಸೂಚಿಸುತ್ತದೆ. ಪ್ರಕಟನೆ ಪುಸ್ತಕದಲ್ಲಿ ಈ ಸಂಖ್ಯೆಯು ಸಾಮಾನ್ಯವಾಗಿ ಸಂಕಷ್ಟ, ಕಷ್ಟ, ಹಾಗೂ ಪರಿಶೋಧನೆ ಸಂಬಂಧಗೊಳಿಸಲ್ಪಟ್ಟಿರುತ್ತದೆ-ಮುಂದೊಂದು ಉತ್ತಮ ದಿನವಿರುತ್ತದೆಂದು ಸೂಚಿಸುವದಾಗಿದೆ. "3½" ನ್ನು ವ್ಯಕ್ತಪಡಿಸುವ ಹಲವಾರು ದಾರಿಗಳನ್ನು ಪ್ರಕಟನೆ ಪುಸ್ತಕದಲ್ಲಿ ಬಳಸಲಾಗಿದೆ. ಉದಾಹರಣೆಗೆ, "42 ತಿಂಗಳು" ಮತ್ತು "1,260 ದಿನಗಳು" ಎಂಬವುಗಳು "3½ ವರ್ಷಗಳು" ಎಂದು ಹೇಳುವದಕ್ಕೆ ಪರ್ಯಾಯ ರೀತಿಗಳಾಗಿವೆ. ವಿಶೇಷವಾಗಿ ಮನಮೋಹಕಗೊಳಿಸುವ ಕಾರ್ಯವೆಂದರೆ "ಒಂದು ಕಾಲ, ಎರಡು ಕಾಲ, ಅರ್ಧಕಾಲ" ಎಂಬ ಪದಗುಚ್ಛವಾಗಿದೆ. ಪ್ರಕಟನೆ 12ರಲ್ಲಿ, "ಸಾವಿರದ ಇನ್ನೂರ ಅರವತ್ತು ದಿನಗಳು" (ವ. 6) ಎಂಬುದು "ಒಂದು ಕಾಲ, ಎರಡು ಕಾಲ, ಅರ್ಧಕಾಲ" ಎಂಬುದರೊಂದಿಗೆ ಪರ್ಯಾಯವಾಗಿ ಬಳಸಲ್ಪಟ್ಟಿದೆ (ವ. 14). "ಕಾಲಗಳು" ಎಂಬ ಪದವು ಕನಿಷ್ಠ ಬಹುವಚನ ಸಂಖ್ಯೆಯನ್ನು ಸುಚಿಸುತ್ತದೆ: *ಎರಡು* ಕಾಲ. "ಒಂದು ಕಾಲ, ಎರಡು ಕಾಲ, ಅರ್ಧಕಾಲ" ಎಂಬುದು "3½ ವರ್ಷಗಳು" ಎಂದು ಹೇಳುವ ಇನ್ನೊಂದು ರೀತಿಯಾಗಿದೆ.

ಮುಂದಿನ ಪುಟದಲ್ಲಿರುವ ಪಟ್ಟಿಯು ಪ್ರಕಟನೆ ಪುಸ್ತಕದಲ್ಲಿ ಬಳಸಲ್ಪಟ್ಟಿರುವ ಬಹುಪಾಲು ಸಂಖ್ಯೆಗಳನ್ನು ತೋರಿಸುತ್ತದೆ. ಪಟ್ಟಿಯಲ್ಲಿರುವ ಸಂಖ್ಯೆಗಳು ಹೇಗೆ ಒಂದು, ಮೂರು, ನಾಲ್ಕು, ಮತ್ತು/ಅಥವಾ ಹತ್ತು ಅಂಕೆಗಳಿಗೆ ಸಂಬಂಧ ಹೊಂದಿರುತ್ತವೆಂಬುದಕ್ಕೆ ಸೂಕ್ಷ್ಮವಾದ ಗಮನವನ್ನು ಕೊಡಿರಿ. NASBಯು ಪ್ರಾಚೀನ ತೂಕ ಹಾಗೂ ಅಳತೆಗಳನ್ನು ಆಧುನಿಕರಣಗೊಳಿಸುತ್ತದೆ. ಬೈಬಲಿನ ಬಹುಪಾಲು ಪುಸ್ತಕಗಳಲ್ಲಿ ಅದು ಸಹಾಯಕವಾಗಿರುತ್ತದೆ, ಆದರೆ ಪ್ರಕಟನೆ ಪುಸ್ತಕದಲ್ಲಿ, ಈ ಪದ್ಧತಿಯು ಕೆಲವು ವಚನಗಳಲ್ಲಿ ಸಂಖ್ಯೆಗಳ ಸಾಂಕೇತಿಕತೆಯನ್ನು ಹಾಳು ಮಾಡುತ್ತದೆ. ಉದಾಹರಣೆಗೆ, NASBಯಲ್ಲಿ ಪರಿಶುದ್ಧ ಪಟ್ಟಣವು 1,500 ಮೈಲಿಗಳಷ್ಟು ಅಗಲ, ಉದ್ದ ಮತ್ತು ಎತ್ತರವಿದೆ ಎಂದು ಹೇಳಲಾಗಿರುತ್ತದೆ (21:16)-ಮತ್ತು ನೀವು ಕೊಡಲಾಗಿರುವ ಪಟ್ಟಿಯಲ್ಲಿ 1,500ನ್ನು ಕಾಣುವದಿಲ್ಲ. KJV; NKJV; ASV; RSV ಮತ್ತು ಇತರ ತರ್ಜುಮೆಗಳಲ್ಲಿ ನೀವು ಅಳತೆಯು ವಾಸ್ತವಿಕದಲ್ಲಿ *12,000 ಮೈಲಿಗಳು* (ಅಕ್ಷರಶಃ, *stadia*) - *ಮತ್ತು* 12,000 ನಮ್ಮ ಪಟ್ಟಿಯಲ್ಲಿರುತ್ತದೆ.

ಪಟ್ಟಿಯಲ್ಲಿ ಸಿಕ್ಕುವ ಇಡೀ ಸಂಖ್ಯೆಗಳ ಜೊತೆಯಲ್ಲಿ, ಪ್ರಕಟನೆ ಪುಸ್ತಕದೊಳಗೆ ಕೆಲವು ಭಿನ್ನರಾಶಿ ಸಂಖ್ಯೆಗಳು ಬಳಸಲ್ಪಟ್ಟಿವೆ. ಸಾಮಾನ್ಯವಾಗಿ, ಇವುಗಳ ಅರ್ಥವು "ಒಂದು ಭಾಗ ಆದರೆ ಪೂರ್ಣ ಅಲ್ಲ": $\frac{1}{10}$ = ಒಂದು ಚಿಕ್ಕ ಭಾಗ, $\frac{1}{4}$ = ಕೆಲವು, $\frac{1}{3}$ = ಒಂದು ಸತ್ವವುಳ್ಳ ಸಂಖ್ಯೆ. $\frac{1}{3}$ರ ಇನ್ನೊಂದು ಭಾವನೆ ಎಂದರೆ ಯಾವದನ್ನೇ ಆಗಲಿ *ಮೂರು ಭಾಗಗಳಾಗಿ* ವಿಂಗಡಿಸುವಿಕೆ. ಈ ಭಿನ್ನರಾಶಿ ಸಂಖ್ಯೆಗಳಲ್ಲಿ ಎಲ್ಲವೂ ಅಲ್ಲದಿದ್ದಾಗ್ಯೂ, ಬಹುಪಾಲು ಭಾಗವು ದೇವರ ನ್ಯಾಯತೀರ್ಪುಗಳಿಗೆ ಸಂಬಂಧ ಪಟ್ಟಿರುತ್ತದೆ. Jim McGuigganನು ಅಭಿಪ್ರಾಯ ಪಟ್ಟದ್ದೇನೆಂದರೆ ಪ್ರಕಟನೆ ಪುಸ್ತಕದಲ್ಲಿ ಬಳಸಲಾಗಿರುವ ಭಿನ್ನರಾಶಿ ಸಂಖ್ಯೆಗಳು "ಒಟ್ಟಾರೆ ಮೊತ್ತದಲ್ಲಿ ಸ್ವಲ್ಪ ಭಾಗ" ಎಂದು ತಿಳಿಸುವದಾಗಿದ್ದು "ಮಿಕ್ಕದ್ದು ಅನಂತರದಲ್ಲಿ ಬರಲಿದೆ" ಎಂದು ಸೂಚಿಸುತ್ತದೆ.[46] ನಾವು ಈ ದಿನಗಳಲ್ಲಿ ಸಾಲದಲ್ಲಿ ಖರೀದಿ ಮಾಡುವ ವೇಳೆ, ಮುಂಗಡ ಹಣವಾಗಿ ಒಟ್ಟು ಮೊತ್ತದ ಹತ್ತರಲ್ಲೊಂದು, ನಾಲ್ಕರಲ್ಲೊಂದು, ಅಥವಾ ಮೂರರಲ್ಲೊಂದು ಭಾಗವನ್ನು ಸಂದಾಯ ಮಾಡಬೇಕಾದ ಅಗತ್ಯವಿರುತ್ತದೆಂಬುದು ಸರ್ವಸಾಮಾನ್ಯವಾಗಿರುತ್ತದೆ.

# ಪ್ರಕಟನೆಯಲ್ಲಿ ಬಳಸಲಾಗಿರುವ ಸಾಂಕೇತಿಕ ಸಂಖ್ಯೆಗಳು

**1** = ಒಂದು ಘಟಕ (ಒಂದೇ ಒಂದು)

**2** (1 + 1) = ಬಲಗೊಂಡದ್ದು

**3** = ದೇವತ್ವದ ಸಂಖ್ಯೆ

**3½** (7ರ ಅರ್ಧಭಾಗ) = ಅಸಂಪೂರ್ಣತೆ (42 ತಿಂಗಳುಗಳು; 1,260 ದಿನಗಳು; "ಒಂದು ಕಾಲ, ಎರಡು ಕಾಲ, ಅರ್ಧಕಾಲ" = ಒಂದು 3½-ವರ್ಷದ ಸಂಕಷ್ಟದ ಕಾಲ, ಮುಂದೆ ಭವಿಷ್ಯಕ್ಕಾಗಿ ಒಂದು ನಿರೀಕ್ಷೆಯನ್ನು ಸೂಚಿಸುತ್ತದೆ)

**4** = ಸೃಷ್ಟಿಯ ಸಂಖ್ಯೆ (ಬ್ರಹ್ಮಾಂಡದ ಸಂಖ್ಯೆ, ಮಾನವ ಜನಾಂಗ)

**5** (10ರ ಅರ್ಧಭಾಗ) = ಮಿತವಾದ ಶಕ್ತಿ

**6** (7 - 1) = ಅಪರಿಪೂರ್ಣತೆ (ಕೆಟ್ಟದ್ದು, ವಂಚನೆ, ಅಂತಿಮ ವಿಫಲತೆ)

**7** (3 + 4) = ಪರಿಪೂರ್ಣತೆ (ಪವಿತ್ರ ಸಂಪೂರ್ಣತೆ)

**10** = ಮಾನವ ಸಂಪೂರ್ಣತೆ (ಪೂರ್ಣತೆ ಅಥವಾ ಶಕ್ತಿ)

**12** (3 x 4) = ಧಾರ್ಮಿಕ ಸಂಪೂರ್ಣತೆ

**24** (2 x 12) = ತೀಕ್ಷ್ಣಗೊಳಿಸಲ್ಪಟ್ಟ ಧಾರ್ಮಿಕ ಸಂಪೂರ್ಣತೆ

**40** (4 x 10) = ಮಾನವ ಮಟ್ಟವೊಂದರಲ್ಲಿ ಸಂಪೂರ್ಣತೆ

**42** (ನೋಡಿರಿ 3½)

**144** (12 x 12) = ಸಂಪೂರ್ಣತೆಯ ಧಾರ್ಮಿಕ ಸಂಪೂರ್ಣತೆ

**666** (ನೋಡಿರಿ 6) = ಅಪರಿಪೂರ್ಣತೆ, ಕೆಟ್ಟದ್ದು, ವಂಚನೆ, ಮತ್ತು ವಿಫಲತೆ ತೀಕ್ಷ್ಣಗೊಳಿಸಲ್ಪಟ್ಟಿದ್ದು

**1,000** (10 x 10 x 10) = ಸಂಪೂರ್ಣತೆಯ ಸಂಪೂರ್ಣತೆಯಲ್ಲಿನ ಸಂಪೂರ್ಣತೆ

**1,260** (ನೋಡಿರಿ 3½)

**1,600** (4 x 4 x 10 x 10) = ಮಾನವ ಮಟ್ಟದಲ್ಲಿ ಸಮಗ್ರತೆ

**7,000** (7 x 1,000) = ತೀಕ್ಷ್ಣಗೊಂಡ ಸಂಪೂರ್ಣತೆ

**12,000** (12 x 1,000) = ತೀಕ್ಷ್ಣಗೊಂಡ ಸಂಪೂರ್ಣತೆ

**144,000** (144 x 1,000) = ತೀಕ್ಷ್ಣಗೊಂಡ ಸಂಪೂರ್ಣತೆ

**200,000,000** (2 x ಅನೇಕ 10's) = ಅಪರಾಜೇಯ ಶಕ್ತಿ

**1,000,000,000** ಮತ್ತು ಅಧಿಕ = ಅಸಂಖ್ಯಾತ, ಮಾನವ ಬುದ್ಧಿಗೆ ಗ್ರಹಿಸಲಾಗದಷ್ಟು

ಸಂಖ್ಯೆಗಳ ಸಾಂಕೇತಿಕ ಬಳಕೆಯ ಕುರಿತ ಅಧ್ಯಯನದಿಂದ ಮುಂದಕ್ಕೆ ಹೋಗುವ ಮುಂಚೆ ಪ್ರಕಟನೆ ಪುಸ್ತಕದಲ್ಲಿ ಸಂಖ್ಯೆಗಳ ಅರ್ಥನಿರೂಪಣೆ ಮಾಡುವ ವಿಷಯದಲ್ಲಿ ಎರಡು ಎಚ್ಚರಿಕೆಗಳನ್ನು ಕೊಡತಕ್ಕದ್ದಾಗಿದೆ:

ಮೊದಲನೆಯದಾಗಿ, ನಿಮ್ಮ ಕಲ್ಪನೆಯನ್ನು ಲಂಗುಲಗಾಮು ಇಲ್ಲದೆ ಓಡುವಂತೆ ಬಿಡಬೇಡಿರಿ. Bruce M. Metzger ಮುಂದುವರೆದು ಹೀಗೆ ಹೇಳುತ್ತಾನೆ, "ಪ್ರಕಟನೆ ಪುಸ್ತಕವು ಪ್ರಾಥಮಿಕವಾಗಿ ನಮ್ಮ ಕಲ್ಪನಾಶಕ್ತಿಗೆ ಆಕರ್ಷಣೆಯುಂಟು ಮಾಡುವದರಲ್ಲಿ ವಿಶಿಷ್ಟವಾಗಿರುತ್ತದೆ -ಹೇಗೂ, ಮಿತಿಯಿಲ್ಲದೆ ಓಡುವಂಥ ಕಲ್ಪನೆ ಮಾಡಿಕೊಳ್ಳುವಿಕೆಗಂತೂ ಅಲ್ಲ, ಆದರೆ ಒಂದು ಶಿಸ್ತುಬದ್ಧ ಕಲ್ಪನೆಗೆ ಆಗಿದೆ."[47] ಸಲಹೆ ಮಾಡಲ್ಪಟ್ಟಿರುವ ಸಾಂಕೇತಿಕ ಅರ್ಥಗಳು ಈ ಸಂಖ್ಯೆಗಳು ಹಳೆಯ ಒಡಂಬಡಿಕೆ ಹಾಗೂ ಯೆಹೂದಿ ಬರಹಗಳಲ್ಲಿ - ವಿಶೇಷವಾಗಿ ಅಂತ್ಯಕಾಲಿಕ ಸಾಹಿತ್ಯದಲ್ಲಿ -ಬಳಸಲ್ಪಟ್ಟಿರುವದನ್ನು ಪರೀಕ್ಷಿಸಿ ನೋಡಿದ್ದರ ಫಲಿತವಾಗಿರುತ್ತವೆ. ಈ ಭಾವನೆಗಳು ಪ್ರಕಟನೆ ಪುಸ್ತಕಕ್ಕೋಸ್ಕರ ಆವಿಷ್ಕರಿಸಲ್ಪಟ್ಟ ವುಗಳಲ್ಲ; ಅವುಗಳು ಪುಸ್ತಕದ ಮೇಲೆ ತನ್ನ ಸ್ವಂತ ಅರ್ಥನಿರೂಪಣೆಯನ್ನು ಒತ್ತಾಯಪೂರ್ವಕವಾಗಿ ಹೊರಿಸುವದಕ್ಕೆ ಬಯಸಿ ಯಾವನೋ ಒಬ್ಬನು ನಿಯಂತ್ರಣವಿಲ್ಲದ ಕಲ್ಪನೆಯನ್ನು ಮಾಡಿಕೊಂಡಿದ್ದರ ಫಲಿತವಾಗಿರುವದಿಲ್ಲ.

ಎರಡನೆಯದಾಗಿ, ಅಂತ್ಯಕಾಲಿಕ ಸಾಹಿತ್ಯದಲ್ಲಿ ಸಂಖ್ಯಾತ್ಮಕ ಸಂಕೇತಗಳನ್ನು ಬಳಕೆ ಮಾಡುವದು ಐಂದ್ರಜಾಲಿಕದಲ್ಲಿ (ಮಾಂತ್ರಿಕತೆಯಲ್ಲಿ) ಬಳಸುವ ಸಂಖ್ಯಾಶಾಸ್ತ್ರದಂತೆ *ಅಲ್ಲ* ಎಂಬುದನ್ನು ಅರ್ಥಮಾಡಿಕೊಳ್ಳಿರಿ, ಐಂದ್ರಜಾಲವೆಂದರೆ "ಸಂಖ್ಯೆಗಳ ಮಾಂತ್ರಿಕವಾದ ಅರ್ಥಗಳು ಹಾಗೂ ಮಾನರ ಜೀವಿತದ ಮೇಲೆ ಅದರ ಪ್ರಭಾವದ ಕುರಿತು ಅಧ್ಯಯನ ಮಾಡುವದು" ಆಗಿರುತ್ತದೆ.[48] "ಸಂಖ್ಯಾಶಾಸ್ತ್ರ" ಎಂಬ ಪದದ ಅಕ್ಷರಶಃ ಅರ್ಥವು "ಸಂಖ್ಯೆಗಳ ಅಧ್ಯಯನ" ಎಂದಾಗಿರುತ್ತದೆ ಮತ್ತು ಆ ಕಾರಣದಿಂದ ಅದು ಸ್ವತಃ ಕೆಟ್ಟ ಪದವೇನೂ ಆಗಿರುವದಿಲ್ಲ. ಹೇಗೂ, ಅದು ಬಹಳಷ್ಟು ಜನರ ಮನಸ್ಸುಗಳಲ್ಲಿ *ಐಂದ್ರಜಾಲಿಕವಾಗಿ* ಸಂಖ್ಯೆಗಳು ಬಳಸಲ್ಪಡುವದರೊಂದಿಗೆ ಗುರುತಿಸಲ್ಪಡುತ್ತದಾ ದ್ದರಿಂದ, ಪ್ರಕಟನೆ ಪುಸ್ತಕದಲ್ಲಿನ ಸಂಖ್ಯೆಗಳ ಸಾಂಕೇತಿಕ ಅರ್ಥವನ್ನು ಸೂಚಿಸಿ ಹೇಳುವಾಗ ಆ ಪದವನ್ನು ಬಳಸದೆ ಇರುವದೇ ಉತ್ತಮವಾಗಿರುತ್ತದೆ. ಬೈಬಲಿನುದ್ದಕ್ಕೂ ಇರುವ ಸಂಖ್ಯೆಗಳ ಮಾಂತ್ರಿಕವಾದ ಅಥವಾ ನಿಗೂಢ ಅರ್ಥಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡುವ ಚರ್ಚೆಗಳು Earl F. Palmerನ *1, 2, 3 John & Revelation*[49] ಮತ್ತು John J. Davisನ *Biblical Numerology*[50] ಪುಸ್ತಕಗಳಲ್ಲಿ ಕಾಣಬಹುದಾಗಿದೆ. ಸುದೀರ್ಘವಾಗಿ ಚರ್ಚೆಯ ಅಂತ್ಯದಲ್ಲಿ, Davis ಹೀಗೆ ಹೇಳುತ್ತಾನೆ, "ಬೈಬಲ್ ಸಂಖ್ಯೆಗಳ ಪ್ರತಿಪಾದಕರಿಂದ ಪ್ರಸ್ತಾಪಿಸಲ್ಪಡುವ ಹೇಳಿಕೆಗಳನ್ನು ಮತ್ತು ವಿಧಾನಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದ ಬಳಿಕ, ಇಡೀ ವ್ಯವಸ್ಥೆಯು ಒಂದು ನ್ಯಾಯಯುತವಾದ ಸ್ಪಷ್ಟೀಕರಣ ವಿಧಾನವೆಂಬುದನ್ನು ತಿರಸ್ಕರಿಸತಕ್ಕದ್ದು ಎಂಬ ಅಂತಿಮ ನಿರ್ಧಾರಕ್ಕೆ ಬಂದೆವು."[51] J. B. Segal ಗಮನಕ್ಕೆ ತಂದಿದ್ದೇನೆಂದರೆ, "ಬೈಬಲಿನ ಅಂಕಿಅಂಶಗಳು, ಐಗುಪ್ತದ ಮಹಾನ್ ಪಿರಮಿಡ್ ರೀತಿಯಲ್ಲಿಯೇ, ವಕ್ರೋಕ್ತಿ ಹಾಗೂ ತಿಕ್ಕಲುಗಳಿಗೆ ಮರಣಾಂತಿಕ ಆಕರ್ಷಣೆಗೊಳಗಾಗುತ್ತವೆ-ಸ್ವಲ್ಪ ಎಚ್ಚರಿಕೆಯನ್ನು ವಹಿಸುವಾಗ ಬುದ್ಧಿವಂತರು ಸಹ ಅಂಥ ಮೋಹಕ್ಕೊಳಗಾಗುತ್ತಾರೆ."[52] ಐಂದ್ರಜಾಲಿಕ ಸಂಖ್ಯಾಶಾಸ್ತ್ರವು ಭವಿಷ್ಯವನ್ನು ಮುಂತಿಳಿಸುವ ದಾರಿಯಾಗಿ ಮೂಢನಂಬಿಕೆಯಿಂದ ಬಳಸಲ್ಪಡುತ್ತಿತ್ತು, ಮತ್ತು ಬಳಸಲ್ಪಡುತ್ತಿದೆ. ಈ ಆಚಾರವು ಜ್ಯೋತಿಷ್ಯಶಾಸ್ತ್ರ ಮತ್ತು ಕಣಿ ಹೇಳುವ ಇತರೆ ಆಚಾರಗಳ[53] ವರ್ಗಕ್ಕೆ ಸೇರಿಸಲ್ಪಡುತ್ತದೆ, ಅವುಗಳೆಲ್ಲಾ ಬೈಬಲಿನಲ್ಲಿ ಖಂಡಿಸಲ್ಪಟ್ಟಿರುತ್ತವೆ

(ಧರ್ಮೋಪದೇಶಕಾಂಡ 18:9-13; ಯೆಶಾಯ 47:8-15). ಈ ವಿಭಾಗದಲ್ಲಿ ತಿಳಿಸಲಾಗಿರುವ ಸರಳ, ಸ್ವಸ್ಥ ಸಂಕೇತತತ್ವವು ಐಂದ್ರಜಾಲಿಕ ಸಂಖ್ಯಾಶಾಸ್ತ್ರಜ್ಞರು ಮಾಡುವ ನಿಯಂತ್ರಣವಿಲ್ಲದ ಮತ್ತು ಅನಗತ್ಯವಾದ ನಿರ್ಧಾರಗಳಿಗಿಂತ ಬಹು ದೂರವಾಗಿರುತ್ತವೆ. ಪೌಲನ ಮಾತುಗಳನ್ನು ಬಳಸಿಕೊಂಡು, ಈ ಸಲಹೆಯನ್ನು ಕೊಡುತ್ತೇವೆ: "ಮೂಢರ ಬುದ್ಧಿಯಿಲ್ಲದ ವಿಚಾರಗಳು ಜಗಳಗಳಿಗೆ ಕಾರಣವಾಗಿವೆ ಎಂದು ತಿಳಿದು ಅವುಗಳ ಗೊಡವೆಗೆ ಹೋಗಬೇಡ." (2 ತಿಮೊಥೆ 2:23.)

2. *ಹಳೆಯ ಒಡಂಬಡಿಕೆಯಿಂದ ಸಾಂಕೇತಿಕತೆ.* ಸಂಕೇತಗಳ ಮುಂದಿನ ವಿಭಾಗವು ಹಳೆಯ ಒಡಂಬಡಿಕೆಗೆ ಸಂಬಂಧಪಟ್ಟದ್ದಾಗಿದೆ. ಪ್ರಕಟನೆ ಪುಸ್ತಕವು ಹಳೆಯ ಒಡಂಬಡಿಕೆಯ ನಾನ್ನೂರಕ್ಕಿಂತ ಅಧಿಕ ಉಲ್ಲೇಖನಗಳನ್ನು ಒಳಗೊಂಡಿರುತ್ತದೆ, ಆದಾಗ್ಯೂ ಇವುಗಳಲ್ಲಿ ಯಾವದೊಂದೂ ನೇರವಾದ ಪ್ರಶ್ನೆಯಾಗಿರುವದಿಲ್ಲ.[54] ಇವುಗಳಲ್ಲಿ ಬಹುಪಾಲು ಉಲ್ಲೇಖನಗಳು ಹಳೆಯ ಒಡಂಬಡಿಕೆಯ ವ್ಯಕ್ತಿಗಳಿಗೆ ಅಥವಾ ಘಟನೆಗಳಿಗೆ ಸಂಬಂಧಿಸಿದವುಗಳಾಗಿವೆ. ಹಳೆಯ ಒಡಂಬಡಿಕೆಯೊಂದಿಗೆ ಪರಿಚಿತರಾಗಿದ್ದ ಆದಿ ಕ್ರೈಸ್ತರಿಗಾದರೋ, ಕೇವಲ ಒಬ್ಬ ವ್ಯಕ್ತಿ ಅಥವಾ ಘಟನೆಯ ಬಗ್ಗೆ ಪ್ರಸ್ತಾಪಿಸಿದ ಮಾತ್ರದಿಂದಲೇ ಒಂದು ಮಾನಸಿಕ ಪ್ರತಿಕ್ರಿಯೆಯನ್ನು ಎಬ್ಬಿಸುವದಾಗಿತ್ತು, ಪ್ರತಿಯಾಗಿ ಅದು ಪ್ರಕಟನೆ ಪುಸ್ತಕದಲ್ಲಿ ಅದರ ಬಳಕೆಯ ಮಹತ್ವಪೂರ್ಣತೆಗೆ ಒಂದು ಸುಳಿವು ಕೊಡುವದಾಗಿತ್ತು. ಈ ಉಲ್ಲೇಖಗಳಲ್ಲಿನ ಒಂದು ಭಾಗಶಃ ಪಟ್ಟಿಯು ಈ ಕೆಳಗಿನಂತಿರುತ್ತದೆ, ಕಾಲಾನುಕ್ರಮದಲ್ಲಿ ವ್ಯವಸ್ಥೆಗೊಳಿಸಲಾಗಿರುತ್ತದೆ.

ಸೃಷ್ಟಿ ಮತ್ತು ಬೀಳುವಿಕೆ

- ಪ್ರಥಮ ಆಕಾಶ ಮತ್ತು ಭೂಮಿ (ಆದಿಕಾಂಡ 1:1; ಪ್ರಕಟನೆ 21:1)
- ಏದೆನ್/ಪರದೈಸ್ (ಆದಿಕಾಂಡ 2:8; 3:23; ಪ್ರಕಟನೆ 2:7)
- ಜೀವವೃಕ್ಷ (ಆದಿಕಾಂಡ 2:9; 3:22-24; ಪ್ರಕಟನೆ 2:7; 22:2)
- ಮೆಸ್ಸೀಯನ ಕುರಿತ ಪ್ರಥಮ ವಾಗ್ದಾನ (ಆದಿಕಾಂಡ 3:15; ಪ್ರಕಟನೆ 12:7-11)

ಮೂಲಪಿತೃಗಳು (ಆದಿಕಾಂಡ 10:1; 12:1; ಪ್ರಕಟನೆ 4:4)

- ಮುಗಿಲು ಬಿಲ್ಲು (ಆದಿಕಾಂಡ 9:11-17; ಪ್ರಕಟನೆ 4:3; 10:1)
- ಸೊದೋಮ್ (ಆದಿಕಾಂಡ 18:16-33; 19:1-29; ಪ್ರಕಟನೆ 11:8)
- ಹನ್ನೆರಡು ಗಥತ್ರಗಳು (ಆದಿಕಾಂಡ 35:22-26; ಪ್ರಕಟನೆ 7:4-8; 21:12)
- ಯೆಹೂದನಿಗೆ ವಾಗ್ದಾನ (ಆದಿಕಾಂಡ 49:10; ಪ್ರಕಟನೆ 5:5)
- ಯೆಹೂದನು ಸಿಂಹವಾಗಿ ಪ್ರತಿನಿಧಿಸಲ್ಪಟ್ಟಿರುತ್ತಾನೆ (ಆದಿಕಾಂಡ 49:9; ಪ್ರಕಟನೆ 5:5).

ಮೋಶೆ ಮತ್ತು ವಿಮೋಚನಾಯಾತ್ರೆ

- ಐಗುಪ್ತ (ವಿಮೋಚನಕಾಂಡ 1:1, 13, 14; ಪ್ರಕಟನೆ 11:8)
- ಹತ್ತು ಉಪದ್ರವಗಳು (ವಿಮೋಚನಕಾಂಡ 7:14-25; 8:1-32; 9:1-35; 10:1-29; 11:1-10; 12:1-32; ಪ್ರಕಟನೆ 8:7-13; 9:1-21; 11:6; 15:1-8; 16:1-21; 22:18)
- ಪಸ್ಕದ ಕುರಿ (ವಿಮೋಚನಕಾಂಡ 12:21-27; ಪ್ರಕಟನೆ 5:6)
- ಮೋಶೆಯ ಜಯ ಗೀತೆ (ವಿಮೋಚನಕಾಂಡ 15:1-19; ಪ್ರಕಟನೆ 15:3, 4)

ಅರಣ್ಯ (ವಿಮೋಚನಕಾಂಡ 16:1; ಪ್ರಕಟನೆ 12:6, 14)
ದೇವರಿಂದ ಬಂದ ಮನ್ನಾ (ವಿಮೋಚನಕಾಂಡ 16:31, 35; ಪ್ರಕಟನೆ 2:17)
ಸಿನಾಯ್ ಪರ್ವತ (ಭೂಕಂಪ, ಸಿಡಿಲು, ಗುಡುಗು; ವಿಮೋಚನಕಾಂಡ 19:16-20; ಪ್ರಕಟನೆ 4:5)
ದೇವದರ್ಶನ ಗುಡಾರ (ದೇವಾಲಯದ ಉಲ್ಲೇಖನಗಳನ್ನು ನೋಡಿರಿ; ವಿಮೋಚನಕಾಂಡ 25:9; ಪ್ರಕಟನೆ 21:3)
ಒಡಂಬಡಿಕೆಯ ಮಂಜೂಷ (ವಿಮೋಚನಕಾಂಡ 25:10; ಅರಣ್ಯಕಾಂಡ 10:33; ಪ್ರಕಟನೆ 11:19)
ದೀಪಸ್ತಂಭ (ವಿಮೋಚನಕಾಂಡ 25:31; ಪ್ರಕಟನೆ 1:12, 20; 2:1; 4:5)
ಯಜ್ಞವೇದಿ (ವಿಮೋಚನಕಾಂಡ 27:1; ಪ್ರಕಟನೆ 6:9; 8:5)
ಧೂಪ (ವಿಮೋಚನಕಾಂಡ 30:1; ಪ್ರಕಟನೆ 5:8; 8:3, 4)
ಜೀವಭಾಧ್ಯರ ಪುಸ್ತಕ (ವಿಮೋಚನಕಾಂಡ 32:33; ನೋಡಿರಿ ಕೀರ್ತನೆ 69:28; ಮಲಾಕಿ 3:16; ಪ್ರಕಟನೆ 3:5; 20:12, 15; 21:27)
ಬಿಳಾಮನು (ಅರಣ್ಯಕಾಂಡ 22:5; ನೋಡಿರಿ 2 ಪೇತ್ರ 2:15; ಪ್ರಕಟನೆ 2:14)

ನ್ಯಾಯಸ್ಥಾಪಕರು
ಮೆಗಿದ್ದೋ ಕಣಿವೆ (ನ್ಯಾಯಸ್ಥಾಪಕರು 5:19; 2 ಪೂರ್ವಕಾಲವೃತ್ತಾಂತ 35:22-24; ಪ್ರಕಟನೆ 16:16)

ದಾವೀದನು ಮತ್ತು ಐಕ್ಯ ಸಾಮ್ರಾಜ್ಯ
ಯೆರೂಸಲೇಮ್ ಆರಿಸಿಕೊಳ್ಳಲ್ಪಟ್ಟಿದ್ದು (2 ಸಮುವೇಲ 5:5-9; ಪ್ರಕಟನೆ 3:12; 21: 2, 10)
ದಾವೀದನ ಮುಖಾಂತರ ಮೆಸ್ಸೀಯನು ಬರಲಿರುವನು (2 ಸಮುವೇಲ 7:8-17; ಪ್ರಕಟನೆ 5:5; 22:16)
ದೇವಾಲಯ (ದೇವದರ್ಶನ ಗುಡಾರದ ಉಲ್ಲೇಖನಗಳನ್ನು ನೋಡಿರಿ; 1 ಅರಸು 6:1-38; ಪ್ರಕಟನೆ 3:12; 11:19; 15:5, 8; 16:1)
ದೇವಾಲಯದ ಆರಾಧನೆಯಲ್ಲಿ ವೀಣೆಗಳು (1 ಅರಸು 10:12; 1 ಪೂರ್ವಕಾಲವೃತ್ತಾಂತ 25:6; ಪ್ರಕಟನೆ 5:8; 14:2; 15:2)

ಪ್ರವಾದಿಗಳು ಮತ್ತು ದಾವೀದನ ರಾಜ್ಯ
ಎಲೀಯ (1 ಅರಸು 17:1; ನೋಡಿರಿ ಯಾಕೋಬ 5:17, 18; ಪ್ರಕಟನೆ 11:6)
ಈಜಬೇಲಳು (1 ಅರಸು 16:31; ಪ್ರಕಟನೆ 2:20)

ಘಟನೆಗಳು ಮತ್ತು ವ್ಯಕ್ತಿಗಳನ್ನು ಕುರಿತ ಉಲ್ಲೇಖನಗಳ ಜೊತೆಯಲ್ಲಿ, ಪ್ರಕಟನೆ ಪುಸ್ತಕದಲ್ಲಿರುವ ಹಳೆಯ ಒಡಂಬಡಿಕೆಯ ಕೆಲವು ಉಲ್ಲೇಖನಗಳು ಹಳೆಯ ಒಡಂಬಡಿಕೆಯ *ಅಂತ್ಯಕಾಲಿಕ* ವಿಭಾಗದಿಂದ ಎರವಲು ಪಡೆದಿರುವ ಸಂಕೇತಗಳನ್ನೊಳಗೊಂಡಿರುತ್ತದೆ. ಈ ಉಲ್ಲೇಖನಗಳ ಒಂದು ಪಟ್ಟಿಯು ಕೆಳಗಿನಂತಿರುತ್ತದೆ, ಅವುಗಳ ಸಹ ಕಾಲಾನುಕ್ರಮದಲ್ಲಿ ವ್ಯವಸ್ಥೆಗೊಳಿಸಲ್ಪಟ್ಟಿವೆ. ನೀವು ಮೂಲ ಉಲ್ಲೇಖನವನ್ನು ಪೂರ್ಣವಾಗಿ

ಅರ್ಥಮಾಡಿಕೊಳ್ಳಲಿಲ್ಲವಾದಲ್ಲಿ, ಹಳೆಯ ಒಡಂಬಡಿಕೆಯಲ್ಲಿನ ಪದಗಳನ್ನು ಪ್ರಕಟನೆ ಪುಸ್ತಕದಲ್ಲಿರುವ ಪದಗಳೊಂದಿಗೆ ಹೋಲಿಸಿ ನೋಡಿದರೆ ನಿಮಗೆ ಸಹಾಯಕವಾಗುವದು.

ಪ್ರವಾದಿಗಳು ಮತ್ತು ದಾವೀದನ ರಾಜ್ಯ

*ಯೆಶಾಯ*

- ಬಾಬೆಲಿನ ಪತನ (ಯೆಶಾಯ 13:1-11; ಹಳೆಯ ಒಡಂಬಡಿಕೆಯ ಇತರ ಪ್ರವಾದನೆಗಳನ್ನು ನೋಡಿರಿ; ಪ್ರಕಟನೆ 16:19; 17:5; 18:2)
- ದಾವೀದನ ಬೀಗದ ಕೈ (ಯೆಶಾಯ 22:22; ಪ್ರಕಟನೆ 3:7)
- ದ್ರಾಕ್ಷೆಯ ಗಾಣ (ಯೆಶಾಯ 63:3; ಪ್ರಕಟನೆ 14:14-20)
- ಹೊಸ ಆಕಾಶ(ಗಳು) ಮತ್ತು ಹೊಸ ಭೂಮಿ (ಯೆಶಾಯ 65:17-25; 66:22-24; ಪ್ರಕಟನೆ 21:1-27; 22:1-5)

*ಯೋವೇಲ*

- ಮಿಡತೆಗಳು (ಯೋವೇಲ 2:1-27; ಪ್ರಕಟನೆ 9:3-10)

ಪ್ರವಾದಿಗಳು ಮತ್ತು ಸೆರೆವಾಸ

*ಯೆಹೆಜ್ಕೇಲ*

- ನಾಲ್ಕು ಜೀವಿಸುವ ಪ್ರಾಣಿಗಳು (ಯೆಹೆಜ್ಕೇಲ 1:4-25; 10:1-22; ನೋಡಿರಿ ಯೆಶಾಯ 6:1-7; ಪ್ರಕಟನೆ 4:6-9)
- ಮೆಸ್ಸೀಯ ಹಾಗೂ ದೇವರ ವರ್ಣನೆಗಳು (ಯೆಹೆಜ್ಕೇಲ 1:4, 26-28; 43:2; ಪ್ರಕಟನೆ 1:12-16; 4:2, 3, 5)
- ಪುಸ್ತಕವನ್ನು ತಿನ್ನುವದು (ಯೆಹೆಜ್ಕೇಲ 2:7-10; 3:1-4; ಪ್ರಕಟನೆ 10:8-11)
- ಗೋಗ್ ಮತ್ತು ಮಾಗೋಗ್ (ಯೆಹೆಜ್ಕೇಲ 38:2; 39:1, 6; ನೋಡಿರಿ ಆದಿಕಾಂಡ 10:2; ಪ್ರಕಟನೆ 20:8)
- ಪಕ್ಷಿಗಳಿಗೆ ಆಮಂತ್ರಣ (ಯೆಹೆಜ್ಕೇಲ 39:17-20; ಪ್ರಕಟನೆ 19:17, 18)
- ದಡದಲ್ಲಿ ಮರಗಳುಳ್ಳ ಜೀವಜಲದ ನದಿ (ಯೆಹೆಜ್ಕೇಲ 47:1-12; ಪ್ರಕಟನೆ 22:1-3)
- ಅದ್ಭುತಕರವಾದ ಪಟ್ಟಣ (ಯೆಹೆಜ್ಕೇಲ 48:30-35; ಪ್ರಕಟನೆ 21:12, 13, 16)

*ದಾನಿಯೇಲ*

- ಮೆಸ್ಸೀಯ ಹಾಗೂ ದೇವರ ವರ್ಣನೆ (ದಾನಿಯೇಲ 7:9, 10, 13, 14; 10:5, 6; ಪ್ರಕಟನೆ 1:12-16; 4:2, 3, 5)
- ಮೃಗ (ದಾನಿಯೇಲ 7:1-8; ಪ್ರಕಟನೆ 13:1, 2)
- ಪುಸ್ತಕಗಳು ತೆರೆಯಲ್ಪಡುವವು (ದಾನಿಯೇಲ 7:10; ಪ್ರಕಟನೆ 20:11-15)

ಪ್ರವಾದಿಗಳು ಮತ್ತು ಸೆರೆವಾಸದಿಂದ ಹಿಂದಿರುಗುವಿಕೆ

*ಜೆಕರ್ಯ*

ಅಳತೆಗೋಲು (ಜೆಕರ್ಯ 2:2:1-5; ನೋಡಿರಿ ಯೆಹೆಜ್ಕೇಲ 40:3; ಪ್ರಕಟನೆ 11:1, 2; 21:15)

ಇಬ್ಬರು ಸಾಕ್ಷಿಗಳು - ಒಲೀವ್ ಮರಗಳು ಮತ್ತು ದೀಪಸ್ತಂಭಗಳು (ಜೆಕರ್ಯ 4:1-14; ಪರ್ಕಟನೆ 11:3, 4)

ಹಳೆಯ ಒಡಂಬಡಿಕೆಯ ಉಲ್ಲೇಖನಗಳನ್ನು ಅದಕ್ಕೆ ಸಂಬಂಧಿಸಿ ಪ್ರಕಟನೆ ಪುಸ್ತಕದಲ್ಲಿನ ಉಲ್ಲೇಖನಗಳೊಂದಿಗೆ ಹೋಲಿಕೆ ಮಾಡುವಾಗ, "ತಿರುವು" ಗೋಸ್ಕರ ಹುಡುಕಾಡಿರಿ. ಅನೇಕ ಸಾರಿ ಪ್ರಕಟನೆ ಪುಸ್ತಕದಲ್ಲಿನ ಉಲ್ಲೇಖನವು ಹಳೆಯ ಒಡಂಬಡಿಕೆಯಲ್ಲಿನ ಅದಕ್ಕೆ ಸಂಬಂಧಿಸಿದ ಉಲ್ಲೇಖನಕ್ಕಿಂತಲೂ ಒಂದು ಅಥವಾ ಅಧಿಕ ವಿವರಗಳನ್ನು ಒಳಗೊಂಡಿರುತ್ತದೆ. ಈ ವ್ಯತ್ಯಾಸವು ಹಳೆಯ ಒಡಂಬಡಿಕೆಯಿಂದ ತಿಳಿಸಲ್ಪಟ್ಟಿರುವ ಅದೇ ಸಂಗತಿಯನ್ನು ಪ್ರಕಟನೆ ಪುಸ್ತಕವು ನಿಖರವಾಗಿ ಅದೇ ರೀತಿಯಲ್ಲಿಯೇ ಹೇಳುವದಿಲ್ಲ, ಆದರೆ ಅದೇ ರೀತಿಯಲ್ಲಿರುವ ಅಥವಾ ಸಂಬಂಧಪಟ್ಟ ಭಾವನೆಯೊಂದನ್ನು ಕುರಿತು ಮಾತಾಡುತ್ತದೆಂಬುದನ್ನು ಸೂಚಿಸುತ್ತದೆ. ಉದಾಹರಣೆಗೆ, ಪ್ರಕಟನೆ 7:4-8 ವಚನಗಳಲ್ಲಿ ಹನ್ನೆರಡು ಕುಲಗಳ ಪಟ್ಟಿಯು ಇರುತ್ತದೆ. ಒಬ್ಬನು ತಿರುವನ್ನು ಗಮನಿಸುವದಕ್ಕೆ ವಿಫಲನಾಗುವದಾದರೆ, ಅದು ಅಕ್ಷರಶಃ ಯೆಹೂದ್ಯರನ್ನು ಸೂಚಿಸಿ ಹೇಳುತ್ತಿದೆ ಎಂದು ಭಾವಿಸಿಕೊಳ್ಳುವನು. ಹೇಗೂ, ಆ ಪಟ್ಟಿಯನ್ನು ಹಳೆಯ ಒಡಂಬಡಿಕೆಯಲ್ಲಿರುವ ಪಟ್ಟಿಗಳೊಂದಿಗೆ ಹೋಲಿಸಿ, ಉದಾಹರಣೆಗೆ ಆದಿಕಾಂಡ 35:22-26ರಲ್ಲಿರುವಂತಹ ಪಟ್ಟಿಗಳೊಂದಿಗೆ ಹೋಲಿಸಿ ನೋಡುವದಾದರೆ, ಈ ಪಟ್ಟಿಯು ತಪ್ಪಾಗಿರುವದಾಗಿದೆ: ಹನ್ನೆರಡು ಕುಲಗಳಲ್ಲಿ ಲೇವಿಯು ಸೇರಿಸಲ್ಪಟ್ಟಿದ್ದಾನೆ, ದಾನ್ ಆ ಪಟ್ಟಿಯಲ್ಲಿ ಕಾಣಿಸುವದಿಲ್ಲ, ಮತ್ತು ಹೀಗೆ ಪಟ್ಟಿಯಲ್ಲಿ ಅನೇಕ ವ್ಯತ್ಯಾಸಗಳಿರುತ್ತವೆ. ಆದ್ದರಿಂದ ಯೋಹಾನನು ಇಸ್ರಾಯೇಲ್ಯರ ಅಕ್ಷರಶಃ ದೇಶವನ್ನು ಸೂಚಿಸಿ ಹೇಳುತ್ತಿಲ್ಲ ಎಂಬುದನ್ನು ಒಬ್ಬನು ತಕ್ಷಣದಲ್ಲೇ ಕಂಡುಕೊಳ್ಳಬಹುದಾಗಿದೆ (7:4-8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

3. *ಸಂಕೇತಗಳು ಐತಿಹಾಸಿಕ ಹಿನ್ನಲೆಯ ಮೇಲೆ ಆಧಾರವಾಗಿರುತ್ತವೆ.* ಸಂಖ್ಯೆ ಹಾಗೂ ಹಳೆಯ ಒಡಂಬಡಿಕೆಗೆ ಸಂಬಂಧಿಸಿದ ಸಂಕೇತಗಳ ಜೊತೆಯಲ್ಲಿ, ನಾವು ಸಂಕೇತಗಳು ಮೊದಲ ಶತಮಾನದ ಐತಿಹಾಸಿಕ ಹಿನ್ನಲೆಗೆ ಸಂಬಂಧಿಸಿವೆ ಎಂಬುದನ್ನು ಪರಿಗಣಿಸತಕ್ಕದ್ದು. ಪ್ರಕಟನೆ ಪುಸ್ತಕವನ್ನು ಅಧ್ಯಯನ ಮಾಡುವದಕ್ಕಾಗಿ ದೋಷರಹಿತ (ಪಕ್ಕಾ) ಐತಿಹಾಸಿಕ ಹಿನ್ನಲೆಯನ್ನು ಹೊಂದಿರುವದರಲ್ಲಿ ಆಸ್ಯ ಸೀಮೆಯ ಏಳು ಸಭೆಗಳಿದ್ದ ಪಟ್ಟಣಗಳ ಗುಣಸ್ವಭಾವಗಳ ಕುರಿತ ತಿಳುವಳಿಕೆಯನ್ನು ಹೊಂದಿರುವದು, ಸಭೆಯೊಳಗೆ ನುಸುಳುತ್ತಿದ್ದ ಸಿದ್ಧಾಂತಿಕ ತಪ್ಪುಗಳನ್ನು ಅರ್ಥಮಾಡಿಕೊಂಡಿರುವದು, ಮತ್ತು ಪಾರ್ಥ್ಯದಂತಹ ರೋಮನ್ ಸಾಮ್ರಾಜ್ಯದ ಭಾಗವಾಗಿರದೆ ಇದ್ದಂಥ ದೇಶಗಳ ಇಂಥಿಷ್ಟು ಪರಿಚಯವನ್ನು ಹೊಂದಿರುವದು ಸೇರಿರುತ್ತವೆ. ಈ ಹಿನ್ನಲೆಗಳ ಕುರಿತಾಗಿ ವಾಕ್ಯಕ್ಕೆ ಸಂಬಂಧಿಸಿದ ವ್ಯಾಖ್ಯೆಗಳಲ್ಲಿ ಚರ್ಚಿಸಲಾಗುವದು. ಪ್ರಾಥಮಿಕವಾಗಿ ಪ್ರಾಮುಖ್ಯವಾದದ್ದೆಂದರೆ ರೋಮನ್ ಸಾಮ್ರಾಜ್ಯದ ಹಿನ್ನಲೆಯ ಮತ್ತು ಅದು ಕ್ರೈಸ್ತತ್ವದೊಂದಿಗೆ ಹೇಗೆ ಸಂಬಂಧ ಹೊಂದಿದೆ ಎಂಬುದರ ಮಾಹಿತಿಯೇ ಆಗಿದೆ. ರೋಮನ್ ಸಾಮ್ರಾಜ್ಯದ ಕುರಿತಾದ ಈ ಕೆಳಗಿನ ಸಮೀಕ್ಷೆಯು ಸಹಾಯಕವಾಗಬಹುದು.

*ಆದಿ ಇತಿಹಾಸ.* ದಂತಕಥೆಯ ಪ್ರಕಾರ, Romulus ಮತ್ತು Remus ಎಂಬವರು ಕ್ರಿ.ಪೂ. 753ರಲ್ಲಿ ರೋಮ್ ನಗರವನ್ನು (ರೋಮಾಪುರ) ಸ್ಥಾಪನೆ ಮಾಡಿದರು. ಈ ಪಟ್ಟಣವು ಏಳು

ಬೆಟ್ಟಗಳ ಮೇಲೆ ಕಟ್ಟಲ್ಪಟ್ಟಿತ್ತು (ನೋಡಿರಿ 17:9). ಕ್ರಿ.ಪೂ. 509ರಲ್ಲಿ ರೋಮನ್ನರು ದಬ್ಬಾಳಿಕೆ ಮಾಡುತ್ತಿದ್ದ ರಾಜನನ್ನು ಓಡಿಸಿ ಬಿಟ್ಟು ಒಂದು ಗಣರಾಜ್ಯವನ್ನು ಸ್ಥಾಪಿಸಿದರು.

*Julius Caesar (49-44 ಕ್ರಿ.ಪೂ.).* Julius Caesarನು ಒಬ್ಬ ರಾಜಕಾರಣಿಯಾಗಿ ಆರಂಭಿಸಿದನು, ಆದರೆ ಆತನು ಸೇನಾ ನಿಪುಣನಾಗಿ ಮಾರ್ಪಟ್ಟನು. ಕ್ರಿ.ಪೂ. 49ರಲ್ಲಿ, ರೋಮನ್ ರಾಷ್ಟ್ರೀಯ ಪರಿಷತ್ತನ್ನು ಮಿಲಿಟರಿ ಶಕ್ತಿಯನ್ನು ಬಳಸಿ ಅಧೀನಕ್ಕೆ ತೆಗೆದುಕೊಂಡು ತನ್ನನ್ನು ಸರ್ವಾಧಿಕಾರಿ ಎಂದು ಘೋಷಿಸಿಕೊಂಡನು, ಆ ಮೂಲಕ ಜ್ಯೂಲಿಯೋ-ಕ್ಲೌದ್ಯ ಮನೆತನವನ್ನು ಸ್ಥಾಪನೆ ಮಾಡಿದನು. Juliusನು ಪ್ರಥಮ ಚಕ್ರವರ್ತಿಯಾಗಿದ್ದನೋ ಇಲ್ಲವೋ ಎಂಬ ವಿಷಯದಲ್ಲಿ ಪ್ರಶ್ನೆಯು ಇರುತ್ತದೆ. Summers ಹೀಗೆ ಹೇಳುತ್ತಾನೆ, "ಜನಪ್ರಿಯವಾಗಿರುವ ಗ್ರಹಿಕೆಯ ಪ್ರಕಾರ Julius Caesarನು ಪ್ರಥಮ ಚಕ್ರವರ್ತಿ; ಕಟ್ಟುನಿಟ್ಟಿನ ಸಂವಿಧಾನತ್ಮಕ ಕಾನೂನಿನಲ್ಲಿ ನೋಡುವದಾದರೆ, ಒಂದು ಸ್ಥಾಪಿತಗೊಂಡ ರೂಪದಲ್ಲಿನ ಸರ್ಕಾರವಿದ್ದ ಸಾಮ್ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದವನೆಂದರೆ Augustus."[55] Henry Swete ಹೀಗೆ ಹೇಳುವದೇನೆಂದರೆ Julius Caesar "'praenomen Imperatoris' ಎಂದು ಹೇಳಿಕೊಂಡನಾದರೂ" ಆತನು "ಎರಡನೆಯ ಅರ್ಥದಲ್ಲಿ ಒಬ್ಬ ಸಾರ್ವಭೌಮನೆಂಬುದಕ್ಕಿಂತಲೂ ಅಧಿಕವಾಗಿ ಒಬ್ಬ ನಿರಂಕುಶ ಅಧಿಕಾರಿಯೇ ಆಗಿದ್ದನು."[56] ರೋಮನ್ ಸಾಮ್ರಾಜ್ಯವನ್ನು ಆರಂಭಿಸಿದವನು ಈತನೇ ಎಂದು ಇವನಿಗೆ ಶ್ರೇಯಸ್ಸು ಕೊಡಲ್ಪಟ್ಟಿರುತ್ತದೆ. ಅಂತಿಮವಾಗಿ, "Caesar" (ಕೈಸರ) ಎಂಬುದು ರೋಮನ್ ಚಕ್ರವರ್ತಿಗೆ ಬಳಸುವ ಒಂದು ಸಾಮಾನ್ಯವಾದ ಬಿರುದು ಆಗಿ ಮಾರ್ಪಟ್ಟಿತು.

Julius Caesarನನ್ನು ಒಬ್ಬ ದೇವಾಂಶಸಂಭೂತನೆಂದು ಗುರುತಿಸಲಾಗಿತ್ತು, ಮತ್ತು ಆತನಿಗೆ ಸಮರ್ಪಿತವಾಗಿರುವ ದೇವಾಲಯಗಳಿದ್ದವು. ಆತನು ಕಿರೀಟವನ್ನು ನಿರಾಕರಿಸಿದನು, ಆದರೆ ಆತನು ಮುಂದೊಂದು ದಿನ ತನ್ನನ್ನು ಅರಸನನ್ನಾಗಿ ಮಾಡಿಕೊಳ್ಳುವನೆಂದು ಅನೇಕರು ಆತಂಕಗೊಂಡಿದ್ದರು. ಕ್ರಿ.ಪೂ. 44ರ ಮಾರ್ಚ್ 15ರಂದು ಆತನು Brutus, Cassius, ಮತ್ತು ಇತರ ಸಂಚುಗಾರರಿಂದ ಹತ್ಯೆಗೈಯಲ್ಪಟ್ಟನು.

*Augustus* (*Octavian*) *Caesar (ಕ್ರಿ.ಪೂ. 27-ಕ್ರಿ.ಶ. 14).* Octavianನು Julius Caesarನ ಸೋದರಳಿಯಯಾಗಿದ್ದನು, ಆತನೇ ಇವನನ್ನು ದತ್ತು ಪಡೆದುಕೊಂಡು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದ್ದನು. Julius Caesarನು ಮರಣಿಸಿದಾಗ, ಸಾಮ್ರಾಜ್ಯವು ಆಂತರೀಕ ಯುದ್ಧದಲ್ಲಿ ಮುಳುಗಿ ಹೋಯಿತು. ಅನೇಕ ಕದನಗಳು ನಡೆದ ಬಳಿಕ, Octavianನು ರೋಮ್ ಸಾಮ್ರಾಜ್ಯದ ಚಕ್ರವರ್ತಿಯಾದನು. ಕ್ರಿ.ಪೂ. 27ರಲ್ಲಿ, ಆತನು ರೋಮಿನ ಗಣರಾಜ್ಯದ ಸರ್ಕಾರವನ್ನು ಮರುಸ್ಥಾಪನೆ ಮಾಡುವದಾಗಿ ಘೋಷಣೆ ಮಾಡಿದನು, ಮತ್ತು ರಾಷ್ಟ್ರೀಯ ಪರಿಷತ್ತು ಆತನಿಗೆ Augustus, "ಉನ್ನತ್ತಕ್ಕೇರಿಸಲ್ಪಟ್ಟವನು" ಎಂಬ ಬಿರುದು ನೀಡಿ ಸನ್ಮಾನಿಸಿತು. ಆತನು ದೇಶದ ನಿಜವಾದ ಮುಖ್ಯಸ್ಥನಾದನು, ಪರಿಷತ್ತನ್ನು ಸಲಹಾ ಸಮಿತಿಯಾಗಿ ಇಟ್ಟುಕೊಂಡಿದ್ದನು.

ರೋಮನ್ ಸಾಮ್ರಾಜ್ಯವು ತನಗೆ ಅರಿವಿಲ್ಲದೆಯೇ "ಕಾಲವು ಪರಿಪೂರ್ಣಗೊಳ್ಳುವದಕ್ಕೆ": (ಗಲಾತ್ಯ 4:4) ಕೊಡುಗೆಯನ್ನು ಕೊಡುವದರ ಮೂಲಕ Augustusನ ಆಳ್ವಿಕೆಯು ಕ್ರೈಸ್ತತ್ವಕ್ಕಾಗಿ ದಾರಿಯನ್ನು ಸಿದ್ಧಗೊಳಿಸಿತು. ಈ ಕೆಲವು ಸಿದ್ಧತೆಗಳಲ್ಲಿ *Pax Romana* (ರೋಮನ್ ಸಮಾಧಾನ), ಗ್ರೀಕ್ ಭಾಷೆಯ ಹರಡುವಿಕೆ (ಹೊಸ ಹೊಡಂಬಡಿಕೆಯು Koineಯಲ್ಲಿ, ಅಂದರೆ ಸಾಮಾನ್ಯ ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿತು), ಮತ್ತು ಸಾಮ್ರಾಜ್ಯದ-ವ್ಯಾಪ್ತಿಗೆಲ್ಲಾ ಸಾಗಾಣೆ ಹಾಗೂ ಸಂಪರ್ಕವನ್ನು ಕಲ್ಪಿಸುವದಕ್ಕೆ

ಅನುಕೂಲವಾಗುವಂಥಹ ಬೃಹತ್ ರಸ್ತೆಗಳ ಸಂಪರ್ಕಗಳನ್ನು ನಿರ್ಮಿಸಿದ್ದು ಸೇರಿರುತ್ತವೆ. ಯೇಸುವು ಜನಿಸಿದ ಸಮಯದಲ್ಲಿ Augustusನು ಆಳ್ವಿಕೆ ಮಾಡುತ್ತಿದ್ದನು (ಲೂಕ 2:1).

*Tiberius Caesar (ಕ್ರಿ.ಶ. 14-37).* Tiberiusನು Augustusನ ದತ್ತುಪುತ್ರ ಮತ್ತು ಅಳಿಯ ಆಗಿದ್ದನು. Augustusನು ಮರಣಿಸಿದಾಗ, Tiberiusನು ಚಕ್ರವರ್ತಿಯಾದನು, ಆತನು ಯೇಸುವಿನ ವೈಯಕ್ತಿಕ ಸೇವೆ ಹಾಗೂ ಮರಣದ ಸಮಯದಲ್ಲಿ ಆಳ್ವಿಕೆಯಲ್ಲಿದ್ದನು (ಲೂಕ 3:1). ಸಭೆಯು ಸ್ಥಾಪಿಸಲ್ಪಟ್ಟ ವೇಳೆಯಲ್ಲಿಯೂ ಆತನು ಇನ್ನೂ ಅಧಿಕಾರದಲ್ಲಿದ್ದನು.

*Gaius Caligula (ಕ್ರಿ.ಶ. 37-41).* Tiberiusನ ಸೋದರಳಿಯನಾಗಿದ್ದ Caligulaನು ಮುಂದಿನ ಚಕ್ರವರ್ತಿಯಾದನು. ಒಂದು ಘೋರವಾದ ವ್ಯಾಧಿಯ ಫಲಿತವಾಗಿ, ಆತನು ಮಾನಸಿಕ ಸಮತೋಲನವನ್ನು ಕಳೆದುಕೊಂಡವನಾದನು. ಅಂದಿನಿಂದ, ಆತನು "ಹುಚ್ಚ ಚಕ್ರವರ್ತಿ" ಎಂದು ಪರಿಚಿತಗೊಂಡನು. ಆತನು ಕ್ರೂರ ನಡವಳಿಕೆಗಳನ್ನು ತನ್ನ ಸುತ್ತಲಿರುವವರ ಮೇಲೆ ತೋರಿಸಲಾರಂಭಿಸಿದಾಗ, ಆತನ ಸ್ವಂತ ಅಧಿಕಾರಿಗಳೇ ಆತನನ್ನು ಕೊಲೆ ಮಾಡಿದರು. ಆತನು ಕುರಿತು ಹೊಸ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ.

*Claudius Caesar (ಕ್ರಿ.ಶ. 41-54).* Claudiusನು Tiberiusನ ಸೋದರಳಿಯ ಮತ್ತು Caligulaನ ಸೋದರಮಾವನಾಗಿದ್ದನು. Caligulaನು ಕೊಲೆಗೈಯಲ್ಪಟ್ಟ ಬಳಿಕ, Claudiusನನ್ನು ಅರಮನೆಯ ಕಾವಲುಗಾರರು ಚಕ್ರವರ್ತಿ ಎಂದು ಘೋಷಿಸಿದರು. Claudiusನ ಆಳ್ವಿಕೆಯ ವೇಳೆಯಲ್ಲಿ, ಐಗುಪ್ತ್ಯ, ಉತ್ತರ ಆಫ್ರಿಕಾ, ಸಿಸಿಲಿ, ಸ್ಪೇನ್, ಕುಪ್ರ, ಬ್ರಿಟನ್, ಗ್ರೀಸ್, ಬಾಲ್ಕನ್ ದೇಶಗಳು ಹಾಗೂ ಬೇರೆ ಕಡೆಗಳಿಂದ ಉತ್ಪಾದನೆಗಳು ಹರಿದು ಬರುವ ಮೂಲಕ, ರೋಮ್ ವಿಶ್ವದ ವಾಣಿಜ್ಯ ಕೇಂದ್ರವಾಗಿ ಮಾರ್ಪಟ್ಟಿತು. Claudiusನ (ಕ್ಲೌದ್ಯ) ಕುರಿತು ಹೊಸ ಒಡಂಬಡಿಕೆಯಲ್ಲಿ ಎರಡು ಸಾರಿ ಪ್ರಸ್ತಾಪಿಸಲ್ಪಟ್ಟಿರುತ್ತಾನೆ (ಅಪೊಸ್ತಲರ ಕೃತ್ಯಗಳು 11:28; 18:2). ಆತನು ಯೆಹೂದ್ಯರನ್ನು ರೋಮಾಪುರದಿಂದ ಹೊರಗೆ ಓಡಿಸಿದ ವೇಳೆ (ಅಪೊಸ್ತಲರ ಕೃತ್ಯಗಳು 18:2), ಆತನು ಬಹುಶಃ ಅವರೊಳಗೆ ಕ್ರೈಸ್ತರನ್ನು ಸೇರ್ಪಡೆಗೊಳಿಸಿದ್ದನು; ಹೇಗೂ, ಆತನು ಹಿಂಸೆಯನ್ನು ಪಡಿಸುವದಕ್ಕಾಗಿ ಕ್ರೈಸ್ತರನ್ನು ಮಾತ್ರವೇ ಗುರಿಯಾಗಿಸಿಕೊಳ್ಳಲಿಲ್ಲ. ಆತನಿಗೆ ಆತನ ನಾಲ್ಕನೆಯ ಹೆಂಡತಿಯು (ಮತ್ತು ಸೋದರಿಯ ಮಗಳು) ವಿಷವನ್ನಿಟ್ಟು ಕೊಂದಳು, ಸಾಮ್ರಾಜ್ಯವು ತನ್ನ ಮಗನಾದ Neroಗೆ *ಸಿಕ್ಕಬೇಕೆಂಬುದು ಆಕೆಯ ಬಯಕೆಯಾಗಿತ್ತು*.

*Nero (ಕ್ರಿ.ಶ. 54-68).* Neroನು Caligulaನ ಸೋದರಳಿಯ ಮತ್ತು Claudiusನ ದತ್ತುಪುತ್ರನಾಗಿದ್ದನು. ಆತನ ಆಳ್ವಿಕೆಯ ಮೊದಲ ಭಾಗದ ವೇಳೆಯಲ್ಲಿ, ಆತನು ಉತ್ತಮ ವ್ಯಕ್ತಿಗಳಿಂದ ಸಲಹೆಗಳು ಕೊಡಲ್ಪಡುತ್ತಿದ್ದವು. ಪೌಲನು ಅಪೊಸ್ತಲರ ಕೃತ್ಯಗಳು ಯಾವ ಕೈಸರಿಗೆ ಮನವಿಯನ್ನು ಸಲ್ಲಿಸಿದನೋ ಆ ಕೈಸರನು ಈತನೇ ಆಗಿದ್ದನು (ಅಪೊಸ್ತಲರ ಕೃತ್ಯಗಳು 25:10-12). ಪೌಲನು ತನ್ನ ಮೊದಲನೆಯ ಸೆರೆವಾಸದಿಂದ ಬಿಡುಗಡೆಗೊಳಿಸಲ್ಪಡುವ ಹೊತ್ತಿನಲ್ಲಿ, ಸ್ವಾರ್ಥ ಹಾಗೂ ಸ್ವಹಿತವನ್ನು ನೋಡಿಕೊಳ್ಳುವ ವಿರೋಧಿಗಳು Neroನ ಮೇಲೆ ಹಿಡಿತವನ್ನು ಸಾಧಿಸಿಕೊಂಡರು-ಮತ್ತು ಆತನ ಆಳ್ವಿಕೆಯು ಶೀಘ್ರದಲ್ಲಿಯೇ ಕುಸಿದು ಹೋಯಿತು. ಕ್ರಿ.ಶ. 64ರಲ್ಲಿ, ರೋಮಾಪುರವನ್ನೆಲ್ಲಾ ಆವರಿಸಿಕೊಂಡ ಬೆಂಕಿಯನ್ನು ಆರಂಭಿಸಿದವನು ಈತನೇ ಎಂದು Neroನ ಮೇಲೆ ಆರೋಪವು ಮಾಡಲ್ಪಟ್ಟಾಗ, ಈತನು ಕ್ರೈಸ್ತರನ್ನು ಬಲಿಪಶುವನ್ನಾಗಿ ಮಾಡಿ ಬಿಟ್ಟನು. ಹೀಗೆ ರೋಮನ್ ಸರ್ಕಾರದ ಕೈಯಿಂದ ಕ್ರೈಸ್ತರಿಗೆ ಮೊದಲನೆಯ ನಿಜವಾದ ಹಿಂಸೆಯು ಆರಂಭಗೊಂಡಿತ್ತು. ಈ ಹಿಂಸೆಯು ಸಾಮ್ರಾಜ್ಯದುದ್ದಕ್ಕೂ ವ್ಯಾಪಿಸಲಿಲ್ಲ, ಆದರೆ ಇದು ಅನಂತರದಲ್ಲಿ ಸಂಭವಿಸಲಿಕ್ಕಿದ್ದ ಹಿಂಸೆಗೆ

ಒಂದು ಮುನ್ನುಡಿಯನ್ನು ಬರೆದಿತ್ತು.

ರೋಮನ್ನರಲ್ಲಿ ಬಹಳಷ್ಟು ಮಂದಿ Neroನಲ್ಲಿ ವಿಶ್ವಾಸವನ್ನು ಹೊಂದಿರಲಿಲ್ಲ. ಕ್ರಿ.ಶ. 68ರಲ್ಲಿ, ಸ್ಪೇನ್ ದೇಶದಲ್ಲಿದ್ದ ರೋಮನ್ ಸೈನ್ಯಗಳು ಬಂಡಾಯವೆದ್ದವು ಮತ್ತು ತಮ್ಮ ನಾಯಕನಾದ Galbaನನ್ನು ಚಕ್ರವರ್ತಿ ಎಂದು ಘೋಷಿಸಿಕೊಂಡವು. Nero ಪಲಾಯನಗೈದನು. ಆತನು ಬೆನ್ನತ್ತಲ್ಪಟ್ಟು ಸಿಕ್ಕಿ ಹಾಕಿಕೊಂಡಾಗ, ಅವನು ಆತ್ಮಹತ್ಯೆ ಮಾಡಿಕೊಂಡನು. ಹೀಗೆ ಆತನು Julio-Claudian ರಾಜಮನೆತನಕ್ಕೆ ಅಂತ್ಯವನ್ನು ತಂದಿದ್ದನು. ವಿಚಿತ್ರವೆಂಬಂತೆ, ಕೆಲವು ರೋಮನ್ನರ ಹೃದಯಗಳಲ್ಲಿ Nero ಒಂದು ವಿಶೇಷ ಸ್ಥಾನವನ್ನು ಉಳಿಸಿಕೊಂಡಿದ್ದನು. ಒಂದು ದಿನ Neroನು ಮರಳಿ ಬರುವನು ಎಂಬದಾಗಿ ವಾದಿಸುವಂತಹ "Nero redivivus myth" (ಮತ್ತೇ ಜೀವ ಪಡೆದ ನಿರೋ ಪುರಾಣ) ಎಂಬ ದಂತಕಥೆಯು ಹುಟ್ಟಿಕೊಂಡಿತು (17:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

*"ನಾಲ್ಕು ಚಕ್ರವರ್ತಿಗಳ ವರ್ಷ" (ಕ್ರಿ.ಶ. 68-69).* Neroನ ಮರಣದ ಬಳಿಕ ಒಂದಿಷ್ಟು ಕಾಲಾವಧಿಯ ತನಕ ಗೊಂದಲವು ಉಂಟಾಗಿತ್ತು. ಸ್ವಲ್ಪ ಕಾಲದಲ್ಲಿಯೇ ನಾಲ್ಕು ಚಕ್ರವರ್ತಿಗಳು ಆಳ್ವಿಕೆಯನ್ನು ಮಾಡಿದರು, ಅವರೊಬ್ಬೊಬ್ಬರಿಗೂ ರೋಮನ್ ಸೈನ್ಯದ ಒಂದೊಂದು ತುಕಡಿಯ ಬೆಂಬಲವಿತ್ತು. ಅನೇಕ ಬರಹಗಾರರು ಮೊದಲ ಮೂರು ಚಕ್ರವರ್ತಿಗಳನ್ನು "ಹಾಗೆಂದು ಹೇಳಿಕೊಂಡವರು" ಅಥವಾ "ನಟಿಸಿದವರು" ಮಾತ್ರವೇ ಎಂದು ಕರೆಯುತ್ತಾರೆ: Galba (ಜೂನ್ 68-ಜನವರಿ 69), Otho (ಜನೆವರಿ-ಮಾರ್ಚ್ 69), ಮತ್ತು Vitellius (ಎಪ್ರಿಲ್-ಡಿಸೆಂಬರ್ 69). ನಾಲ್ಕನೆಯವನು Vespasian, ಈತನನ್ನು ಕ್ರಿ.ಶ. 67ರಲ್ಲಿ ಯೆಹೂದ್ಯರ ಬಂಡಾಯವನ್ನು ಹತ್ತಿಕ್ಕುವದಕ್ಕೋಸ್ಕರ Neroನು ಪಿಲಿಷ್ಟಿಯಕ್ಕೆ ಕಳುಹಿಸಿ ಕೊಟ್ಟಿದ್ದನು. Vespasianನು ತನ್ನ ಮಗನಾದ Titusನಿಗೆ ರೋಮನ್ ಸೈನ್ಯದ ಜವಾಬ್ದಾರಿಯನ್ನು ವಹಿಸಿ ಬಿಟ್ಟು ತಾನು ರೋಮಾಪುರಕ್ಕೆ ಹಿಂದಿರುಗಿ ಬಂದಿದ್ದನು.

*Flavius Vespasian (ಕ್ರಿ.ಶ. 69-79).* Vespasianನು ಕ್ರಿ.ಶ. 69ರಲ್ಲಿ ರೋಮನ್ ಪರಿಷತ್ತಿನಿಂದ ಚಕ್ರವರ್ತಿಯೆಂದು ದೃಢೀಕರಿಸಲ್ಪಟ್ಟನು. ಆಂತರೀಕ ಯುದ್ಧವು ಪುನಃ ಸಂಭವಿಸುವದನ್ನು ತಡೆಗಟ್ಟುವದಕ್ಕಾಗಿ, ಆತನು ತನ್ನ ಮಗನಾದ Titusನ್ನು ತನ್ನ ಉತ್ತರಾಧಿಕಾರಿ ಎಂದು ನೇಮಕಗೊಳಿಸಿದನು, ಹೀಗೆ Flavian ರಾಜಮನೆತನವನ್ನು ಆರಂಭಗೊಳಿಸಿದ್ದನು.

*Titus (ಕ್ರಿ.ಶ. 79-81).* Titusನು ಕ್ರಿ.ಶ. 70ರಲ್ಲಿ ಯೆರೂಸಲೇಮನ್ನು ನಾಶಗೊಳಿಸಿದ ರೋಮನ್ನನು ಎಂದು ಚೆನ್ನಾಗಿ ಪರಿಚಿತನಿರುತ್ತಾನೆ. ರೋಮಾಪುರದಲ್ಲಿರುವ ಟೈಟಸ್‌ನ ಕಮಾನು ಈ ಘಟನೆಗೆ ಸ್ಮಾರಕವಾಗಿರುತ್ತದೆ. ಅಲ್ಲದೆ Titusನು ರೋಮಾಪುರದಲ್ಲಿರುವ ಪ್ರಸಿದ್ಧ ಬಯಲು ಚಂದ್ರಾಂಗಣವನ್ನು ನಿರ್ಮಾಣವನ್ನು ಪೂರ್ತಿಗೊಳಿಸಿದವನೆಂದು ಸಹ ಪರಿಚಿತನಾಗಿರುತ್ತಾನೆ, ಅದನ್ನು ಕಟ್ಟುವ ಕೆಲಸವು ಆತನ ತಂದೆಯಿಂದ ಆರಂಭಿಸಲ್ಪಟ್ಟಿತ್ತು. ಈತನ ಆಳ್ವಿಕೆಯಲ್ಲಿ ಸಂಭವಸಿದ ಒಂದು ಗಮನಾರ್ಹವಾದ ಪ್ರಾಕೃತಿಕ ವಿಕೋಪವೆಂದರೆ Vesuvius ಜ್ವಾಲಾಮುಖಿ ಪರ್ವತವು ಸ್ಫೋಟಗೊಂಡಿದ್ದು ಆಗಿದೆ, ಅದು Pompeii ಹಾಗೂ ಇತರೆ ಹತ್ತಿರದ ಪಟ್ಟಣಗಳನ್ನೆಲ್ಲಾ ನಾಶಗೊಳಿಸಿತ್ತು. Titusನು ಕ್ರಿ.ಶ. 81ರಲ್ಲಿ ಜ್ವರದಿಂದಾಗಿ ಮರಣ ಹೊಂದಿದನು. ಆತನಿಗೆ ಅವರ ಸಹೋದರನಾದ Domitianನು ವಿಷ ಹಾಕಿದನೆಂದು ಕೆಲವರು ಸಂಶಯಿಸುತ್ತಾರೆ.

*Domitian (ಕ್ರಿ.ಶ. 81-96).* Titusನಿಗೆ ಉತ್ತರಾಧಿಕಾರಿಯಾಗಿ ಆತನ ತಮ್ಮನಾದ Domitianನು ಬಂದನು.[57] Domitianನು ಅಳತೆ ಮೀರಿದ ಮಹತ್ವಾಕಾಂಕ್ಷೆಯನ್ನು ಹೊಂದಿದ್ದ

ಕಾರಣದಿಂದಾಗಿ ಆತನ ತಂದೆಯಾಗಲಿ ಅಥವಾ ಅಣ್ಣನಾಗಲಿ ಆತನು ಸರ್ಕಾರದಲ್ಲಿ ಸಕ್ರಿಯವಾದ ಪಾತ್ರವನ್ನು ಕೊಟ್ಟಿರಲಿಲ್ಲ. ಕೆಲವು ವಿಧಗಳಲ್ಲಿ, Domitianನು ಪರಿಣಾಮಕಾರಿ ಚಕ್ರವರ್ತಿಯಾಗಿದ್ದನು. ಆತನ ಆಳ್ವಿಕೆಯ ವೇಳೆಯಲ್ಲಿ, ರೋಮನ್ ಸಾಮ್ರಾಜ್ಯದ ಗಡಿರೇಖೆಗಳು ಬ್ರಿಟಿಷ್ ದ್ವೀಪಗಳಿಂದ ಆಫ್ರಿಕಾದ ಮರುಭೂಮಿಗಳ ವರೆಗೆ, ಅಟ್ಲಾಂಟಿಕ್ ಸಮುದ್ರದಿಂದ ಯೂಫ್ರೇಟೀಸ್ ನದಿಯ ತನಕವೂ ವಿಸ್ತರಿಸಿದ್ದವು.

Domitianನು ವೈರಾಗ್ಯವುಳ್ಳವನಾಗಿ ಚಕ್ರವರ್ತಿಯನ್ನು ಆರಾಧಿಸುವಿಕೆ ಸೇರಿದಂತೆ ಅನೇಕ ಪ್ರಾಚೀನ ಆಚಾರಗಳನ್ನು ಪುನಃ ಜಾರಿಗೆ ತಂದನು. ಚಕ್ರವರ್ತಿಯ ಆರಾಧನೆಯನ್ನು ಗಂಭೀರವಾಗಿ ಪರಿಗಣಿಸಿದ್ದ ಚಕ್ರವರ್ತಿಗಳು ವಿರಳವಾಗಿದ್ದರು, ಆದರೆ Domitianನು ಅದನ್ನು ಗಂಭೀರವಾಗಿ ತೆಗೆದುಕೊಂಡನು. ಆತನು ತನಗಾಗಿ “ಕರ್ತನು ಮತ್ತು ದೇವರು” ಎಂಬಬ ಬಿರುದನ್ನು ತೆಗೆದುಕೊಂಡನು ಮತ್ತು ಸಾಮ್ರಾಜ್ಯದಲ್ಲೆಲ್ಲಾ ತನ್ನ ಪ್ರತಿಮೆಗಳನ್ನು ನಿಲ್ಲಿಸಿದ್ದನು. ಆತನು ಅದಕ್ಕಾಗಿ ಅಧಿಕಾರವುಳ್ಳ ಸಮಿತಿಯನ್ನು ನೇಮಕಗೊಳಿಸಿದ್ದನು, ಅವರ ಕೆಲಸವು ಪ್ರತಿ ಪಟ್ಟಣದಲ್ಲಿ ಚಕ್ರವರ್ತಿಯ ಪ್ರತಿಮೆಗೆ ಗೌರವವನ್ನು ಸಲ್ಲಿಸುವಂತೆ ಜನರನ್ನು ಪ್ರತಿಯೊಬ್ಬರನ್ನು ಒತ್ತಾಯಿಸುವದೇ ಆಗಿತ್ತು. *Praefectus urbi ಎಂದು* ಪರಿಚಿತವಾಗಿದ್ದ ಅಧಿಕೃತ ಸಮಿತಿಯೊಂದಕ್ಕೆ ಪ್ರತಿ ಪಟ್ಟಣದಲ್ಲಿ ಆರಾಧನೆಯನ್ನು ಜಾರಿಗೆ ತರುವ ಜವಾಬ್ದಾರಿಯು ಇತ್ತು. ಪ್ರತಿಯೊಂದು ಪಟ್ಟಣದಲ್ಲಿನ ಉಪಅಧಿಕಾರಿಗಳು ಒಟ್ಟಾಗಿ ಸೇರಿ ಒಂದು ಶಕ್ತಿಶಾಲಿ *concilia* ಆಗಿತ್ತು, ಆ ಸಮಿತಿಗೆ ಚಕ್ರವರ್ತಿಯ ಆರಾಧನೆಗಾಗಿ ಆತನ ಪ್ರತಿಮೆಗಳನ್ನು ಮತ್ತು ಯಜ್ಞವೇದಿಗಳನ್ನು ನಿರ್ಮಿಸುವ, ಹಾಗೂ ಅವಶ್ಯಕವಾದ ಪ್ರತಿಯೊಂದು ದಾರಿಯಲ್ಲಿ ರಾಷ್ಟ್ರೀಯ ಧರ್ಮವನ್ನು ಪ್ರಚಾರ ಮಾಡುವ ಜವಾಬ್ದಾರಿಯನ್ನು ವಹಿಸಲಾಗಿತ್ತು. McCord ಹೀಗೆ ಬರೆಯುತ್ತಾನೆ:

> ವರ್ಷಕ್ಕೆ ಒಂದು ಸಾರಿ ಸಾಮ್ರಾಜ್ಯದಲ್ಲಿರುವ ಪ್ರತಿಯೊಬ್ಬರೂ Domitianನ ನ್ಯಾಯಾಧೀಶರ ಮುಂದೆ ಕಾಣಿಸಿಕೊಂಡು *kaisar kurios*, ಕೈಸರನು ಕರ್ತನು ಎಂದು ಹೇಳಬೇಕಿತ್ತು, ಮತ್ತು ಒಂದು ಸಾಕ್ಷಿಯಾಗಿ ಕೈಸರ ದೇವತ್ವಕ್ಕಾಗಿ ಒಂದು ಚಿಟಿಕೆಯಷ್ಟು ಧೂಪವನ್ನು ಉರಿಸಬೇಕಾಗಿರುತ್ತಿತ್ತು. ಈ ನಿಷ್ಠಾವಂತಿಕೆಯ ಪರೀಕ್ಷೆಯ ಬಳಿಕ, ಒಂದು ವರ್ಷಕ್ಕೆ ಉರ್ಜಿತವಾಗಿರುತ್ತಿದ್ದ ಒಂದು ಲಿಖಿತ ಪ್ರಮಾಣಪತ್ರವನ್ನು ಕೊಡಲಾಗುತ್ತಿತ್ತು.[58]

ಯಜ್ಞವೇದಿಯ ಮೇಲೆ ಒಂದು ಚಿಟಿಕೆಯಷ್ಟು ಧೂಪವನ್ನು ಹಾಕುವ ಕ್ರಿಯೆಯು ಒಬ್ಬ ವ್ಯಕ್ತಿಯು ಕ್ರೈಸ್ತನೋ ಅಥವಾ ಅಲ್ಲವೋ ಎಂದು ನಿರ್ಧರಿಸುವ ಒಂದು ಪರೀಕ್ಷೆಯಾಗಿ ಮಾರ್ಪಟ್ಟಿತು; ನಂಬಿಗಸ್ತರಾದ ಕ್ರೈಸ್ತರು ಅದನ್ನು ಮಾಡುತ್ತಿರಲಿಲ್ಲ. ಈ ಪರೀಕ್ಷೆಯನ್ನು ಉಪಾಯವನ್ನು ಮಾಡಿದವನು Domitianನೇ ಎಂದು ಹೇಳಲಾಗುತ್ತದೆ. Domitianನ ದೃಷ್ಟಿಯಲ್ಲಿ, ಚಕ್ರವರ್ತಿಯ ಆರಾಧನೆಯು ಅರಸನಿಗೆ ಮತ್ತು ಆ ಮೂಲಕ ಸಾಮ್ರಾಜ್ಯಕ್ಕೆ ನಿಷ್ಠೆಯನ್ನು ತೋರ್ಪಡಿಸುವದಕ್ಕೆ ಸಂಬಂಧಿಸಿದ್ದಾಗಿತ್ತು. ಆತನನ್ನು ದೇವರೆಂದು ಒಪ್ಪಿಕೊಳ್ಳಲು ನಿರಾಕರಿಸುವದೆಂದರೆ ದೇಶದ್ರೋಹಕ್ಕಿಂತ ಕಡಿಮೆಯೇನೂ ಆಗಿರಲಿಲ್ಲ-ಮತ್ತು ಈ ಕಾರಣದಿಂದ ಮರಣದಂಡನೆಗೆ ಯೋಗ್ಯವಾದದ್ದಾಗಿತ್ತು.

ಕ್ರೈಸ್ತರು Domitianನನ್ನು ಆರಾಧಿಸುವದಕ್ಕೆ ನಿರಾಕರಿಸಿದಾಗ (ನೋಡಿರಿ ಅಪೊಸ್ತಲರ ಕೃತ್ಯಗಳು 4:12; 1 ಕೊರಿಂಥ 8:5, 6; ಎಫೆಸ 4:4, 5), ಆತನು ಸಭೆಯನ್ನು ವ್ಯವಸ್ಥಿತವಾಗಿ ಹಿಂಸಿಸುವದಕ್ಕೆ ಆರಂಭಿಸಿದನು. ಸಾಮಾನ್ಯವಾಗಿರುತ್ತಿದ್ದ ಶಿಕ್ಷೆಗಳಲ್ಲಿ ಚಿತ್ರಹಿಂಸೆ ನೀಡುವದು, ಮರಣ (ಸಾಮಾನ್ಯವಾಗಿ ಶಿರಚ್ಛೇದಗೊಳಿಸುವ ಮೂಲಕ), ಗಡಿಪಾರು, ಮತ್ತು ಆಸ್ತಿಪಾಸ್ತಿಗಳನ್ನು ವಶಕ್ಕೆ ತೆಗೆದುಕೊಳ್ಳುವದು ಸೇರಿದ್ದವು. ಅಲ್ಲದೆ ಇನ್ನು ಮೇಲೆ ಹಕ್ಕುಗಳು

ಹಾಗೂ ಸವಲತ್ತುಗಳುಳ್ಳ ಒಬ್ಬ ನಾಗರೀಕನೆಂದು ಪರಿಗಣಿಸಿದೆ ಇರುವಂಥ ಅತ್ಯಂಥ ಪರಿಣಾಮಕಾರಿ ಶಿಕ್ಷೆಯೂ ಅದರಲ್ಲಿ ಸೇರಿತ್ತು.

ಆತನ ಆಳ್ವಿಕೆಯ ಅಂತ್ಯದ ಹತ್ತಿರದಲ್ಲಿ, ಆತನು ಸಂಶಯಗ್ರಸ್ತನಾದನು. ಆತನ ಸುತ್ತಲಿನವರಲ್ಲಿ ಯಾರೊಬ್ಬರೂ ಸುರಕ್ಷಿತರಾಗಿರಲಿಲ್ಲ ಯಾಕೆಂದರೆ ಆತನು ಅವರ ವಿರುದ್ಧವಾಗಿಯೇ ತಿರುಗಿ ಬಿದ್ದನು. ಅದರ ಫಲಿತವಾಗಿ, ಆತನ ಹೆಂಡತಿ ಮತ್ತು ಇಬ್ಬರು ಕಾವಲುಗಾರರು ಆತನ ಹತ್ಯೆಯನ್ನು ಮಾಡುವ ಸಂಚು ರೂಪಿಸಿದರು; ಕ್ರಿ.ಶ. ೯೬ರ ಸೆಪ್ಟೆಂಬರ್ ತಿಂಗಳಿನಲ್ಲಿ, ಆತನು ಒಬ್ಬ ಕೊಲೆಗಾರನ ಕತ್ತಿಯಿಂದ ತಿವಿಯಲ್ಪಟ್ಟನು. ಆತನ ಸ್ಮರಣೆಯು ರಾಷ್ಟ್ರೀಯ ಪರಿಷತ್ತಿನಿಂದ ಶಪಿಸಲ್ಪಟ್ಟಿತು, ಮತ್ತು ಸಾರ್ವಜನಿಕ ಸ್ಮಾರಕಗಳಿಂದ ಆತನ ಹೆಸರನ್ನು ಅಳಿಸಿ ಹಾಕಲಾಯಿತು. Domitianನ ಮರಣವು Flavian ರಾಜಮನೆತನಕ್ಕೆ ಅಂತ್ಯವನ್ನು ತಂದಿತ್ತು.

*ನಂತರದ ಇತಿಹಾಸ ಮತ್ತು ಸಾಮ್ರಾಜ್ಯದ ಪತನ.* Domitianನನ ನಂತರದಲ್ಲಿ "ಐದು ಉತ್ತಮರಾದ ಚಕ್ರವರ್ತಿಗಳು" ಆಳ್ವಿಕೆಯನ್ನು ಮಾಡಿದರು: Nerva, Trajan, Hadrian, Antonius Pius, ಮತ್ತು Marcus Aurelius. ಅವರ ಆಳ್ವಿಕೆಗಳ ವೇಳೆಯಲ್ಲಿ, ಸಾಮ್ರಾಜ್ಯದಲ್ಲಿ ಸಮೃದ್ಧಿಯು ತನ್ನ ಉಚ್ಚಘಟ್ಟವನ್ನು ತಲುಪಿತ್ತು, ಆದರೆ ಅವರ ಆಳ್ವಿಕೆಗಳು ರೋಮ್ ಸಾಮ್ರಾಜ್ಯದ "ಅಂತ್ಯದ ಆರಂಭ" ಎಂದು ಸಹ ಕರೆಯಲ್ಪಟ್ಟವು:

> Hadrianನ ಆಳ್ವಿಕೆಯಡಿಯಲ್ಲಿ ಒಂದು ಹಿಂದಕ್ಕೆ ಸರಿಯುವ ರಾಜನೀತಿಯು ಆರಂಭಗೊಂಡಿತು; ಅಂದಿನಿಂದ ರೋಮ್ ಸಾಮ್ರಾಜ್ಯವು ಆಕ್ರಮಣಶೀಲವಲ್ಲ ಆದರೆ ಸದಾ ದಾಳಿಗಾಗಿ ತುಡಿಯುತ್ತಿದ್ದ ಬಾರ್ಬೆರಿಯನ್ನರ ವಿರುದ್ಧ ತಮ್ಮನ್ನು ಯಾವಾಗಲೂ ಕಾಪಾಡಿಕೊಳ್ಳುವದಕ್ಕೆ ನಿರ್ಧರಿಸಿತ್ತು. ಸಂದೇಹಾಸ್ಪದವಿಲ್ಲದೆ Antonius Pius ಮತ್ತು Marcus Aureliusರ ಆಳ್ವಿಕೆಯ ವೇಳೆ ದುರ್ಬಲತೆ ಹಾಗೂ ಕ್ಷೀಣಿಸುವಿಕೆ ಪ್ರಾರಂಭಗೊಂಡಿತು. ರೋಮ[ನ್] ಸಾಮ್ರಾಜ್ಯಶಾಹಿ ಸರ್ಕಾರ ಅತ್ಯಂಥ ಉತ್ತಮವಾದ ಹಾಗೂ ಸಂತೋಷದ ಗಳಿಗೆಯಾಗಿದ್ದ ಈ ಕಾಲವು, ಅದರ ಅಂತ್ಯದ ಆರಂಭದ ಗಳಿಗೆಯಾಗಿತ್ತು.[59]

Marcus Aureliusನ ಆಳ್ವಿಕೆಯು *Pax Romana* (ರೋಮನ್ ಸಮಾಧಾನ) ವನ್ನು ಅಂತ್ಯಗೊಳಿಸಿತ್ತು, ಮತ್ತು ಅದರ ಬಳಿಕ ನೂರು ವರ್ಷಗಳ ಕಾಲ ಯುದ್ಧಗಳು ನಡೆಯುತ್ತಿದ್ದವು. ಸೈನ್ಯವು ತನ್ನಿಷ್ಟದಂತೆ ಚಕ್ರವರ್ತಿಗಳನ್ನು ಸಿಂಹಾಸನದ ಮೇಲೆ ಕೂಡ್ರಿಸುತ್ತಿತ್ತು ಮತ್ತು ಇಳಿಸುತ್ತಿತ್ತು. 313ರಲ್ಲಿ, Constantineನು ಮಿಲಾನ್ ಒಪ್ಪಂದವನ್ನು ಘೋಷಣೆ ಮಾಡಿದನು, ಅದು ಕ್ರೈಸ್ತ ಧರ್ಮವನ್ನು ಒಂದು ಕಾನೂನುಬದ್ಧ ಧರ್ಮವನ್ನಾಗಿ ಮಾಡಿತ್ತು. Constantineನ ಮರಣದ ಬಳಿಕ, ಮತ್ತೊಂದು ಅಸ್ತವ್ಯಸ್ತವಾದ ಕಾಲವು ಬಂದಿತ್ತು. ರೋಮ್ ಮತ್ತು ಪಾಶ್ಚಾತ್ಯ ಸಾಮ್ರಾಜ್ಯವು ಕೊನೆಗೂ 476ರಲ್ಲಿ ಪತನಗೊಂಡಿತ್ತು, ಆದಾಗ್ಯೂ ಮೂಡಣ ಸಾಮ್ರಾಜ್ಯವು-ಬೈಜಂಟೈನ್ ಸಾಮ್ರಾಜ್ಯ-ಇನ್ನೊಂದು ಸಹಸ್ರ ವರ್ಷಕಾಲ ಬದುಕುಳಿಯಿತು.

ರೋಮನ್ ಸಾಮ್ರಾಜ್ಯವು "ಇದುವರೆಗೂ ಸಾಧಿಸಲ್ಪಟ್ಟಿರುವ ಅತ್ಯಂಥ ಮಹೋನ್ನತವಾದ ರಾಜಕೀಯ ಸಾಧನೆ" ಎಂದು ಕರೆಯಲ್ಪಟ್ಟಿದೆ. Angus ಹೀಗೆ ಬರೆದನು, "ಮಹಾ ಅಲೆಕ್ಸಾಂಡರ್, ಚಾರ್ಲ್ ಮ್ಯಾಗ್ನೇ ಮತ್ತು ನೆಪೋಲಿಯನ್ನರು ಗಳಿಸಿದ ವಿಜಯಗಳು Julius ಮತ್ತು ಆತನ ಉತ್ತರಾಧಿಕಾರಿ Augustus ಪೋಷಿಸಿಕೊಂಡು ಹೋದ ದೀರ್ಘಕಾಲ ಬಾಳಿಕೆ ಬರುವ ರಚನೆಗೆ ಹೋಲಿಸಿದರೆ ಚಿಕ್ಕವುಗಳಾಗಿ ಕಾಣಿಸುತ್ತವೆ."[60] ರೋಮನ್ ಸಾಮ್ರಾಜ್ಯವು ದೇವರನ್ನು ಒಬ್ಬ ವೈರಿಯಾಗಿ ತೆಗೆದುಕೊಂಡು ಆತನ ಮೇಲೆ ಬೀಳದೆ

ಹೋಗಿದ್ದರೆ, ರೋಮನ್ ಸಾಮ್ರಾಜ್ಯವು ಇನ್ನು ಎಷ್ಟು ಕಾಲ ನಿಂತಿರುತ್ತೆಂಬುದು ಯಾರಿಗೆ ಗೊತ್ತು? ನಾವು ಪುಸ್ತಕವನ್ನು ಅಧ್ಯಯನ ಮಾಡುತ್ತಿರುವ ವೇಳೆ ಈ ಐತಿಹಾಸಿಕ ಹಿನ್ನಲೆಯನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ನೀವು ಕೆಲವು ಐತಿಹಾಸಿಕ ಸಂಕೇತಗಳನ್ನು ಮುಂದಾಗಿ ಯೋಚಿಸಿ ನೋಡಬೇಕೆಂದು ಬಯಸುವದಾದರೆ, Domitianನನ್ನು 13:1-10ರಲ್ಲಿನ ಮೃಗಕ್ಕೆ ಹೋಲಿಕೆ ಮಾಡಿರಿ. Claudiusನ ಆಳ್ವಿಕೆಯ ವೇಳೆಯಲ್ಲಿ ಉಂಟಾದ ವಾಣಿಜ್ಯ ಯಶಸ್ಸನ್ನು 18:11-13ರಲ್ಲಿನ ಪಟ್ಟಿಯೊಂದಿಗೆ ಹೋಲಿಕೆ ಮಾಡಿರಿ. ಚಕ್ರವರ್ತಿಗಳ ಇಡೀ ಪಟ್ಟಿಯನ್ನು 17:10, 11ರಲ್ಲಿರುವ ಗೂಢಲಿಪಿಯ ಪಕ್ಕದಲ್ಲಿಟ್ಟು ನೋಡಿರಿ.

*ರೋಮನ್ ಸಾಮ್ರಾಜ್ಯವು ಏಕೆ ಕ್ರೈಸ್ತರನ್ನು ಹಿಂಸೆ ಪಡಿಸಿತು.* ರಾಷ್ಟ್ರೀಯ ಧರ್ಮದೊಳಗಿದ್ದ ಮೂಲ ನೈತಿಕ ಅಂಶಗಳು ಹೊರಗೆ ಬಿದ್ದು ಹೋಗಿದ್ದವು, ಮತ್ತು ಅಧಿಕೃತ ಧರ್ಮವು ದೇಶದಲ್ಲಿನ ಒಗ್ಗಟ್ಟನ್ನು ಹೆಚ್ಚಿಸುವದಕ್ಕಾಗಿ ಒಂದು ರಾಜಕೀಯ ಹಾಗೂ ಮಿಲಿಟರಿ ಸಾಧನವಾಗಿತ್ತೇ, ಹೊರತು ವ್ಯಕ್ತಿಯ ರಕ್ಷಣೆಗೋಸ್ಕರ ಆಗಿರಲಿಲ್ಲ. ರೋಮನ್ನರಲ್ಲಿ ಅನೇಕರು ಏಕಕಾಲದಲ್ಲಿ ಹಲವಾರು ಧರ್ಮಗಳನ್ನು ಒಪ್ಪಿಕೊಂಡಿದ್ದರು. ರೋಮನ್ಯೇತರ ಧರ್ಮಗಳನ್ನು ಪರವಾನಿಗೆಯಿರುವ ಅಥವಾ ಪರವಾನಿಗೆಯಿಲ್ಲದ ಧರ್ಮಗಳೆಂದು ವರ್ಗೀಕರಿಸಲಾಗಿತ್ತು. ಪರವಾನಿಗೆಯಿಲ್ಲದ ಧರ್ಮಗಳ ಸದಸ್ಯರನ್ನು ಕಾನೂನಿನ ಪ್ರಕಾರ ಶಿಕ್ಷಿಸಬಹುದಾಗಿತ್ತು, ಆದರೆ ಈ ಧರ್ಮಗಳು ದೇಶದ ಶಾಂತಿಗೆ ಭಂಗ ತರುವದನ್ನಾಗಲಿ ಅಥವಾ ಸಮಾಜದ ನೈತಿಕತೆಗಳನ್ನು ಭ್ರಷ್ಟಪಡಿಸುವದನ್ನಾಗಲಿ ಮಾಡದೆ ಇರುವಷ್ಟು ಕಾಲ ಸಾಮಾನ್ಯವಾಗಿ ರೋಮನ್ ಸರ್ಕಾರವು ಸಹಿಷ್ಣುತೆಯುಳ್ಳದ್ದಾಗಿರುತ್ತಿತ್ತು. ಹಾಗಿದ್ದರೂ, ಪರವಾನಿಗೆಯಿಲ್ಲದ ಧರ್ಮಗಳ ವಿರುದ್ಧದ ಕಾನೂನುಗಳು ಅಗತ್ಯ ಬೀಳುವದಾದರೆ ಬಳಸಲ್ಪಡುವಂತಾಗಲು ಅವುಗಳನ್ನು ಶಾಸನ ಸಭೆಯ ಕಾಯಿದೆಗಳ ಪುಸ್ತಕದಲ್ಲಿ ಉಳಿಸಿಕೊಳ್ಳಲಾಯಿತು. ಕ್ರೈಸ್ತತ್ವವು ಒಂದು ಪರವಾನಿಗೆಯಿಲ್ಲದ ಧರ್ಮವಾಗಿತ್ತು. ಅದು ತನ್ನ ಇತಿಹಾಸದ ಆರಂಭಿಕ ಕಾಲಗಳಲ್ಲಿ ರೋಮನ್ ಸರ್ಕಾರದ ಗಮನವನ್ನು ಅಷ್ಟಾಗಿ ಸೆಳೆಯಲಿಲ್ಲ ಯಾಕೆಂದರೆ ಅದನ್ನು ಯೆಹೂದಿಮತದಿಂದ ಹೊರಹೊಮ್ಮಿದ ಧರ್ಮವೆಂದು ಭಾವಿಸಿಕೊಳ್ಳಲಾಗಿತ್ತು, ಯೆಹೂದಿಮತವು ಒಂದು ಪರವಾನಿಗೆಯಿರುವ ಧರ್ಮವಾಗಿತ್ತಷ್ಟೆ. ಹೇಗೂ, Neroನ ಕಾಲದಿಂದ ಮೊದಲ್ಗೊಂಡು, ಕ್ರೈಸ್ತತ್ವವನ್ನು ಸಂಶಯಾಸ್ಪದವಾಗಿ ಕಾಣಲಾಗುತ್ತಿತ್ತು.

ರೋಮ್ ಹಾಗೂ ಕ್ರೈಸ್ತತ್ವದ ನಡುವಿನ ಕಾದಾಟವು ಹಲವಾರು ಕಾರಣಗಳಿಗಾಗಿ ಅನಿವಾರ್ಯವಾಗಿತ್ತು. ಮೊದಲನೆಯದಾಗಿ, ಎರಡೂ ವಿಶ್ವವ್ಯಾಪಿ ಸಾಮ್ರಾಜ್ಯಗಳಾಗಿದ್ದವು. ಎರಡನೆಯದಾಗಿ, ಅವುಗಳ ಪರಸ್ಪರ ಕೆಲವೇ ವರ್ಷಗಳ ಅಂತರದಲ್ಲಿ ಕಾಣಿಸಿಕೊಂಡಿದ್ದವು. ಮೂರನೆಯದಾಗಿ, ಇವರೆಡು ಸಹ ಮನುಷ್ಯರಿಂದ ಪೂರ್ಣವಾದ ನಿಷ್ಠೆಯನ್ನು ಕೇಳಿದವು. ಯೇಸುವು ತಾನು "ಭೂಲೋಕದ ಮೇಲೆ . . . ಸಮಾಧಾನವನ್ನು ಹುಟ್ಟಿಸುವದಕ್ಕೆ ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು" ಎಂದು ಹೇಳಿದನು (ಮತ್ತಾಯ 10:34). ನಾಲ್ಕನೆಯದಾಗಿ, ಕ್ರೈಸ್ತತ್ವದ ಸತ್ಯವು ಯಾವದೇ ವ್ಯತ್ಯಾಸವಿಲ್ಲದೆ ದೋಷಪೂರಿತವಾದದ್ದರ ವಿರುದ್ಧ ಹೋರಾಡುವದಾಗಿದೆ. ಕ್ರಿಸ್ತನ ವಿರುದ್ಧ ಯುದ್ಧ ಮಾಡುವದಕ್ಕೆ ಸೈತಾನನು ತನ್ನ ಕೈಯಲ್ಲಿರುವ ಸಕಲ ದಾರಿಗಳನ್ನು ಉಪಯೋಗಿಸುವನೆಂಬುದನ್ನು ನಾವು ಎದುರು ನೋಡುತ್ತೇವೆ-ಮತ್ತು ಪ್ರಥಮ ಶತಮಾನದಲ್ಲಿ ರೋಮನ್ ಸಾಮ್ರಾಜ್ಯಕ್ಕಿಂತಲೂ ಯಾವ ಹೆಚ್ಚು ಶಕ್ತಿಶಾಲಿ ಆಯುಧಗಳನ್ನು ಆತನು ಬಳಸಿರುವದಕ್ಕೆ ಸಾಧ್ಯವಿತ್ತು?

ಅಸ್ತಿತ್ವದಲ್ಲಿದ್ದ ಸಕಲ ಪರವಾನಿಗೆಯುಳ್ಳ ಧರ್ಮಗಳಲ್ಲಿಯೇ, ಕ್ರೈಸ್ತತ್ವವನ್ನು ಪ್ರತ್ಯೇಕಿಸಿ ಗುರಿಯಿಡಲಾಗಿತ್ತು. ಏಕೆ ಹೀಗೆ ಮಾಡಲಾಯಿತೆಂಬುದಕ್ಕೆ ಕೆಲವೊಂದು ಸಂಭಾವ್ಯ ಕಾರಣಗಳು

ಇಲ್ಲಿವೆ:

1. ಕ್ರೈಸ್ತತ್ವವು "ರಾಜ್ಯ"ದ ಕುರಿತು ಬಹಳಷ್ಟನ್ನು ಮಾತಾಡುತ್ತದೆ, ಮತ್ತು ಬಹುಪಾಲು ಜನರು ಒಂದು ಆತ್ಮೀಕ ರಾಜ್ಯ ಹಾಗೂ ಒಂದು ತಾತ್ಕಾಲಿಕವಾದ ರಾಜ್ಯದ ನಡುವಿನ ವ್ಯತ್ಯಸಾವೇನು ಎಂಬುದನ್ನು ಅರ್ಥಮಾಡಿಕೊಳ್ಳಲಿಲ್ಲ.

2. ಕ್ರೈಸ್ತರಲ್ಲಿದ್ದ ಮನುಷ್ಯನ ಅಂತಿಮಗತಿಯ ಕುರಿತಾದ ಅಭಿಪ್ರಾಯವು ಕ್ರಾಂತಿಕಾರಿ ಎಂಬಂತೆ ಕಾಣಿಸುತ್ತಿತ್ತು. ಕ್ರೈಸ್ತ ಬೋಧಕರು ಸಮಸ್ತವೂ ನಾಶಗೊಳ್ಳುವದೆಂದು ಬೋಧಿಸುತ್ತಿದ್ದರು.

3. ಅಷ್ಟೊಂದು ಅನುಯಾಯಿಗಳನ್ನು ಹೊಂದಿರುವ ಕ್ರೈಸ್ತತ್ವವು ಏಕಾಏಕಿ ಕಾಣಿಸಿಕೊಂಡದ್ದರ ಪರಿಣಾಮವಾಗಿ ಸರ್ಕಾರದ ನಾಯಕರನ್ನು ತಳಮಳಗೊಳಿಸಿತ್ತು.

4. ಕ್ರೈಸ್ತತ್ವವು ಅಸಹಿಷ್ಣುತೆಯುಳ್ಳದ್ದಾಗಿತ್ತು. ಬಹುಪಾಲು ಧರ್ಮಗಳಂತಲ್ಲದೆ, ಒಬ್ಬನು ಕ್ರೈಸ್ತನು ಮತ್ತು ಅದೇ ವೇಳೆಯಲ್ಲಿ ಬೇರೆ ಇನ್ನೇನಾದರೂ ಆಗಿರುವದಕ್ಕೆ ಸಾಧ್ಯವಿರಲಿಲ್ಲ. ಒಬ್ಬ ಕ್ರೈಸ್ತನಾಗಬೇಕಾದರೆ, ವ್ಯಕ್ತಿಯೊಬ್ಬನು ತನಗೆ ಏನೆಲ್ಲಾ ಪವಿತ್ರವೆಂದೆಣಿಸಿ ಕೊಂಡಿದ್ದನೋ ಅದೆಲ್ಲವನ್ನೂ ತ್ಯಜಿಸಿ ಬಿಡಬೇಕಾಗಿತ್ತು.

5. ಕ್ರೈಸ್ತತ್ವವು ಪ್ರತ್ಯೇಕತೆಯುಳ್ಳದ್ದಾಗಿತ್ತು. ಕ್ರೈಸ್ತರು ಅನೇಕ ಸಾರಿ ರಾತ್ರಿಯಲ್ಲಿ ಕೂಡಿ ಬರುತ್ತಿದ್ದರು, ಕೆಲವರು ಆ ಕೂಡಿಬರುವಿಕೆಗಳನ್ನು "ರಹಸ್ಯ ಸಭೆಗಳು" ಎಂದು ಕರೆಯುತ್ತಿದ್ದರು. ಕ್ರೈಸ್ತ ಬೋಧನೆಗಳ ಹಾಗೂ ಆಚಾರಗಳ ಕುರಿತಾದ ಜನಪ್ರಿಯವಾಗಿರುವ ವರದಿಗಳನ್ನು ತಿರುಚಲಾಗಿರುತ್ತಿತ್ತು, ಕೆಲವು ಸಾರಿ ಬೇಕೆಂದೇ ಭಕ್ತಿಹೀನ ಹಾಗೂ ಭೋಗಲೋಲುಪತೆಯಿಂಧ ಕೂಡಿದವುಗಳೆಂದು ವ್ಯಾಖ್ಯಾನಿಸಲ್ಪಡುತ್ತಿದ್ದವು. ಕ್ರೈಸ್ತರು ಕುಡಿದು ಗಲಾಟೆಯನ್ನು ಮಾಡುತ್ತಾರೆ, ಸಂಬಂಧಿಗಳೊಂದಿಗೆ ಲೈಂಗಿಕ ಸಂಬಂಧವಿಟ್ಟುಕೊಳ್ಳುವವರು, ಮಕ್ಕಳ ಹತ್ಯೆಗಾರರು, ಹಾಗೂ ನರಭಕ್ಷಕರು ಎಂಬದಾಗಿ ಅವರ ಮೇಲೆ ಸುಳ್ಳಾಗಿ ಆರೋಪಗಳನ್ನು ಮಾಡಲಾಗುತ್ತಿತ್ತು.

6. ಸರ್ಕಾರದ ದೃಷ್ಟಿಕೋನದಿಂದ ನೋಡುವದಾದರೆ, ಕ್ರೈಸ್ತರು ಹಠಮಾರಿಗಳಾಗಿದ್ದರು. ಕ್ರೈಸ್ತರು ಕೇವಲ ಯಜ್ಞವೇದಿಯ ಮೇಲೆ ಒಂದು ಚಿಟಿಕೆಯಷ್ಟು ಧೂಪವನ್ನು ಹಾಕಿದರೆ ಸಾಕೆಂದು ರೋಮನ್ನರು ಬಯಸುತ್ತಿದ್ದರು. ಅವರ ನಿಲುವಿನ ಪ್ರಕಾರವಾಗಿ ಅದು ಹೆಚ್ಚಿನ ಬೇಡಿಕೆಯೇನೂ ಆಗಿರಲಿಲ್ಲ.

7. ಬೇರೆ ನಂಬಿಕೆಗಳ ದೇವರುಗಳು ನಿಜಕ್ಕೂ ದೇವರೇ ಅಲ್ಲ ಎಂದು ಕ್ರೈಸ್ತರು ಹೇಳುತ್ತಿದ್ದರಾದ್ದರಿಂದ ಅವರನ್ನು ನಾಸ್ತಿಕರೆಂದು ಪರಿಗಣಿಸಲಾಗುತ್ತಿತ್ತು.

ಕಾಲವು ಗತಿಸಿದ ಹಾಗೆ, ಸಂಭವಿಸುವ ಪ್ರತಿಯೊಂದು ವಿನಾಶಗಳಿಗೂ ಕ್ರೈಸ್ತರೇ ಕಾರಣವೆಂದು ದೂಷಿಸಲಾಗುತ್ತಿತ್ತು. ಕ್ರೈಸ್ತೀಯ ಸಮರ್ಥಕರು ವಿನಾಶಗಳೆಲ್ಲಾ ಕ್ರೈಸ್ತತ್ವವು ಸ್ಥಾಪನೆಗೊಳ್ಳುವದಕ್ಕೆ ಮುನ್ನವೇ ಸಂಭವಿಸಿರುತ್ತವೆಂಬುದನ್ನು ಎತ್ತಿ ತೋರಿಸಿದರು. ಅಷ್ಟುಮಾತ್ರವಲ್ಲದೆ, ವಿನಾಶವು ಸಂಭವಿಸಿದಾಗ, ಕ್ರೈಸ್ತರು ಅತ್ಯಂಥ ಸ್ವತ್ಯಾಗಿಗಳು ಹಾಗೂ ಬೇರೆಯವರಿಗೆ ಬಹಳ ಸಹಾಯಕರು ಆಗಿರುತ್ತಿದ್ದರು. ಇಂಥ ವಾಸ್ತವಾಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದಾಗ್ಯೂ ಅದರಿಂದ ಸಮಸ್ಯೆಯು ಬಗೆಹರಿಯಲಿಲ್ಲ, ಯಾಕೆಂದರೆ ಕೆಡುಕನ್ನುಂಟು ಮಾಡಬೇಕೆಂದು ಮುಂಚೆಯೇ ನಿರ್ಧರಿಸಿಕೊಂಡವರು ಕಾರಣವನ್ನು ಕೇಳಿಸಿಕೊಳ್ಳುವದು ವಿರಳವಾಗಿರುತ್ತದೆ.[61]

*ರೋಮ್ ಸಾಮ್ರಾಜ್ಯದ ಒಂದು ಎದುರಾಳಿ: ಪಾರ್ಥ್ಯ.* ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದಲ್ಲಿ, ಪಂಚಾಶತ್ತಮ ದಿನಕ್ಕಾಗಿ ಹಾಜರಾಗಿದ್ದ ದೇಶಗಳ ಹೆಸರುಗಳನ್ನು ಲೂಕನು

ದಾಖಲಿಸುವ ವೇಳೆ, ಆತನು ಅದರಲ್ಲಿ ಪಾರ್ಥ್ಯರನ್ನು ಸಹ ಸೇರ್ಪಡೆಗೊಳಿಸಿದನು (ವ. 9). ಪಾರ್ಥ್ಯವು ಒಂದು ಚಿಕ್ಕ ದೇಶವಾಗಿತ್ತು, ಈಗಿರುವ ಉತ್ತರ ಇರಾನ್ ಹಾಗೂ ದಕ್ಷಿಣ ತುರ್ಕಮೆನಿಸ್ತಾನ್ ಆಗಿರುವಂಥ ಕಾಸ್ಪಿಯನ್ ಸಮುದ್ರದ ಆಗ್ನೇಯ ಭಾಗದಲ್ಲಿ ಸುಮಾರು 300 ಮೈಲುಗಳಷ್ಟು ಉದ್ದ ಹಾಗೂ 120 ಮೈಲುಗಳಷ್ಟು ಅಗಲವಿರುವ ದೇಶವಾಗಿತ್ತು. ಅದೊಂಥು ಫಲವತ್ತಾದ ಆದರೆ ಪರ್ವತಗಳಿಂದ ಕೂಡಿದ ಪ್ರಾಂತ್ಯವಾಗಿತ್ತು.

ಪ್ರಕಟನೆ ಪುಸ್ತಕವು ಬರೆಯಲ್ಪಟ್ಟ ಹೊತ್ತಿಗೆ, ಪಾರ್ಥ್ಯವು ಹಳೇ ಪರ್ಶಿಯನ್ ಸಾಮ್ರಾಜ್ಯದ ಬಹುಪಾಲು ಭಾಗವನ್ನು ವಶಪಡಿಸಿಕೊಂಡಿತ್ತು ಮತ್ತು ಯೂಫ್ರೇಟೀಸ್ ನದಿಯಿಂದ ಹಿಡಿದು ಅಫಘಾನಿಸ್ತಾನದ ಪೂರ್ವ ದಿಕ್ಕಿನೆಡೆಗೆ ವಿಸ್ತರಿಸಿದ್ದ ಪ್ರಾಂತ್ಯದ ಮೇಲೆಲ್ಲಾ ಆಳ್ವಿಕೆಯನ್ನು ಮಾಡುತ್ತಲಿತ್ತು. ಪಾರ್ಥ್ಯವು ರೋಮನ್ ಸಾಮ್ರಾಜ್ಯದ ಸರಹದ್ದುಗಳಲ್ಲಿ ಮಿಲಿಟರಿ ಶಕ್ತಿಯ ಮಹತ್ವವುಳ್ಳಂಥ ಏಕೈಕ ದೇಶವಾಗಿತ್ತು, ಮತ್ತು ನೂರಾರು ವರ್ಷಗಳ ವರೆಗೂ ರೋಮನ್ನರ ಪಕ್ಕೆಯಲ್ಲಿ ಒಂದು ಮುಳ್ಳಾಗಿ ಇತ್ತು.

ಪ್ರಕಟನೆ ಪುಸ್ತಕದಲ್ಲಿರುವ ಕೆಲವೊಂದು ಚಿತ್ರಣಗಳು ಪಾರ್ಥ್ಯರಿಗೆ ಸಂಬಂಧಿಸಿರಬಹುದಾಗಿದೆ. ಉದಾಹರಣೆಗೆ, 6:2ರಲ್ಲಿ ಬಿಲ್ಲು ಮತ್ತು ಕಿರೀಟವನ್ನು ಇಟ್ಟುಕೊಂಡಿದ್ದ ಸವಾರನು ಪರ್ಶಿಯನ್/ಪಾರ್ಥ್ಯಿಯನ್ ನಾಣ್ಯಗಳನ್ನು ಜ್ಞಾಪಿಸುವದಾಗಿತ್ತು, ಅವುಗಳಲ್ಲಿ ತನ್ನ ಕೈಯಲ್ಲಿ ಬಿಲ್ಲು ಮತ್ತು ತಲೆಯ ಮೇಲೆ ಕಿರೀಟವನ್ನು ತೊಟ್ಟಿರುವ ಕುದುರೆ ಸವಾರನ ಚಿತ್ರವು ಇತ್ತು. "ಪಾರ್ಥ್ಯ ದೇಶದ ಯುದ್ಧವೀರರು ನುರಿತ ಕುದುರೆ ಸವಾರಿಗಳು ಹಾಗೂ ಬಿಲ್ಲುಗಾರರು ಆಗಿದ್ದರು, ಮತ್ತು ನಿಜವಾದ ಅಥವಾ ನಾಟಕದ ಪಲಾಯನದ ವೇಳೆ ತಮ್ಮ ವೈರಿಗಳ ಕಡೆಗೆ ಬಿಲ್ಲನ್ನು ಹೊಡೆಯುವ ಕಾರ್ಯತಂತ್ರವು 'ಪಾರ್ಥ್ಯರ ಹೊಡೆತ,' ಎಂಬ ಮಾತು ಹುಟ್ಟುವಂತೆ ಮಾಡಿತ್ತು, ಅದರರ್ಥವು ಅವರ ಮಾತೇ ಅಂತಿಮ ಎಂದಾಗಿತ್ತು."[62]

ಬಹುಶಃ ಪಾರ್ಥ್ಯರನ್ನು ಸೂಚಿಸುವ ಅತ್ಯಂತ ಸ್ಪಷ್ಟವಾಗಿರುವ ಪ್ರಾಸಂಗೀಕ ಸೂಚನೆಗಳು 9ರಿಂದ 16 ಅಧ್ಯಾಯಗಳಲ್ಲಿ ಕಂಡು ಬರುತ್ತವೆ: 9ನೇ ಅಧ್ಯಾಯವು "ಯೂಫ್ರೇಟೀಸ್ ಎಂಬ ಮಹಾ ನದಿ"ಯ ಬಳಿಯಲ್ಲಿ ಮಾನವರನ್ನು ದಂಡಿಸುವದಕ್ಕಾಗಿ ದೇವತೂತರನ್ನು ಬಿಚ್ಚಿಬಿಡಲಾಯಿತೆಂಬ ಕುರಿತು ಮಾತಾಡುತ್ತದೆ; ಅನಂತರದಲ್ಲಿ ದೇವದೂತರು "ಕುದುರೇ ದಂಡಿನವರು" ಎಂದು ಗುರುತಿಸಲ್ಪಟ್ಟಿರುತ್ತಾರೆ (ವಚನಗಳು 14-16). 16ನೇ ಅಧ್ಯಾಯವು ಪುನಃ "ಯೂಫ್ರೇಟೀಸ್ ಮಹಾ ನದಿ" ಯನ್ನು, "ಮೂಡಣ ದಿಕ್ಕಿನಿಂದ ಬರುವ ರಾಜರು" ಎಂಬುದರೊಂದಿಗೆ ಪ್ರಸ್ತಾಪಿಸುತ್ತದೆ (ವ. 12). ಈ ರಾಜರನ್ನು ದೇವರು ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕಾಗಿ ಬಳಸಿಕೊಳ್ಳುವನು ಎಂಬ ಸೂಚ್ಯಾರ್ಥವು ಇರುತ್ತದೆ.

ಪಾರ್ಥ್ಯ ಮತ್ತು ಯೂಫ್ರೇಟೀಸ್ ನದಿ ರೋಮನ್ ಸಾಮ್ರಾಜ್ಯಕ್ಕೆ ಯಾವ ಅರ್ಥವನ್ನು ಹೊಂದಿತ್ತು ಎಂಬುದನ್ನು ರೋಮನ್ ಇತಿಹಾಸದಲ್ಲಿನ ಒಂದು ಘಟನೆಯು ದೃಷ್ಟಾಂತಪಡಿಸುತ್ತದೆ. and the Euphrates River signified to the Roman Empire. Julius Caesar ಮತ್ತು ಮಹಾ Pompey ಇವರ ಜೊತೆಗೂಡಿ, Marcus Licinius Crassusನು "ಪ್ರಥಮ ತ್ರಿಪ್ರಭುತ್ವ"ವನ್ನು ರಚನೆ ಮಾಡಿದನು. ಪ್ರಸಿದ್ಧಿ ಮತ್ತು ಐಶ್ವರ್ಯಗಳಲ್ಲಿ ಎದುರಾಳಿಯಾದ Caesarನನ್ನು ಮೀರಿಸಬೇಕೆಂದು ದೃಢತೀರ್ಮಾನ ಮಾಡಿಕೊಂಡವನಾಗಿ Crassusನು ಪಾರ್ಥ್ಯ ದೇಶವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದನು. ಕ್ರಿ.ಪೂ. 53ರಲ್ಲಿ ಆತನು ಯೂಫ್ರೇಟೀಸ್ ನದಿಯನ್ನು ದಾಟಿ ಆಚೆಯ ಕಡೆಗೆ ಮುನ್ನಡೆದನು. Carrhae ಎಂಬಲ್ಲಿ ನಡೆದ ಯುದ್ಧಯೊಂದರಲ್ಲಿ, 20,000 ರೋಮನ್ನರು ಮರಣಿಸಿದರು, 10,000 ರೋಮನ್ನರನ್ನು ಸೆರೆಯಾಳುಗಳಾಗಿ ಬಂಧಿಸಲಾಯಿತು, ರೋಮನ್ ಲಾಂಛನವು ಸೋತಿತು, ಸ್ವತಃ

Crassusನು ಕೊಲ್ಲಲ್ಪಟ್ಟನು. ಬಳಿಕ ಪಾರ್ಥ್ಯರು ಯೂಫ್ರೇಟೀಸ್ ನದಿಯನ್ನು ದಾಟಿಕೊಂಡು ಉತ್ತರ ಸಿರಿಯಾವನ್ನೆಲ್ಲಾ ಕೊಳ್ಳೆ ಹೊಡೆದರು. "ಮೂಡಣ ದಿಕ್ಕಿನಿಂದ ಬರುವ ರಾಜರು ಯೂಫ್ರೇಟೀಸ್ ನದಿಯ ಆಚೆ ದಡದಲ್ಲಿ" ದಾಳಿಯನ್ನು ಮಾಡಿದ್ದಾರೆಂಬ ಯೋಚನೆಯೇ ರೋಮನ್ ಸೇನಾಧಿಪತಿಯಲ್ಲಿ ನಡುಕ ಉಂಟು ಮಾಡುತ್ತಿತ್ತು.

ಪಾರ್ಥ್ಯಿಯ ರಾಜಮನೆತನವು ಕ್ರಿ.ಶ. 224ರಲ್ಲಿ Sassanians ರಿಂದ ಜಯಿಸಲ್ಪಟ್ಟದ್ದರಾದ್ದರಿಂದ, ರೋಮನ್ ಸಾಮ್ರಾಜ್ಯವನ್ನು ಕಿತ್ತು ಹಾಕುವದರಲ್ಲಿ ಪಾರ್ಥ್ಯರು ಅಕ್ಷರಶಃ ಜವಾಬ್ದಾರರಾಗಿರಲಿಲ್ಲ. ಆದುದರಿಂದ, ಪ್ರಕಟನೆ ಪುಸ್ತಕದಲ್ಲಿ ಬರುವ ಪಾರ್ಥ್ಯರ ಕುರಿತ ಯಾವದೇ ಚಿತ್ರಣವನ್ನು ಅಕ್ಷರಶಃವೆಂದು ಭಾವಿಸಿಕೊಳ್ಳಕೂಡದು. ಬದಲಾಗಿ, ಅದು ರೋಮನ್ ಸಾಮ್ರಾಜ್ಯವನ್ನು ನಾಶಗೊಳಿಸುವದಕ್ಕೆ ದೇವರು ಬಳಸಿದ ಶಕ್ತಿಗಳಿಗೆ ಸಂಕೇತವಾಗಿರುತ್ತದೆ - ಬಹುಶಃ ಮಿಲಿಟರಿ ಶಕ್ತಿಗಳು (9:14-16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ರೋಮನ್ ಸಾಮ್ರಾಜ್ಯಶಾಹಿಯು ಪತನಗೊಳ್ಳುವದರಲ್ಲಿ ಬಾಹ್ಯದಿಂದ ದಾಳಿ ಮಾಡಲ್ಪಟ್ಟಿದ್ದು ಒಂದು ಮಹತ್ವಪೂರ್ಣವಾದ ಕಾರಣಾಂಶವಾಗಿತ್ತು.

*ರೋಮನ್ ಸಾಮ್ರಾಜ್ಯವು ಏಕೆ ಪತನಗೊಂಡಿತ್ತು.* Summersನು ರೋಮಿನ ಪತನವನ್ನು ಮೂರು ಕಾರ್ಯಗಳಿಗೆ ಸಂಬಂಧಗೊಳಿಸುತ್ತಾನೆ: "ಪ್ರಾಕೃತಿಕ ವಿಕೋಪ, ಆಂತರೀಕವಾದ ಕ್ಷೀಣಿಸುವಿಕೆ, ಮತ್ತು ಹೊರಗಿನಿಂದಾದ ದಾಳಿ."[63] *The Decline and Fall of the Roman Empire* ಎಂಬ ಪುಸ್ತಕದ ಲೇಖಕನಾದ Edward Gibbonನು ಆಂತರೀಕ ಕ್ಷೀಣಿಸುವಿಕೆಯು ಕಾರಣಾಂಶವಾಗಿತ್ತು ಎಂದು ನಂಬುತ್ತಾನೆ ಮತ್ತು ರೋಮಿನ ಪತನಕ್ಕೆ ಐದು ಕಾರಣಗಳನ್ನು ಪಟ್ಟಿ ಮಾಡುತ್ತಾನೆ:

> (1) ವಿಚ್ಛೇದನಗಳಲ್ಲಿ ತೀವ್ರವಾದ ಹೆಚ್ಚಳ; ಕುಟುಂಬದ ಘನತೆ ಮತ್ತು ಪಾವಿತ್ರ್ಯತೆಯನ್ನು ಅಸಡ್ಡೆ ಮಾಡುವಿಕೆ, ಅದೇ ಮಾನವ ಸಮಾಜದ ತಳಹದಿಯಾಗಿರುತ್ತದೆ.
>
> (2) ಹೆಚ್ಚೆಚ್ಚು ತೆರಿಗೆಗಳನ್ನು ವಿಧಿಸುವಿಕೆ ಮತ್ತು ಸಾರ್ವಜನಿಕ ಹಣವನ್ನು ಜನರಿಗೋಸ್ಕರ ಉಚಿತ ರೊಟ್ಟಿ ಮತ್ತು ಸರ್ಕಸ್‌ಗಳಿಗಾಗಿ ಬಳಕೆ ಮಾಡಿದ್ದು.
>
> (3) ವಿಲಾಸಿ ಜೀವನಕ್ಕಾಗಿ ಹುಚ್ಚು ಗೀಳು; ಕ್ರೀಡೆಗಳು ಪ್ರತಿ ವರ್ಷವೂ ಹೆಚ್ಚೆಚ್ಚು ರೋಮಾಂಚಕಾರಿ ಹಾಗೂ ಕ್ರೌರ್ಯಗೊಳ್ಳುತ್ತಾ ಹೋದವು.
>
> (4) ನಿಜವಾದ ವೈರಿಯು - ಜನರ ಅದೋಗತಿ - ಒಳಗಡೆಯೇ ಇರುವಾಗ ಬೃಹತ್ ಗಾತ್ರದ ಯುದ್ಧಾಯುಧಗಳನ್ನು ನಿರ್ಮಿಸಿದ್ದು.
>
> (5) ಧರ್ಮದ ಕ್ಷೀಣತೆ - ನಂಬಿಕೆಯು ಕೇವಲ ನೇಮನಿಷ್ಠೆಯಂತಾಗಿದ್ದು - ಜೀವನದೊಂದಿಗೆ ಸಂಪರ್ಕವನ್ನೇ ಕಳೆದುಕೊಂಡು ಜನರನ್ನು ಎಚ್ಚರಿಸುವದಕ್ಕೆ ಮತ್ತು ನಡಿಸುವದಕ್ಕೆ ಅಸಮರ್ಥವಾಗಿದ್ದು.[64]

Gibbonನ ಐದು ಕಾರಣಗಳನ್ನು Summers ನು ನೀಡಿದ ಎರಡನೆಯ ಕಾರಣಾಂಶದ ಕೆಳಗಿನ ಉಪಅಂಶಗಳೆಂದು ಯೋಚಿಸಿಕೊಳ್ಳಬಹುದಾಗಿದೆ.

ಸಂಕ್ಷಿಪ್ತವಾಗಿ, ಪ್ರಕಟನೆ ಪುಸ್ತಕದಲ್ಲಿರುವ ಮೂರು ಮೂಲಭೂತ ವಿಧವಾದ ಸಂಕೇತಗಳ ಕುರಿತು ಚರ್ಚಿಸಿದ್ದೇವೆ: (1) ಸಂಖ್ಯೆಗಳನ್ನು ಸಾಂಕೇತಿಕವಾಗಿ ಬಳಸಲಾಗಿರುತ್ತದೆ, (2) ಹಳೆಯ ಒಡಂಬಡಿಕೆಯಿಂದ ಸಂಕೇತಗಳು, ಹಾಗೂ (3) ಐತಿಹಾಸಿಕ ಹಿನ್ನಲೆಯ ಮೇಲೆ ಆಧಾರವಾಗಿರುವ ಸಂಕೇತಗಳು. ಈ ಮುಂಚೆ ತಿಳಿಸಿರುವ ಪ್ರಕಾರ, ಪುಸ್ತಕದಲ್ಲಿ ಇತರ ವಿಧವಾದ ಸಂಕೇತಗಳು ಸಿಕ್ಕುತ್ತವೆ. ಉದಾಹರಣೆಗೆ, ಬಣ್ಣಗಳು ಸಾಂಕೇತಿಕವಾಗಿ ಬಳಸಲ್ಪಟ್ಟಿವೆ:

> ಅಂತ್ಯಕಾಲಿಕ ಸಾಹಿತ್ಯದಲ್ಲಿ ಬಹಳ ಸಾಮಾನ್ಯವಾಗಿ ಸಿಕ್ಕುವ ಬಣ್ಣವು ಬಿಳಿ ಮತ್ತು ಅದು ವಿಜಯವನ್ನು ಸಂಕೇತಿಸುತ್ತದೆ . . . ಕೆಂಪು ಆಗಾಗ ಕಾಣಿಸಿಕೊಳ್ಳುತ್ತದೆ, ಯುದ್ಧ ಅಥವಾ ಕಾದಾಟವನ್ನು ಸೂಚಿಸುತ್ತದೆ. ಕಪ್ಪು ಬಣ್ಣವು ಏನೋ ಕೊರತೆಯಾಗಿರುವದನ್ನು ಸೂಚಿಸುತ್ತದೆ, ಕ್ಷಾಮದಲ್ಲಿ ಆಹಾರದ ಕೊರತೆ, ಅಥವಾ ಅಂಟು ವ್ಯಾಧಿಗಳ ಅಥವಾ ಸಾಂಕ್ರಾಮಿಕ ರೋಗಗಳ ನಡುವೆ ಆರೋಗ್ಯದ ಕೊರತೆ.[65]

ಅಲ್ಲದೆ ನಾವು ಪ್ರಕಟನೆ ಪುಸ್ತಕದಲ್ಲಿ ಕೆಲವು ಹೊಸ ಒಡಂಬಡಿಕೆಯ ಸಂಕೇತಗಳನ್ನು ಸಹ ಕಾಣುವೆವು. ಪ್ರಕಟನೆ ಪುಸ್ತಕವು ಬರೆಯಲ್ಪಡುವ ಹೊತ್ತಿಗೆ, ಹೊಸ ಒಡಂಬಡಿಕೆಯ ಕೆಲವು ಪುಸ್ತಕಗಳು ಹಲವಾರು ದಶಕಗಳ ಕಾಲ ಜನಗಳ ನಡುವೆ ಸುತ್ತಾಡುತ್ತಲಿತ್ತು. ಪ್ರಕಟನೆ ಪುಸ್ತಕದಲ್ಲಿ ಸಿಕ್ಕುವ ಯೇಸು "ನಿಷ್ಕಳಂಕ ಯಜ್ಞದ ಕುರಿ" (1 ಪೇತ್ರ 1:19) ಮತ್ತು ಸಭೆಯು ಅಬ್ರಹಾಮನ ಆತ್ಮೀಕ ಸಂತತಿ (ಗಲಾತ್ಯ 3:7) ಎಂಬ ಭಾವನೆಗಳು, ಬಹುಪಾಲು ಕ್ರೈಸ್ತರಿಗೆ ಪರಿಚಿತವಾಗಿದ್ದಿರಬಹುದಾಗಿದೆ.[66]

ಕೆಲವು ಪ್ರಮುಖ ವಿಭಾಗಗಳಲ್ಲಿ ವಿವರಿಸದೆ ಇರುವಂಥ ಕೆಲವು ಚಿತ್ರಗಳನ್ನು ವಾಕ್ಯಭಾಗದಲ್ಲಿ ವಿವರಿಸಲಾಗಿರುತ್ತದೆ (ನೋಡಿರಿ 12:9). ಉಳಿದದ್ದನ್ನು ನಾವು ತಕ್ಷಣದ ಸನ್ನಿವೇಶ ಮತ್ತು ಪ್ರಕಟನೆ ಪುಸ್ತಕದ ಒಟ್ಟಾರೆ ಸಂದೇಶಕ್ಕೆ ಅನುಗುಣವಾಗಿ ಅರ್ಥನಿರೂಪಣೆ ಮಾಡತಕ್ಕದ್ದು.

## ಸಂದೇಶ

ಹೊಸ ಒಡಂಬಡಿಕೆಯ ಪ್ರತಿಯೊಂದು ಪುಸ್ತಕವು ತನ್ನದೆ ಆಗಿರುವ ವಿಶೇಷ ದೃಷ್ಟಿಕೋನವನ್ನು ಹೊಂದಿರುತ್ತದೆ. ಅಪೊಸ್ತಲರ ಕೃತ್ಯಗಳು ಪುಸ್ತಕವು ಸಕ್ರಿಯವಾಗಿರುವ ಕ್ರೈಸ್ತತ್ವದ ಚಿತ್ರವನ್ನು ಬಿಡಿಸುತ್ತದೆ. ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯು ನಮಗೆ ಸಂತೋಷಭರಿತ ಕ್ರೈಸ್ತತ್ವದ ಕುರಿತು ಹೇಳುತ್ತದೆ. ಯಾಕೋಬನ ಪತ್ರಿಕೆಯು ಕಾರ್ಯರೂಪದ ಕ್ರೈಸ್ತತ್ವದ ವಿಷಯವಾಗಿ ತುಂಬಿರುತ್ತದೆ. ಪ್ರಕಟನೆ ಪುಸ್ತಕದ ಪ್ರಮುಖ ಚರ್ಚೆಯಾಂಶವು *ಜಯಶಾಲಿಯಾದ* ಕ್ರೈಸ್ತತ್ವ ಆಗಿರುತ್ತದೆ.

Νικάω (*nikaō*) ಎಂಬುದು "ವಿಜಯ" ಎಂಬುದಕ್ಕಾಗಿರುವ ಗ್ರೀಕ್ ಪದದ ಕ್ರಿಯಾಪದರೂಪವಾಗಿರುತ್ತದೆ, ಇದು ಪ್ರಕಟನೆ ಪುಸ್ತಕದ ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಹದಿನೇಳು ಸಾರಿ ಕಂಡು ಬರುತ್ತದೆ. *Nikaō* ಸಾಮಾನ್ಯವಾಗಿ "ಜಯಿಸು," "ಗೆದ್ದುಕೋ," ಅಥವಾ "ವಿಜಯಿಶಾಲಿ [ಆಗಿರು]" ಎಂದು ಅನುವಾದಿಸಲ್ಪಟ್ಟಿರುತ್ತದೆ. 5ನೇ ಅಧ್ಯಾಯದಲ್ಲಿ ಯೇಸುವು "ಜಯಹೊಂದಿದವನು" (ವ. 5) ಎಂದು ಬಣ್ಣಿಸಲ್ಪಟ್ಟಿದ್ದಾನೆ. CEV ತರ್ಜುಮೆಯು ಆತನು "ಜಯವನ್ನು ಗೆದ್ದುಕೊಂಡಿದ್ದಾನೆ" ಎಂದು ಹೇಳುತ್ತದೆ. 12ನೇ ಅಧ್ಯಾಯದಲ್ಲಿ ಕ್ರೈಸ್ತರು "ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ . . . [ಸೈತಾನನನ್ನು] ಜಯಿಸಿದರು" ಎಂದು ನಮಗೆ ಹೇಳಲ್ಪಟ್ಟಿರುತ್ತದೆ (ವ. 11). CEV ತರ್ಜುಮೆಯಲ್ಲಿ "ನಮ್ಮ ಜನರು ಸೈತಾನನನ್ನು ಸೋಲಿಸಿದ್ದಾರೆ" ಎಂದಿರುತ್ತದೆ. 15ನೇ ಅಧ್ಯಾಯದಲ್ಲಿ ಯೋಹಾನನು ದೇವರ ಸಮ್ಮುಖದಲ್ಲಿ ಸಭೆಯು ಜಯಶಾಲಿಯಾಗಿ ನಿಂತಿರುತ್ತದೆಂದು ಚಿತ್ರಿಸಿರುತ್ತಾನೆ: "ನನಗೆ ಕಾಣಿಸಿತು . . . ಮೃಗದ . . . ಮೇಲೆ *ಜಯ ಹೊಂದಿದವರು* . . . " (ವ. 2; ಒತ್ತಿ ಹೇಳಿದ್ದು ನನ್ನದು). 21ನೇ ಅಧ್ಯಾಯದಲ್ಲಿ "ಜಯ ಹೊಂದುವವನಿಗೆ" ಪರಲೋಕದ ಪಟ್ಟಣದ ಭಾಗವಾಗಿ ದೇವರ ಸಂಗಡ ನಿವಾಸ ಮಾಡುವ ಒಂದು ಸ್ಥಳವು ಕೊಡಲ್ಪಡುವದೆಂಬ ಭರವಸವು ಕೊಡಲ್ಪಟ್ಟಿರುತ್ತದೆ (ವ. 7). ಯಾರೋ ಒಬ್ಬರು ಪ್ರಕಟನೆ ಪುಸ್ತಕದ ಸಂದೇಶವು "ನಾವು ಜಯಿಸಿದೆವು! ದೇವರಿಗೆ ಸ್ತೋತ್ರ,

ನಾವು ಜಯಿಸಿದೆವು!" ಎಂದಾಗಿರುತ್ತದೆಂದು ಹೇಳಿರುತ್ತಾರೆ.

## ಸಂದೇಶವು ಚರ್ಚಿಸಲ್ಪಡುತ್ತದೆ

*ಒಂದು ಮೂರು-ಭಾಗದ ಸಂದೇಶ.* ಪ್ರಕಟನೆ ಪುಸ್ತಕದಲ್ಲಿರುವ ವಿಜಯದ ಸಂದೇಶವು ಮೂರು ಭಾಗಗಳನ್ನು ಹೊಂದಿದೆ: (1) ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಕಾದಾಟ, (2) ಒಳ್ಳೇದಕ್ಕೆ ಸೋಲಾಗುತ್ತಿದೆ ಎಂದು ತೋರುವಿಕೆ, ಮತ್ತು (3) ಒಳ್ಳೇದಕ್ಕೆ ಅಂತಿಮವಾಗಿ ಜಯ ಸಿಕ್ಕುವಿಕೆ. ಈ ಮೂರು-ವಿಧವಾದ ಸಂದೇಶಕ್ಕೆ ಒಂದು ದೃಷ್ಟಾಂತವನ್ನು 11ನೇ ಅಧ್ಯಾಯದಲ್ಲಿರುವ ಇಬ್ಬರು ಸಾಕ್ಷಿಗಳ ಕಥೆಯಲ್ಲಿ ಕಾಣಬಹುದಾಗಿದೆ. ಮೊದಲನೆಯದಾಗಿ ಇಬ್ಬರು ಸಾಕ್ಷಿಗಳು ದೇವರ ಸಂದೇಶವನ್ನು ಸಾರುತ್ತಿರುವ ವೇಳೆ ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಕಾದಾಟವನ್ನು ಕಾಣುತ್ತೇವೆ (ವಚನಗಳು 3-6). ಎರಡನೆಯದಾಗಿ, ಅಧೋಲೋಕದಿಂದ ಬರುವ ಮೃಗವು ಇಬ್ಬರು ಸಾಕ್ಷಿಗಳೊಂದಿಗೆ ಯುದ್ಧವನ್ನು ಮಾಡುವಾಗ, ಮೇಲ್ನೋಟಕ್ಕೆ ಒಳ್ಳೇದು ಸೋಲು ಅನುಭವಿಸಿದಂತೆ ತೋರುತ್ತದೆ:

> ಅಧೋಲೋಕದಿಂದ ಬರುವ ಮೃಗವು ಇವರ ಮೇಲೆ ಯುದ್ಧಮಾಡಿ ಇವರನ್ನು ಜಯಿಸಿ ಕೊಲ್ಲುವದು. ಈ ಸಾಕ್ಷಿಗಳ ಶವಗಳು . . . ಬೀದಿಯಲ್ಲಿ ಬಿದ್ದಿರುವವು . . . ಸಕಲ ಪ್ರಜೆ ಕುಲ ಭಾಷೆ ಜನಾಂಗಗಳಿಗೆ ಸೇರಿದವರು ಈ ಸಾಕ್ಷಿಗಳ ಶವಗಳನ್ನು ಮೂರುವರೆ ದಿನಗಳವರೆಗೂ ನೋಡುತ್ತಾ ಇರುವರು; ಅವುಗಳನ್ನು ಸಮಾಧಿಯಲ್ಲಿ ಇಡಗೊಡಿಸುವದಿಲ್ಲ. . . . ಇವರು ಸತ್ತದ್ದಕ್ಕೆ ಭೂನಿವಾಸಿಗಳು ಸಂತೋಷಿಸಿ ಸಂಭ್ರಮಗೊಂಡು ಒಬ್ಬರಿಗೊಬ್ಬರು ಉಡುಗೋರೆಗಳನ್ನು ಕಳುಹಿಸುವರು (ವಚನಗಳು 7-10).

ಮೂರನೆಯದಾಗಿ, ನಾವು ಅಂತಿಮವಾಗಿ ಒಳ್ಳೇದು ಜಯಗೊಳ್ಳುವದನ್ನು ಕಾಣುತ್ತೇವೆ:

> ಮೂರುವರೆ ದಿನಗಳಾದ ಮೇಲೆ ದೇವರಿಂದ ಜೀವಾತ್ಮ ಬಂದು ಆ ಶವಗಳಲ್ಲಿ ಹೋಗಲು ಇವು ಕಾಲೂರಿ ನಿಂತವು. ಅವರನ್ನು ನೋಡಿದವರಿಗೆ ಮಹಾ ಭಯವು ಹಿಡಿಯಿತು. ಆ ಮೇಲೆ ಅವರಿಗೆ-ಇಲ್ಲಿ ಮೇಲಕ್ಕೆ ಬನ್ನಿರಿ ಎಂದು ಆಕಾಶದ ಮಹಾ ವಾಣಿಯು ಹೇಳಿತು. ಅದನ್ನು ಅವರು ಕೇಳಿ ಮೇಘ ವಿಮಾನದಲ್ಲಿ ಪರಲೋಕಕ್ಕೆ ಏರಿಹೋದರು; ಅವರ ಶತ್ರುಗಳು ಅವರನ್ನು ನೋಡುತ್ತಾ ಇದ್ದರು. ಅದೇ ಗಳಿಗೆಯಲ್ಲಿ ಮಹಾ ಭೂಕಂಪವುಂಟಾಗಿ . . . ಏಳು ಸಾವಿರ ಮಂದಿ ಸತ್ತು ಹೋದರು . . . (ವಚನಗಳು 11-13).

ಪ್ರಥಮ ಶತಮಾನದಲ್ಲಿದ್ದ ಕ್ರೈಸ್ತರಿಗೆ ಕೊಡಲ್ಪಟ್ಟ ಈ ಮೂರು-ಭಾಗವುಳ್ಳ ಸಂದೇಶವನ್ನು ಎಷ್ಟು ಸಾರಿ ಒತ್ತಿ ಹೇಳಿದರೂ ಅದು ಅತಿಯಾಗುವದಿಲ್ಲ. ರೋಮಿನ ಪ್ರಚಂಡ ಶಕ್ತಿಯು ಅವರ ವಿರುದ್ಧ ವ್ಯೂಹವನ್ನು ರಚಿಸಿ ನಿಂತಿತ್ತು. ಕ್ರೈಸ್ತರು "ದಿನವೆಲ್ಲಾ ಕೊಲೆಗೆ ಗುರಿಯಾಗುತ್ತಿದ್ದರು"; ಅವರು "ಕೊಯ್ಗುರಿಗಳಂತೆ ಎಣಿಸಲ್ಪಟ್ಟಿದ್ದರು" (ರೋಮಾ 8:36). ತಲೆ ತಗ್ಗಿಸುವಂತೆ ಮಾಡುವ ಸೋಲು ಸನ್ನಿಹಿತವಾಗಿತ್ತು; ಕ್ರೈಸ್ತತ್ವದ ಅವಸಾನವು ಅನಿವಾರ್ಯವೇನಿಸಿತ್ತು. ಪರಿಸ್ಥಿತಿಯು ಎಷ್ಟೇ ನಿರಾಶೆದಾಯಕವೆಂಬಂತೆ *ತೋರಿದಾಗ್ಯೂ*, ದೇವರು ಈಗಲೂ ಅಧಿಕಾರದಲ್ಲಿದ್ದಾನೆ ಎಂಬ ಸಂದೇಶವನ್ನು ಕೇಳುವದು ದೇವರ ಜನರಿಗೆ ಅತ್ಯಾವಶ್ಯಕವಾಗಿತ್ತು. ಅಂತಿಮವಾಗಿ, ಅವರು ನಂಬಿಗಸ್ತರಾಗಿ ಉಳಿಯುವದಾದರೆ, ಅವರು ಗೆಲ್ಲುವ ಪಕ್ಷದಲ್ಲಿ ಇರುವವರಾಗಿದ್ದರು.

*ಒಂದು ಮರುಕಳಿಸುವ ಸಂದೇಶ.* ಪ್ರಕಟನೆ ಪುಸ್ತಕದಲ್ಲಿ ಜಯದ ಸಂದೇಶವು ಒಂದು ಮರುಕಳಿಸುವಂಥ ಸಂದೇಶವಾಗಿದೆ. ನಾವು ಅದನ್ನು ತಪ್ಪಿಸಿಕೊಳ್ಳದಿರುವಂತೆ ಖಾತ್ರಿ ಪಡಿಸುವದಕ್ಕಾಗಿ, ಪವಿತ್ರಾತ್ಮನು ಅದನ್ನು ಮತ್ತೇ ಮತ್ತೇ ಪುನರಾವರ್ತಿಸುತ್ತಾನೆ - ಕನಿಷ್ಠ

ಏಳು ಸಾರಿ.

ಗತಕಾಲದ ದಿನಗಳಲ್ಲಿ, ಅನೇಕರು ಪ್ರಕಟನೆ ಪುಸ್ತಕದಲ್ಲಿನ ದೃಶ್ಯಗಳನ್ನು ಕಾಲಾನುಕ್ರಮದ ಪ್ರಕಾರ ಅರ್ಥನಿರೂಪಣೆ ಮಾಡುವದಕ್ಕೆ ಪ್ರಯತ್ನಿಸಿದರು. ಇವರು ಕಾಲವೃತ್ತಾಂತಿಕ ಕ್ರಮವನ್ನು ಅನುಸರಿಸದ ಪುಸ್ತಕದಲ್ಲಿರುವ ಭಾಗಗಳ ವಿಷಯದಲ್ಲಿ ಅನಿವಾರ್ಯವಾಗಿ ಒದ್ದಾಟವನ್ನು ಅನುಭವಿಸುವಂತೆ ಮಾಡಲ್ಪಟ್ಟರು. ಉದಾಹರಣೆಗೆ, 12ನೇ ಅಧ್ಯಾಯದಲ್ಲಿ "ಸೂರ್ಯನನ್ನು ಧರಿಸಿಕೊಂಡಿದ್ದ ಸ್ತ್ರೀ" (ವ. 1) "ಆಕೆ ಜನಾಂಗಗಳನ್ನು ಕಬ್ಬಿಣದ ಕೋಲಿನಿಂದ ಆಳಬೇಕಾದ ಒಂದು ಗಂಡು ಮಗುವನ್ನು ಹೆತ್ತಳು" (ವ. 5). "ಕಬ್ಬಿಣದ ಕೋಲಿನಿಂದ" ಜನಾಂಗಗಳನ್ನು ಆಳುವದರ ಉಲ್ಲೇಖನವು ಕೀರ್ತನೆ 2ನೇ ಅಧ್ಯಾಯದಿಂದ ತೆಗೆದುಕೊಂಡದ್ದಾಗಿದೆ, ಅದೊಂದು ಮೆಸ್ಸೀಯನ ಕುರಿತ ಕೀರ್ತನೆಯಾಗಿದ್ದು ಹೊಸ ಒಡಂಬಡಿಕೆಯ ಲೇಖಕರಿಂದ ಅನೇಕ ಸಾರಿ ಯೇಸುವಿಗೆ ಅನ್ವಯಿಸಲ್ಪಟ್ಟಿರುತ್ತದೆ (ಅಪೊಸ್ತಲರ ಕೃತ್ಯಗಳು 13:33; ಇಬ್ರಿಯ 1:5; 5:5). 12:5ರಲ್ಲಿನ ವಾಕ್ಯಭಾಗವು ಯೇಸುವಿನ ಜನನಕ್ಕೆ ಪ್ರಾಸಂಗಿಕವಾದ ಸೂಚನೆಯಂತೆ ಕಾಣಿಸುತ್ತದೆ; ಆದರೆ ಪ್ರಕಟನೆ ಪುಸ್ತಕವು ಕಾಲವೃತ್ತಾಂತಿಕ ಕ್ರಮದಲ್ಲಿ ಬರೆಯಲ್ಪಟ್ಟಿರುವದಾದರೆ, ಏಕೆ ನಾವು ಯೇಸುವಿನ ಜನನದ ಕುರಿತಾಗಿ ಪುಸ್ತಕದ ಅರ್ಧಭಾಗಕ್ಕೆ ಹೋದಾಗ ಓದುತ್ತೇವೆ?

ಅಷ್ಟುಮಾತ್ರವಲ್ಲದೆ, ಪುಸ್ತಕವು ಕಾಲಾನುಕ್ರಮದಲ್ಲಿ ಹಿಂದಕ್ಕೆ ಮತ್ತು ಮುಂದಕ್ಕೆ ಜಿಗಿಯುಂತೆ ತೋರುತ್ತದೆ. ಅದಕ್ಕೊಂದು ಉದಾಹರಣೆಯೆಂದರೆ ಅದು ಬಾಬೆಲೆಂಬ ದುಷ್ಟ ಪಟ್ಟಣದ ವಿಷಯದಲ್ಲಿ ವಿವರಿಸುವ ರೀತಿಯೇ ಆಗಿದೆ. ಬಾಬೆಲಿನ ಪತನವು ಈಗಾಗಲೇ ಗತಕಾಲದಲ್ಲಿ ಸಂಭವಿಸಿರುತ್ತದೋ ಎಂಬಂತೆ 14ನೇ ಅಧ್ಯಾಯದಲ್ಲಿ ಘೋಷಣೆ ಮಾಡಲ್ಪಡುತ್ತದೆ, ಆದರೆ ವಾಸ್ತವದಲ್ಲಿ ಬಾಬೆಲ್ 18 ಅಧ್ಯಾಯದ ತನಕ ಪರಿಚಯಿಸಲ್ಪಡುವದಿಲ್ಲ. ಇನ್ನೊಂದು ಉದಾಹರಣೆಯೆಂದರೆ, ಪುಸ್ತಕವು ಪದೇ ಪದೇ ಇತಿಹಾಸದ ಮುಕ್ತಾಯವನ್ನು ಚಿತ್ರಿಸುತ್ತದೆ. R. C. H. Lenskiನು ಗಮನಕ್ಕೆ ತರುವದೇನೆಂದರೆ "ಏಳು ಬೇರೆ ಬೇರೆಯಾದ ಕಡೆಗಳಲ್ಲಿ ಪ್ರಕಟನೆ ಪುಸ್ತಕವು ಲೋಕಾಂತ್ಯವನ್ನು ಮುಟ್ಟುತ್ತದೆ: 6:12-17; 7:9-17; 11:18; 14:4-20; 16:17-21; 19:11-21; 20:7-15."[67]

ನಾವು ಪ್ರಕಟನೆ ಪುಸ್ತಕವು ಅನುಸರಿಸುವ ಈ ಹಿಂದಕ್ಕೆ-ಮತ್ತು-ಮುಂದಕ್ಕೆ ಹೋಗುವ, ಅಲ್ಲಿ-ಬಳಿಕ-ಇಲ್ಲಿಗೆ ಸಾಗುವ ದಾರಿಯನ್ನು ಹೇಗೆ ವಿವರಿಸಲಬಲ್ಲೆವು? ಇದನ್ನು ವಿವರಿಸುವ ಉತ್ತಮ ರೀತಿಯೆಂದರೆ "ಪುಸ್ತಕವು ಒಂದೇ ಕಾಲಾವಧಿಯನ್ನು ಮತ್ತು ಒಂದೇ ಘಟನೆಗಳನ್ನು ವಿವಿಧ ಭಾಗಗಳಲ್ಲಿ ವಿವಿಧ ದೃಷ್ಟಿಕೋನಗಳಿಂದ ನೋಡುವದಾಗಿದೆ"[68] ಎಂಬದೆ. Hendriksen ಸಲಹೆ ಮಾಡುವದೇನೆಂದರೆ ಪ್ರಕಟನೆ ಪುಸ್ತಕವು ಏಳು ವಿಭಾಗಗಳನ್ನು ಹೊಂದಿದೆ, ಆ "ವಿಭಾಗಗಳು ಸಮಾನಾರ್ಥದಲ್ಲಿ ಸಾಗುತ್ತವೆ" ಎಂಬದೆ ಮತ್ತು "ಅವುಗಳಲ್ಲಿ ಪ್ರತಿಯೊಂದು ಪ್ರಥಮ ಶತಮಾನ ಮೊದಲ್ಗೊಂಡು ಕ್ರಿಸ್ತನ ಎರಡನೆಯ ಬರೋಣದ ತನಕದ ಇಡೀ [ಕ್ರೈಸ್ತ] ಯುಗವನ್ನು ಒಳಗೊಂಡಿರುತ್ತದೆ."[69]

ಪ್ರಕಟನೆ ಪುಸ್ತಕವನ್ನು ಕಣಿವೆಗಳು ಹಾಗೂ ಪರ್ವತಗಳ ಒಂದು ಸರಣಿ, ಪ್ರಯಾಣದ ಕೊನೆಯಲ್ಲಿ ಅತ್ಯಂಥ ಎತ್ತರವಾದ ಹಾಗೂ ಘನಗಾಂಭೀರ್ಯವುಳ್ಳ ಪರ್ವತವವು ಇರುವದೆಂಬಂತೆ ಭಾವಿಸಿಕೊಳ್ಳಬಹುದಾಗಿದೆ. ನಾವು ಪುಸ್ತಕದೊಳಗೆ ಪ್ರಯಾಣಿಸುತ್ತಾ ಸಾಗಿದಂತೆ, ಬಹಳಷ್ಟು ಸಮಯ ನಾವು ಕಣಿವೆಗಳಲ್ಲಿ ಇರುವೆವು, ಸಂಕಷ್ಟಗಳು ಹಾಗೂ ವಿರೋಧಗಳೊಂದಿಗೆ ಹೋರಾಟವನ್ನು ಅನುಭವಿಸುತ್ತಿರುತ್ತೇವೆ. ಹೇಗೂ, ಕಾಲದಿಂದ ಕಾಲಕ್ಕೆ,

ನಮಗೆ ಪರ್ವತದ ಮೇಲೆ ನಿಂತುಕೊಳ್ಳುವದಕ್ಕೆ ಅನುಮತಿ ಸಿಕ್ಕುವದು, ಅಲ್ಲಿ ನಾವು ನಮಗೆ ದೊರಕುವ ಮಹಿಮೆಯ ಮಿನುಗುನೋಟವನ್ನು ಪಡೆದುಕೊಳ್ಳಬಹುದಾಗಿರುತ್ತದೆ. ಹೀಗೆ ನಾವು ಮುಂದಕ್ಕೆ ಸಾಗುತ್ತಲಿರುವಂತೆ ಪ್ರೋತ್ಸಾಹಿಸಲ್ಪಡುತ್ತೇವೆ. *ಪ್ರತಿಯೊಂದು ವಿಭಾಗದಲ್ಲಿ* ನಾವು ಒಂದೇ ವಿಧವಾದ ಮುಲಭೂತ ಸಂದೇಶವನ್ನು ಕಾಣುತ್ತೇವೆ: (1) ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಕಾದಾಟ, (2) ಒಳ್ಳೇದಕ್ಕೆ ಸೋಲಾಗುತ್ತಿದೆ ಎಂದು ತೋರುವಿಕೆ, ಮತ್ತು (3) ಒಳ್ಳೇದಕ್ಕೆ ಅಂತಿಮವಾಗಿ ಜಯ ಸಿಕ್ಕುವಿಕೆ.

*ಒಂದು ಏಕೀಕೃತ ಸಂದೇಶ.* ಪ್ರಕಟನೆ ಪುಸ್ತಕವು ಹಲವಾರು ವಿಭಾಗಗಳಿಂದ ಕೂಡಿದ್ದಾಗಿದೆಯಾದರೂ, ಇವುಗಳನ್ನು ಪ್ರತ್ಯೇಕವಾಗಿರುವ ಘಟಕಗಳೆಂದು ಭಾವಿಸಿಕೊಳ್ಳಕೂಡದು. ಮೊದಲ ನೋಟದಲ್ಲಿ, ಪ್ರಕಟನೆ ಪುಸ್ತಕವು ಒಂದಕ್ಕೊಂದು ಸಂಬಂಧವಿಲ್ಲದಿರುವಂಥ ದೃಶ್ಯಗಳ ಒಂದು ಗೊಂದಲವನ್ನುಂಟು ಮಾಡುವ ವ್ಯೂಹದಿಂದ ತುಂಬಿದೆ ಎಂಬಂತೆ ಕಾಣಿಸುತ್ತದೆ. ಹೇಗೂ, ಪುಸ್ತಕವನ್ನು ಅಧ್ಯಯನ ಮಾಡಿದ ಹಾಗೆಲ್ಲಾ, ಸಂದೇಶಕ್ಕೆ ಒಂದು ಅತ್ಯಾಶ್ಚರ್ಯವಾದ ಐಕ್ಯತೆ ಹಾಗೂ ಸಾಮರಸ್ಯವು ಇರುವದು ಕಾಣಿಸಿಕೊಳ್ಳುವದು.

ಈ ಐಕ್ಯತೆಯು ಸಾಧಿಸಲ್ಪಡುವ ಒಂದು ದಾರಿಯೆಂದರೆ ಪುಸ್ತಕವು ಮುಂದುವರೆದ ಹಾಗೆ ಅಭಿವೃದ್ಧಿಗೊಳ್ಳುತ್ತಾ ಸಾಗುವ ಚರ್ಚೆಯಾಂಶಗಳ ಮೂಲಕವೇ ಆಗಿದೆ. ಉದಾಹರಣೆಗೆ, *ಯಜ್ಞವೇದಿಯ ಕೆಳಗಿರುವ* ದೇವಜನರನ್ನು (ರಕ್ತಸಾಕ್ಷಿಗಳು) ಪರಿಗಣಿಸಿರಿ. ಈ ದೇವಜನರು 6:9-11ರಲ್ಲಿ ಪರಿಚಯಿಸಲ್ಪಡುತ್ತಾರೆ, ಅಲ್ಲಿ ಅವರು ಪ್ರತೀಕಾರ ಮಾಡುವಂತೆ ಮೊರೆಯಿಡುತ್ತಾರೆ: "ಒಡೆಯನೇ, . . . ಇನ್ನು ಎಷ್ಟು ಕಾಲ?" (ವ. 10). 8:3-5ರಲ್ಲಿ ಒಬ್ಬ ದೇವದೂತನು ದೇವಜನರ ಪ್ರಾರ್ಥನೆಗಳಿಗೆ ಧೂಪವನ್ನು ಸೇರ್ಪಡೆಗೊಳಿಸುತ್ತಾನೆ ಮತ್ತು ಬಳಿಕ *ಯಜ್ಞವೇದಿಯ ಮೇಲಿದ್ದ ಕೆಂಡಗಳನ್ನು* ಭೂಮಿಯ ಮೇಲೆ ಹಾಕುತ್ತಾನೆ; ಪ್ರತಿದಂಡನೆಯು ಆರಂಭಗೊಂಡಿರುತ್ತದೆ. 14:14-20ರಲ್ಲಿ ಒಬ್ಬ ದೇವದೂತನು *ಯಜ್ಞವೇದಿಯ ಬಳಿಯಿಂದ* ಬರುತ್ತಾನೆ ಮತ್ತು ಭೂಮಿಯ ಮೇಲೆ ಪ್ರತೀಕಾರದ ಕುಡುಗೋಲು ಭೂಮಿಯ ಮೇಲೆ ಹಾಕಲ್ಪಡುವಂತೆ ಆಜ್ಞಾಪಿಸುತ್ತಾನೆ; ಆಗ ರಕ್ತವು ಹರಿಯಲಾರಂಭಿಸುತ್ತದೆ. ಅಂತಿಮವಾಗಿ, 16:5-7ರಲ್ಲಿ *ಯಜ್ಞವೇದಿಯು ಮಾತಾಡುತ್ತಾ* ದೇವಜನರನ್ನು ಕೊಂದವರಿಗೆ ಆದ ದಂಡನೆಯ ವಿಷಯದಲ್ಲಿ ಸಮ್ಮತಿಯನ್ನು ವ್ಯಕ್ತಪಡಿಸುತ್ತದೆ: "ಅವರು ಅದಕ್ಕೆ ಯೋಗ್ಯರಾದವರೇ!" ಪ್ರಕಟನೆ ಪುಸ್ತಕದ ಚರ್ಚೆಯಾಂಶಗಳಲ್ಲಿ ಅನೇಕ ಕಾರ್ಯಗಳು 2 ಮತ್ತು 3 ಅಧ್ಯಾಯಗಳಲ್ಲಿ ಏಳು ಸಭೆಗಳಿಗೆ ಬರೆಯಲಾಗಿರುವ ಪತ್ರಗಳಲ್ಲಿ ಪರಿಚಯಿಸಲ್ಪಟ್ಟಿರುತ್ತವೆಂಬುದನ್ನು ಸಹ ಗಮನಿಸತಕ್ಕದ್ದು.

## ಸಂದೇಶವು ವಿಕಾಸಗೊಳ್ಳುತ್ತದೆ

ಮೇಲೆ ಗಮನಿಸಿದ ಪ್ರಕಾರವಾಗಿ, ಪ್ರಕಟನೆ ಪುಸ್ತಕವು ಜಯದ ಮೂರುವಿಧವಾದ ಸಂದೇಶವನ್ನು ಹೊಂದಿದೆ. ನಾವು ಪುಸ್ತಕದ ಸಂಕ್ಷಿಪ್ತ ವಿವರಣೆಗಳನ್ನು ಮಾಡೋಣ ಮತ್ತು ಬಳಿಕ ಅವುಗಳನ್ನೊಮ್ಮೆ ಸುತ್ತಿಕೊಂಡು ಬರೋಣ.

*ಒಂದು ಸರಳವಾದ ಸಂಕ್ಷಿಪ್ತ ವಿವರಣೆ.* ಪುಸ್ತಕವು ಸ್ವಾಭಾವಿಕವಾಗಿಯೇ ಹನ್ನೊಂದು ಅಧ್ಯಾಯಗಳಂತೆ ಹೆಚ್ಚು-ಅಥವಾ-ಕಡಿಮೆ ಎರಡು ಸಮಾನ ಭಾಗಗಳಾಗಿ ವಿಂಗಡಗೊಳ್ಳುತ್ತದೆ ಎಂಬುದನ್ನು ಅನೇಕ ವ್ಯಾಖ್ಯಾನಕಾರರು ಒಪ್ಪಿಕೊಳ್ಳುತ್ತಾರೆ. ಮೊದಲ ವಿಭಾಗವು ಒಳ್ಳೇದು ಹಾಗೂ ಕೆಟ್ಟದ್ದರ (ಸಭೆ vs. ಲೋಕ) ನಡುವಿನ ಮೇಲ್ಭಾಗದ ಯುದ್ಧದ ಮೇಲೆ ಮುಖ್ಯ ಗಮನವನ್ನು ಹರಿಸಿದರೆ, ಎರಡನೆಯ ವಿಭಾಗವು ಮೇಲ್ಭಾಗದ ಕೆಳಗಡೆಯಲ್ಲಿ (ಕ್ರಿಸ್ತನು vs.

ಸೈತಾನ) ನಡೆಯುವ ಯುದ್ಧದ ಬಗ್ಗೆ ಹೆಚ್ಚು ಕಳಕಳಿಯನ್ನು ಹೊಂದಿರುತ್ತದೆ ಎಂಬುದಾಗಿ ಕೆಲವರು ಅಭಿಪ್ರಾಯ ಪಡುತ್ತಾರೆ. 12ನೇ ಅಧ್ಯಾಯವು ಒಂದು ಸ್ಪಷ್ಟವಾದ ವಿಭಜಕ ಸ್ಥಳವಾಗಿ ಕಾಣಿಸುತ್ತದೆ ಯಾಕೆಂದರೆ ಈ ಅಧ್ಯಾಯವು ಯೇಸುವಿನ ಜನನದ ವಿವರಣೆಯೊಂದಿಗೆ ಕಥೆಯನ್ನು ಪುನರಾರಂಭಗೊಳಿಸುವಂತೆ ಕಾಣಿಸುತ್ತದೆ.

ಹೇಗೂ, ಎರಡು ಪ್ರಮುಖ ವಿಭಾಗಗಳನ್ನು ಹೇಗೆ ಉಪಭಾಗಗಳಾಗಿ ವಿಂಗಡಿಸಬೇಕು ಎಂಬ ವಿಷಯದಲ್ಲಿ ನಾವು ಒಮ್ಮತವನ್ನು ಕಾಣುವದಿಲ್ಲ. ವಿಷಯ ವಸ್ತುವಿನಲ್ಲಿರುವ ಹಲವಾರು ಭಾಗಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ: ಏಳು ಸಭೆಗಳಿಗೆ ಬರೆದ ಪತ್ರಿಗಳು (2; 3), ಏಳು ಮುದ್ರೆಗಳುಳ್ಳ ಪುಸ್ತಕ (4-7), ಏಳು ತುತೂರಿಗಳು (8-11), ಮತ್ತು ರೌದ್ರದ ಏಳು ಪಾತ್ರೆಗಳು (15; 16). ಪ್ರಕಟನೆ ಪುಸ್ತಕದಲ್ಲಿರುವ ವಿಷಯಗಳನ್ನು ಸಂಕ್ಷಿಪ್ತ ವಿವರಣೆ ಮಾಡುವ ಒಂದು ದಾರಿಯು ಹೀಗಿರುತ್ತದೆ:

I. ಏಳು ಸಭೆಗಳ ಮಧ್ಯದಲ್ಲಿ ಕ್ರಿಸ್ತನು (1-3).
II. ಏಳು ಮುದ್ರೆಗಳುಳ್ಳ ಪುಸ್ತಕಗಳು (4-7).
III. ಏಳು ತುತೂರಿಗಳನ್ನು ಊದುವಿಕೆ (8-11).
IV. ಸಭೆಯ ವೈರಿಗಳನ್ನು ಪರಿಚಯಿಸುವದು (12-14).
V. ರೌದ್ರದ ಏಳು ಪಾತ್ರೆಗಳು (15; 16).
VI. ಸಭೆಯ ಬಹುಪಾಲು ವೈರಿಗಳ ನಾಶನ (17-19).
VII. ಘಟಸರ್ಪದ ನಾಶನ, ಬಳಿಕ ನೂತನ ಆಕಾಶ ಮತ್ತು ಭೂಮಿ (20-22).

ಈ ಸಂಕ್ಷಿಪ್ತ ವಿವರಣೆಯು ಹಲವಾರು ಕಾರಣಗಳಿಗಾಗಿ ಮನಮುಟ್ಟುವದಾಗಿರುತ್ತದೆ. ಅದು ಸರಳವಾಗಿದೆ. ಅದು ಏಳು ವಿಭಾಗಗಳನ್ನು ಹೊಂದಿದೆ, ಮತ್ತು ಏಳು ಪುಸ್ತಕದಲ್ಲಿ ಮುಖ್ಯ ಸಂಖ್ಯೆಯಾಗಿರುತ್ತದೆ. ಪುಸ್ತಕದ ಮೊದಲ ಅರ್ಧಭಾಗದಲ್ಲಿ ಮೂರು ವಿಭಾಗಗಳು ಸಿಕ್ಕುತ್ತವೆ ಮತ್ತು ಕೊನೆಯ ಅರ್ಧಭಾಗದಲ್ಲಿ ನಾಲ್ಕು ವಿಭಾಗಗಳು ಇರುತ್ತವೆ. ಏಳು ಅಂಶಗಳು ಮೂರರಂತೆ ಗುಂಪುಗೊಳಿಸಲ್ಪಟ್ಟಿರುತ್ತವೆ ಮತ್ತು ನಾಲ್ಕು ಪ್ರಕಟನೆ ಪುಸ್ತಕದ ವೈಶಿಷ್ಟ್ಯತೆಯಾಗಿರುತ್ತದೆ. ಪ್ರತಿಯೊಂದು ವಿಭಾಗವು ವಾಚಕನನ್ನು ಪ್ರೋತ್ಸಾಹಗೊಳಿಸುವದಕ್ಕಾಗಿ ದೇವರು ಅಂತಿಮವಾಗಿ ಸಾಧಿಸುವ ಜಯದ ಕುರಿತಾದ ಒಂದು "ಪರ್ವತದ ಮೇಲಿನ ನೋಟವನ್ನು" ಹೊಂದಿರುತ್ತದೆ. ಈ ಸಂಕ್ಷಿಪ್ತ ವಿವರಣೆಯನ್ನು ಮನಸ್ಸಿನಲ್ಲಿಟ್ಟುಕೊಂಡ ಬಳಿಕ, ಪುಸ್ತಕದ ವಿವಿಧ ಭಾಗಗಳನ್ನು ಪ್ರಮುಖ ಅಂಶಗಳ ಕೆಳಗೆ ಹೊಂದಿಕೆ ಮಾಡಬಹುದಾಗಿದೆ.

*ಒಂದು ಕ್ಲುಪ್ತವಾದ ಸ್ಥೂಲ ನೋಟ.* ಈ ಹಂತದಲ್ಲಿ, ಪ್ರಟಕನೆ ಪುಸ್ತಕದೊಳಗೆ ಒಂದು ಕ್ಲುಪ್ತವಾದ ಸುತ್ತಾಟವನ್ನು ಒದಗಿಸಲಾಗುವದು. ಈ ಸ್ಥೂಲ ನೋಟವು ಮೇಲಿನ ಸಂಕ್ಷಿಪ್ತ ವಿವರಣೆಯಲ್ಲಿ ಕೊಡಲಾಗಿರುವ ರೋಮನ್ ಅಂಕೆಗಳ ಅನುಸಾರವಾಗಿ ಇರಲಿವೆ. ಮೂರು ವಿಧವಾದ ಸಂದೇಶವು ಹೇಗೆ ಮತ್ತೇ ಮತ್ತೇ ಪುನರಾವರ್ತಿಸಲ್ಪಟ್ಟಿರುತ್ತದೆಂಬುದನ್ನು ವಿಶೇಷವಾಗಿ ಗಮನಿಸಿರಿ:

I. ಏಳು ಸಭೆಗಳ ಮಧ್ಯದಲ್ಲಿ ಕ್ರಿಸ್ತನು (1-3). 1ನೇ ಅಧ್ಯಾಯದಲ್ಲಿ, ಕ್ರಿಸ್ತನು ದೀಪಸ್ತಂಭಗಳ ನಡುವೆ ನಡೆದಾಡುತ್ತಿರುವ ದರ್ಶನವನ್ನು ನೋಡುತ್ತೇವೆ, ಆ ದೀಪಗಳು ಏಳು ಸಭೆಗಳೆಂಬದಾಗಿ ಗುರುತಿಸಲ್ಪಟ್ಟಿರುತ್ತವೆ. 2 ಮತ್ತು 3 ಅಧ್ಯಾಯಗಳು ಏಳು ಸಭೆಗಳಿಗೆ

ಬರೆಯಲ್ಪಟ್ಟಿರುವ ಪತ್ರಗಳಾಗಿರುತ್ತವೆ. ನಾವು ಆ ಪತ್ರಗಳನ್ನು ಓದುವಾಗ, ಒಳ್ಳೇದು ಹಾಗೂ ಕೆಟ್ಟದ್ದರ ನಡುವೆ ಸಹಜವಾಗಿರುವ ಯುದ್ಧವನ್ನು-ಮತ್ತು ಕೆಟ್ಟದ್ದು ಗೆಲ್ಲುತ್ತಿರುವಂತೆ ತೋರುವದನ್ನು-ಕಾಣುತ್ತೇವೆ (2:10, 13). ಹೇಗೂ, ಯೇಸು ನಂಬಿಗಸ್ತರಾಗಿ ಉಳಿದುಕೊಳ್ಳುವವರಿಗೆ ಒಂದು ಅತ್ಯಾಶ್ಚರ್ಯಕರವಾದ ವಾಗ್ದಾನವನ್ನು ಕೊಡುತ್ತಾನೆ (2:7, 11, 17): ಆತನು ದುಷ್ಟರನ್ನು ದಂಡಿಸುವದಕ್ಕೆ (2:16) ಬರುವನು (3:3) ಮತ್ತು ನಂಬಿಗಸ್ತರಿಗೆ ಬಹುಮಾನವನ್ನು ಕೊಡುವನು (3:12).

II. ಏಳು ಮುದ್ರೆಗಳುಳ್ಳ ಪುಸ್ತಕ (4-7). 4 ಮತ್ತು 5 ಅಧ್ಯಾಯಗಳಲ್ಲಿನ ಸಿಂಹಾಸನದ ದೃಶ್ಯವು ಪುಸ್ತಕದ ಉಳಿದ ಭಾಗಕ್ಕಾಗಿ ವೇದಿಕೆಯನ್ನು ಸಿದ್ಧಗೊಳಿಸುತ್ತದೆ. ರೋಮನ್ ಸಾಮ್ರಾಜ್ಯವಲ್ಲ, ಆದರೆ ದೇವರೇ ಅಧಿಕಾರದಲ್ಲಿದ್ದಾನೆ. ಮುದ್ರೆಗಳು ಒಡೆಯಲ್ಪಡುವಾಗ, ನಾಲ್ಕು ಮಂದಿ ಸವಾರರನ್ನು ಒಳಗೊಂಡಿರುವ ಮೊದಲ ನಾಲ್ಕು ಮುದ್ರೆಗಳು ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಕಾದಾಟವನ್ನು ಬಯಲುಗೊಳಿಸುತ್ತದೆ (6:1-8). ಐದನೆಯ ಮುದ್ರೆಯು ಒಡೆಯಲ್ಪಡುವಾಗ, ಯಜ್ಞವೇದಿಯ ಕೆಳಗಡೆಯಲ್ಲಿದ್ದ ರಕ್ತಸಾಕ್ಷಿಗಳ ವೈರಿಗಳಿಗೆ ಪ್ರತಿದಂಡನೆಯು ಆಗದಿರುವದನ್ನು ಕಾಣುತ್ತೇವೆ (6:9-11); ಕೆಟ್ಟತನವು ಜಯಿಸಿರುತ್ತದೆಂಬಂತೆ ಕಾಣಿಸುತ್ತದೆ. ಆಗ ಒಂದು ಮಹಾ ವಿನಾಶವು ಸಂಭವಿಸುತ್ತದೆ (6:12-17)-ಆದರೆ ದೇವರ ಸೇವಕರು ಒಂದು ಮುದ್ರೆಯಿಂದ ಕಾಪಾಡಲ್ಪಡುತ್ತಾರೆ (7:1-8). ಕೊನೆಯಲ್ಲಿ, ಅವರು ಪರಲೋಕದಲ್ಲಿರುವ ಚಿತ್ರಣವು ಕಾಣಿಸುತ್ತದೆ (7:9-17). ಒಳ್ಳೇದು ಜಯಿಸಿರುತ್ತದೆ.

III. ಏಳು ತುತೂರಿಗಳ ಊದುವಿಕೆ (8-11). ಆರು ತುತೂರಿಗಳು ಭೂಮಿಯ ಮೇಲೆ ಉಪದ್ರವಗಳನ್ನುಂಟು ಮಾಡುವ ಸಂಕಷ್ಟವನ್ನು ಸಾರುತ್ತವೆ (8:2-9:21). ಅದಾದ ಬಳಿಕ ದೇವಜನರನ್ನು ಹಿಂಸೆ ಪಡಿಸುವಂತೆ ಲೋಕವನ್ನು ಯಾವದು ಪ್ರಚೋದಿಸಿತು ಎಂಬುದರ ಬಗ್ಗೆ ನಮಗೆ ಹೇಳಲಾಗಿರುತ್ತದೆ: ವಾಕ್ಯ, ಅತ್ಯಂಥ ಕಹಿ ಸಂದೇಶವುಳ್ಳ ವಾಕ್ಯ (10:1-11). ಈ ವಿಭಾಗದ ಹೃದಯಭಾಗವೆಂದರೆ ಇಬ್ಬರು ಸಾಕ್ಷಿಗಳ ಕಥೆಯೇ (11:1-13), ಇದರಲ್ಲಿ ನಾವು ಕಾದಾಟವನ್ನು, ಮೇಲ್ನೋಟದ ಸೋಲು, ಮತ್ತು ಅಂತಿಮ ಜಯ ಇವುಗಳನ್ನು ಕಾಣುತ್ತೇವೆ. ಈ ವಿಭಾಗವು ಜಯದಲ್ಲಿ ಮುಕ್ತಾಯವಾಗುತ್ತದೆ (11:14-19).

IV. ಸಭೆಯ ವೈರಿಗಳ ಪರಿಚಯಿಸುವಿಕೆ (12-14). 12ನೇ ಅಧ್ಯಾಯವು ಮಹಾ ಕೆಂಪು ಘಟಸರ್ಪವನ್ನು ಪರಿಚಯಿಸುತ್ತದೆ, ಅದು ಅನಂತರದಲ್ಲಿ ಸೈತಾನನೆಂದು ಗುರುತಿಸಲ್ಪಡುತ್ತದೆ (ವ. 9). ಸೈತಾನನು ಯೇಸುವನ್ನು ನಾಶಗೊಳಿಸುವದಕ್ಕೆ ಅಶಕ್ತನಾಗುವಾಗ, ಆತನು ದೇವರ ಜನರ ವಿರುದ್ಧವಾಗಿ ಯುದ್ಧವನ್ನು ಮಾಡುತ್ತಾನೆ; ಇಲ್ಲಿ ಕೆಟ್ಟದ್ದರೊಂದಿಗೆ ಕಾದಾಟವನ್ನು ಕಾಣುತ್ತೇವೆ (ವ. 17). 13ನೇ ಅಧ್ಯಾಯದಲ್ಲಿ ನಮಗೆ ಸೈತಾನನ ಇಬ್ಬರು ಜೊತೆಗೆಲಸದವರ ಕುರಿತು ಪರಿಚಯಿಸಲಾಗುತ್ತದೆ: ಸಮುದ್ರದ ಮೃಗ (ವಚನಗಳು 1-10) ಮತ್ತು ಭೂಮಿಯ ಮೇಲಿನ ಮೃಗ (ವಚನಗಳು 11-18). ಸಮುದ್ರ ಮೃಗವು ಅನಂತರದಲ್ಲಿ ಕೇವಲ "ಮೃಗ" ಎಂದಷ್ಟೆ ಕರೆಯಲ್ಪಟ್ಟರೆ (14:9), ಭೂಮಿಯ ಮೃಗವು ಸುಳ್ಳು ಪ್ರವಾದಿ ಎಂದು ಗುರುತಿಸಲ್ಪಡುತ್ತದೆ (16:13). ಈ ಕ್ಷಣಕ್ಕಾದರೋ, ಅವುಗಳನ್ನು ಕ್ರೈಸ್ತತ್ವಕ್ಕೆ ವಿರೋಧ ವ್ಯಕ್ತಪಡಿಸುವ ಶಕ್ತಿಗಳೆಂದಷ್ಟೆ ಯೋಚಿಸಿಕೊಳ್ಳಿರಿ. ಮೊದಲನೆಯ ಮೃಗವು ದೇವಜನರ ವಿರುದ್ಧ ಯುದ್ಧವನ್ನು ಮಾಡುತ್ತದೆ ಮತ್ತು ಅವರನ್ನು ಜಯಿಸುತ್ತದೆ (13:7). "ಜಯಿಸುವದು" ಎಂಬುದು ಗ್ರೀಕ್ ಭಾಷೆಯ νικάω (*nikaō*) ಎಂಬ ಪದದ ಅನುವಾದವಾಗಿರುತ್ತದೆ, ಅದರರ್ಥವು "ಜಯವನ್ನು ಹೊಂದು" ಎಂದಾಗಿರುತ್ತದೆ; ಇಲ್ಲಿ ಒಳ್ಳೇದಕ್ಕೆ ಸೋಲಾಗಿರುವಂತೆ ಮೇಲ್ನೋಟಕ್ಕೆ ತೋರುತ್ತದೆ. ನಾವು ನಿರಾಶತೆಯುಳ್ಳವರಾಗಿ ಬೆಳೆಯುವದಕ್ಕೆ ಸಾಧ್ಯವಾಗುವ ಮುಂಚೆ, 14ನೇ

ಅಧ್ಯಾಯವು ನಮ್ಮನ್ನು ಕ್ರಮೇಣದಲ್ಲಿ ಒಳ್ಳೇದರ ಜಯವಾಗಿ ಕೆಟ್ಟದ್ದು ದಂಡಿಸಲ್ಪಡುವಂಥ ದರ್ಶನಗಳನ್ನು ತೋರಿಸುವದಕ್ಕಾಗಿ ಪರ್ವತದ ಮೇಲಕ್ಕೆ ಕರೆದೊಯ್ಯುತ್ತದೆ.

V. ರೌದ್ರದ ಏಳು ಪಾತ್ರೆಗಳು (15; 16). ನಮ್ಮ ಆತ್ಮೀಕ ವೈರಿಗಳನ್ನು ಪರಿಚಯ ಮಾಡಿದ ಮೇಲೆ, ಪ್ರಕಟನೆ ಪುಸ್ತಕವು ರೌದ್ರದ ಏಳು ಪಾತ್ರೆಗಳ ಮೂಲಕ "ಏಳು" ಸಂಖ್ಯೆಯ ಮರುಕಳಿಸುವ ಉಕ್ತಿಗೆ ಹಿಂದಿರುಗುತ್ತದೆ. ಈ ವಿಭಾಗವು ನೇರವಾಗಿ ಸಂದೇಶದ ಮೂರನೆಯ ಭಾಗಕ್ಕೆ ಸಾಗುತ್ತದೆ: ನೀತಿವಂತರಿಗಾಗುವ ಅಂತಿಮ ಜಯ (15:2-4) ಮತ್ತು ದುಷ್ಟರಿಗಾಗುವ ದಂಡನೆ (15:1, 5-8; 16:1-21). ಒಂದು ಮಹಾ ಶಬ್ದವು "ಆಯಿತು" ಎಂದು ಹೇಳುತ್ತದೆ (16:17).

VI. ಸಭೆಯ ಬಹುಪಾಲು ವೈರಿಗಳ ನಾಶನ (17-19). ನಾಲ್ಕನೆಯ ವೈರಿಯೊಂದನ್ನು ಪರಿಚಯಿಸಲಾಗುತ್ತದೆ: ಮಹಾ ಬಾಬೆಲ್ (17:5). ಈ ಉಲ್ಲೇಖವು ರೋಮ್ ನಗರದ ಕುರಿತಾಗಿರುತ್ತದೆಂಬುದರಲ್ಲಿ ಸಣ್ಣ ಪ್ರಶ್ನೆಯಿರುವಂತೆ ತೋರುತ್ತದೆ (17:9, 15, 18). ಈ ಬೆಡಗಿನ ಜಾರಸ್ತ್ರೀಯು "ದೇವಜನರ ರಕ್ತವನ್ನೂ . . . ಸಾಕ್ಷಿಕೊಟ್ಟು ಹತರಾದವರ ರಕ್ತವನ್ನೂ ಕುಡಿದು ಮತ್ತಳಾಗಿದ್ದಾಳೆ" (17:6; ನೋಡಿರಿ 18:24). ಕಾದಾಟವು ಸಂಭವಿಸಿದೆ, ಮತ್ತು ಮೇಲ್ನೋಟಕ್ಕೆ ಒಳ್ಳೇದು ಸೋಲಿಸಲ್ಪಟ್ಟಿರುವಂತೆ ಕಾಣಿಸುತ್ತಿದೆ - ಆದರೆ ಸೈತಾನನ ಮೂವರು ಜೊತೆಗೆಲಸದವರು ಒಬ್ಬರಾದ ಮೇಲೊಬ್ಬರು ಬೇಗ ಬೇಗನೇ ಬಿದ್ದು ಹೋಗುತ್ತಾರೆ, ಅವರು ಪರಿಚಯಿಸಲ್ಪಟ್ಟ ವಿರುದ್ಧವಾದ ಕ್ರಮದಲ್ಲಿ ಬೀಳುತ್ತಾರೆ. ಮೊದಲನೆಯದಾಗಿ, ಮಹಾ ಬಾಬೆಲ್ ಪಟ್ಟಣದ ನಾಶನವು ಚಿತ್ರಿಸಲ್ಪಟ್ಟಿದೆ (18:1-19:4). ಬಳಿಕ, ಯೇಸು ನ್ಯಾಯಾಧಿಪತಿಯಾಗಿ ಮತ್ತು ಪ್ರತೀಕಾರ ಮಾಡುವವನಾಗಿ ಬಂದಾಗ, ಎರಡು ಮೃಗಗಳು (ಮೃಗ ಹಾಗೂ ಸುಳ್ಳು ಪ್ರವಾದಿ) "ಜೀವಸಹಿತವಾಗಿ ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು" (19:20).

VII. ಘಟಸರ್ಪದ ನಾಶನ, ಅದಾದ ಬಳಿಕ ನೂತನ ಆಕಾಶ ಮತ್ತು ಭೂಮಿ (20-22). 20ನೇ ಅಧ್ಯಾಯದ ಉದ್ದೇಶವು ಸಾವಿರ ವರ್ಷದ ಆಳ್ವಿಕೆಯ ಕುರಿತು ಹೇಳುವದಲ್ಲ, ಆದರೆ ಮಹಾ ಘಟಸರ್ಪವು ಪದಚ್ಯುತಿಗೊಳಿಸಲ್ಪಡುವದನ್ನು ಚಿತ್ರಿಸುವದೇ ಆಗಿರುತ್ತದೆ. ನಾವು ಕಾದಾಟ ಮತ್ತು ಮೇಲ್ನೋಟಕ್ಕೆ ಕಾಣುವ ಸೋಲು ಇವುಗಳ ಕುರಿತು ಓದುತ್ತೇವೆ: ಯೋಹಾನನು "ಯೇಸುವಿನ ವಿಷಯವಾದ ಸಾಕ್ಷಿಯ ನಿಮಿತ್ತವಾಗಿಯೂ ದೇವರ ವಾಕ್ಯದ ನಿಮಿತ್ತವಾಗಿಯೂ ತಲೆಹೊಯಿಸಿಕೊಂಡವರ ಆತ್ಮಗಳನ್ನು" ಕಂಡನು (ವ. 4). ಹೇಗೂ, ಈ ದೃಶ್ಯವು ಜಯವನ್ನು ಸಹ ಒಳಗೊಂಡಿರುತ್ತದೆ: "ಇದಲ್ಲದೆ ಅವರನ್ನು ಮರುಳುಗೊಳಿಸಿದ ಸೈತಾನನು ಬೆಂಕಿಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳು ಪ್ರವಾದಿಯೂ ಕೂಡ ಇದ್ದಾರೆ; ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆ ಪಡುತ್ತಿರುವರು" (ವ. 10). ಬಳಿಕ ಪ್ರಕಟನೆ ಪುಸ್ತಕವು ನ್ಯಾಯತೀರ್ಪಿನ ಚಿತ್ರದೊಂದಿಗೆ (20:11-15) ಮತ್ತು ಪರಲೋಕದ ಒಂದು ಮಹಿಮಕರವಾದ ದರ್ಶನದೊಂದಿಗೆ (21:1-22:15) ಅಂತ್ಯಗೊಳ್ಳುತ್ತದೆ. ಒಳ್ಳೇಯ ಶಕ್ತಿಗಳು ಜಯಗೊಂಡಿರುತ್ತವೆ!

*ಒಂದು ವಿವರವಾದ ಸಂಕ್ಷಿಪ್ತ ವಿವರಣೆ.* ಮೇಲ್ಗಡೆಯಲ್ಲಿ ಕೊಡಲಾಗಿರುವ ಕ್ಲುಪ್ತ ಸಂಕ್ಷಿಪ್ತ ವಿವರಣೆ ಮತ್ತು ಸ್ಥೂಲನೋಟದ ಜೊತೆಯಲ್ಲಿ, ಪುಸ್ತಕದ ನಿರ್ದಿಷ್ಟವಾದ ವಿಭಾಗವನ್ನು ಎಲ್ಲಿರುತ್ತದೆಂದು ಕಂಡುಕೊಳ್ಳುವಂತೆ ವಾಚಕನಿಗೆ ಸಹಾಯವಾಗುವ ಹಾಗೆ ಈ ಹಂತದಲ್ಲಿ ಒಂದು ವಿಸ್ತಾರವಾದ ಸಂಕ್ಷಿಪ್ತ ವಿವರಣೆಯು ಸೇರಿಸಲ್ಪಟ್ಟಿರುತ್ತದೆ. ಇದು ವಾಚಕನಿಗೆ ಒಂದು ಘಟನೆಯನ್ನು ಅದರ ಸೂಕ್ತವಾದ ಸನ್ನಿವೇಶದಲ್ಲಿ ಇಡುವ ಹಾಗೆ ಸಹಾಯವನ್ನು ಒದಗಿಸುವದು.

I. ಅಧ್ಯಾಯ 1: ಮನುಷ್ಯಕುಮಾರನಂತೆ ಇರುವವನು
   A .ಯೇಸು ಕ್ರಿಸ್ತನ ಪ್ರಕಟನೆಯು (ವಚನಗಳು 1-3)
   B. ಪತ್ರಕ್ಕೆ ಪರಿಚಯ (ವಚನಗಳು 4-7)
   C. ಕರ್ತನು ಮಧ್ಯದಲ್ಲಿ ಮಾತಾಡುತ್ತಾನೆ (ವ. 8)
   D. ಯೋಹಾನನು ಕೇಳಿಸಿಕೊಂಡದ್ದು (ವಚನಗಳು 9-11)
   E. ಯೋಹಾನನು ಕಂಡದ್ದು (ವಚನಗಳು 12-16)
   F. ಯೋಹಾನನು ಅನುಭವ ಮಾಡಿದ್ದು (ವಚನಗಳು 17-20)

II. ಅಧ್ಯಾಯ 2: ಆಸ್ಯ ಸೀಮೆಯ ಏಳು ಸಭೆಗಳಿಗೆ ಪತ್ರಗಳು (ಭಾಗ 1)
   A. ಎಫೆಸ: ಹೃದಯ ಸಮಸ್ಯೆಯುಳ್ಳ ಸಭೆ (ವಚನಗಳು 1-7)
   B. ಸ್ಮುರ್ನ: ಐಶ್ವರ್ಯವಂತವಾಗಿದ್ದ ಬಡತನದ ಸಭೆ (ವಚನಗಳು 8-11)
   C. ಪೆರ್ಗಮ: ಪಾಪ ನಗರದಲ್ಲಿ ಸಭೆ (ವಚನಗಳು 12-17)
   D. ಥುವತ್ತೈರ: ಈಜಬೇಲಳು ಒಬ್ಬ ಸದಸ್ಯಳಾಗಿದ್ದಂಥ ಸಭೆ (ವಚನಗಳು 18-29)

III. ಅಧ್ಯಾಯ 3: ಆಸ್ಯ ಸೀಮೆಯ ಏಳು ಸಭೆಗಳಿಗೆ ಪತ್ರ (ಭಾಗ 2)
   A. ಸಾರ್ದಿಸ್: ಗತಕಾಲದಲ್ಲಿ ಜೀವಿಸುತ್ತಿದ್ದ ಸಭೆ (ವಚನಗಳು 1-6)
   B. ಫಿಲದೆಲ್ಫಿಯ: ತನಗಿರುವದರಲ್ಲಿ ತನಗೆ ಸಾಧ್ಯವಾದದ್ದನ್ನು ಮಾಡಿದಂಥ ಸಭೆ (ವಚನಗಳು 7-13)
   C. ಲವೊದಿಕೀಯ: ತಾನು ಯಶಸ್ವಿಗೊಂಡಿದ್ದೇನೆಂದುಕೊಂಡ ಸಭೆ (ವಚನಗಳು 14-22)

IV. ಅಧ್ಯಾಯ 4: ದೇವರ ಸಿಂಹಾಸನದ ಕೋಣೆ
   A. ದೇವರ ಸಿಂಹಾಸನ (ವಚನಗಳು 1-5)
   B. ನಾಲ್ಕು ಜೀವಿಗಳು (ವಚನಗಳು 6-11)

V. ಅಧ್ಯಾಯ 5: ಏಳು ಮುದ್ರೆಗಳುಳ್ಳ ಪುಸ್ತಕಗಳು
   A. "ಯಾವನು ಯೋಗ್ಯನು?" (ವಚನಗಳು 1-5)
   B. ಯಜ್ಞದಕುರಿಯಾದಾತನು ಯೋಗ್ಯನು (ವಚನಗಳು 6-10)
   C. ಯಜ್ಞದಕುರಿಯಾದಾತನಿಗೆ ಸ್ತೋತ್ರಗಳು (ವಚನಗಳು 11-14)

VI. ಅಧ್ಯಾಯ 6: ಮೊದಲ ಆರು ಮುದ್ರೆಗಳನ್ನು ಒಡೆಯುವದು
   A. ನಾಲ್ಕು ಕುದುರೆ ಸವಾರರು (ವಚನಗಳು 1-8)
      1. ಮೊದಲನೆಯ ಮುದ್ರೆ (ವಚನಗಳು 1, 2)
      2. ಎರಡನೆಯ ಮುದ್ರೆ (ವಚನಗಳು 3, 4)
      3. ಮೂರನೆಯ ಮುದ್ರೆ (ವಚನಗಳು 5, 6)
      4. ನಾಲ್ಕನೆಯ ಮುದ್ರೆ (ವಚನಗಳು 7, 8)
   B. ಐದನೆಯ ಮುದ್ರೆ (ವಚನಗಳು 9-11)
   C. ಆರನೆಯ ಮುದ್ರೆ (ವಚನಗಳು 12-17)

VII. ಅಧ್ಯಾಯ 7: ಒಂದು ಮಧ್ಯಂತರ ವಿರಾಮ
   A. 144,000 ಮಂದಿಗೆ ಮುದ್ರೆ ಹಾಕುವದು (ವಚನಗಳು 1-8)

1. ಭೂಮಿಯ ಚತುರ್ದಿಕ್ಕುಗಳಲ್ಲಿರುವ ನಾಲ್ಕು ದೇವದೂತರು (ವಚನಗಳು 1-3)
2. ಮುದ್ರೆ ಹಾಕಲ್ಪಟ್ಟವರ ಸಂಖ್ಯೆ (ವಚನಗಳು 4-8)

B. ಸಿಂಹಾಸನದ ಸುತ್ತಲು ಎಣಿಸಲಾಗದಂಥ ಮಹಾ ಸಮೂಹ (ವಚನಗಳು 9-17)
1. ಸಮೂಹವು ದೇವರಿಗೆ ಸ್ತೋತ್ರ ಮಾಡಿದ್ದು (ವಚನಗಳು 9-12)
2. ಮಹಾ ಹಿಂಸೆಯನ್ನು ಅನುಭವಿಸಿ ಬಂದವರು (ವಚನಗಳು 13-17)

VIII. ಅಧ್ಯಾಯ 8: ಏಳನೆಯ ಮುದ್ರೆ ಮತ್ತು ಮೊದಲ ನಾಲ್ಕು ತುತೂರಿಗಳು

A. ಏಳನೆಯ ಮುದ್ರೆಯು ಒಡೆಯಲ್ಪಡುವದು (ವಚನಗಳು 1, 2)

B. ಚಿನ್ನದ ಧೂಪಾರತಿ ಹಿಡಿದಿದ್ದ ಒಬ್ಬ ದೇವದೂತ (ವಚನಗಳು 3-6)

C. ಮೊದಲ ನಾಲ್ಕು ತುತೂರಿಗಳು (ವಚನಗಳು 7-12)
1. ಮೊದಲನೆಯ ತುತೂರಿ (ವ. 7)
2. ಎರಡನೆಯ ತುತೂರಿ (ವಚನಗಳು 8, 9)
3. ಮೂರನೆಯ ತುತೂರಿ (ವಚನಗಳು 10, 11)
4. ನಾಲ್ಕನೆಯ ತುತೂರಿ (ವ. 12)

D. ಗರುಡ ಪಕ್ಷಿಯ ಎಚ್ಚರಿಕೆ (ವ. 13)

IX. ಅಧ್ಯಾಯ 9: ಐದನೆಯ ಹಾಗೂ ಆರನೆಯ ತುತೂರಿಗಳು

A. ಐದನೆಯ ತುತೂರಿಯು ಊದಲ್ಪಡುತ್ತದೆ (ವಚನಗಳು 1-6)

B. ಮಿಡತೆಗಳು ವರ್ಣಿಸಲ್ಪಡುತ್ತವೆ (ವಚನಗಳು 7-12)

C. ಆರನೆಯ ತುತೂರಿ ಊದಲ್ಪಡುತ್ತದೆ (ವಚನಗಳು 13-19)

D. ಮಿಕ್ಕವರು ಪಶ್ಚಾತ್ತಾಪ ಪಡಲಿಲ್ಲ (ವಚನಗಳು 20, 21)

X. ಅಧ್ಯಾಯ 10: ಚಿಕ್ಕ ಸುರುಳಿ

A. ಚಿಕ್ಕ ಸುರುಳಿ ಹಿಡಿದಿದ್ದ ದೇವದೂತನು (ವಚನಗಳು 1-7)

B. ಯೋಹಾನನು ಚಿಕ್ಕ ಸುರುಳಿಯನ್ನು ತಿನ್ನುತ್ತಾನೆ (ವಚನಗಳು 8-11)

XI. ಅಧ್ಯಾಯ 11: ಇಬ್ಬರು ಸಾಕ್ಷಿಗಳು ಮತ್ತು ಏಳನೆಯ ತುತೂರಿ

A. ದೇವಾಲಯವು ಅಳೆಯಲ್ಪಡುವದು (ವಚನಗಳು 1, 2)

B. ಇಬ್ಬರು ಸಾಕ್ಷಿಗಳು ಪ್ರವಾದನೆ ನುಡಿಯುತ್ತಾರೆ (ವಚನಗಳು 3-6)

C. ಇಬ್ಬರು ಸಾಕ್ಷಿಗಳು ಕೊಲ್ಲಲ್ಪಡುತ್ತಾರೆ (ವಚನಗಳು 7-10)

D. ಇಬ್ಬರು ಸಾಕ್ಷಿಗಳು ಪುನಃ ಜೀವ ಪಡೆಯುತ್ತಾರೆ (ವಚನಗಳು 11-13)

E. ಏಳನೆಯ ತುತೂರಿ ಊದಲ್ಪಡುತ್ತದೆ (ವಚನಗಳು 14-18)

F. ದೇವರ ಆಲಯವು ತೆರೆಯಲ್ಪಡುತ್ತದೆ (ವ. 19)

XII. ಅಧ್ಯಾಯ 12: ಸ್ತ್ರೀ ಮತ್ತು ಘಟಸರ್ಪ

A. ಮಗುವು ಹುಟ್ಟುತ್ತದೆ (ವಚನಗಳು 1-6)

B. ಸೈತಾನನು ಪರಲೋಕದಿಂದ ದೊಬ್ಬಲ್ಪಟ್ಟದ್ದು (ವಚನಗಳು 7-9)

C. ಪರಲೋಕದಲ್ಲಿ ಒಂದು ಸ್ವರ (ವಚನಗಳು 10-12)

D. ಸ್ತ್ರೀಯೊಂದಿಗೆ ಯುದ್ಧ ಮಾಡುವ ಘಟಸರ್ಪ (ವಚನಗಳು 13-17)

XIII. ಅಧ್ಯಾಯ 13: ಎರಡು ಮೃಗಗಳು

A. ಸಮುದ್ರದಿಂದ ಬರುವ ಮೃಗ (ವಚನಗಳು 1-6)
B. ದೇವಜನರೊಂದಿಗೆ ಯುದ್ಧ (ವಚನಗಳು 7-10)
C. ಭೂಮಿಯೊಳಗಿಂದ ಬರುವ ಮೃಗ (ವಚನಗಳು 11-18)

XIV. ಅಧ್ಯಾಯ 14: ಚೀಯೋನ್ ಪರ್ವತದ ಮೇಲೆ ಯಜ್ಞದ ಕುರಿಯಾದಾತನ ಸಂಗಡ 144,000
A. 144,000 ಮಂದಿ ಸಿಂಹಾಸನದ ಮುಂದೆ ಆರಾಧಿಸುವರು (ವಚನಗಳು 1-5)
B. ಸಂದೇಶಗಳೊಂದಿಗೆ ಮೂವರು ದೇವದೂತರು (ವಚನಗಳು 6-13)
  1. "ದೇವರಿಗೆ ಭಯಪಡಿರಿ" (ವಚನಗಳು 6, 7)
  2. "ಬಾಬೆಲೆಂಬ ಮಹಾ ನಗರಿ ಬಿದ್ದಳು" (ವ. 8)
  3. ಮೃಗದ ಗುರುತು (ವಚನಗಳು 9-13)
C. ಮಹಾ ಸುಗ್ಗೀಕಾಲ (ವಚನಗಳು 14-20)
  1. ಮೇಘದ ಮೇಲೆ ಕುಳಿತಿರುವಾತನು (ವಚನಗಳು 14-16)
  2. ದೇವದೂತ ಮತ್ತು ಕುಡುಗೋಲು (ವಚನಗಳು 17-20)

XV. ಅಧ್ಯಾಯ 15: ಪರಲೋಕದಲ್ಲಿನ ಒಂದು ದೃಶ್ಯ
A. ಏಳು ಉಪದ್ರವಗಳನ್ನು ಹಿಡಿದಿರುವ ಏಳು ದೇವದೂತರು (ವ. 1)
B. ಗಾಜಿನ ಸಮುದ್ರ (ವಚನಗಳು 2-4)
C. ಪರಲೋಕದಲ್ಲಿನ ದೇವಾಲಯ ತೆರೆಯಲ್ಪಡುವದು (ವಚನಗಳು 5-8)

XVI. ಅಧ್ಯಾಯ 16: ರೌದ್ರದ ಏಳು ಪಾತ್ರೆಗಳು
A. ಮೊದಲನೆಯ ಪಾತ್ರೆ (ವಚನಗಳು 1, 2)
B. ಎರಡನೆಯ ಪಾತ್ರೆ (ವ. 3)
C. ಮೂರನೆಯ ಪಾತ್ರೆ (ವಚನಗಳು 4-7)
D. ನಾಲ್ಕನೆಯ ಪಾತ್ರೆ (ವಚನಗಳು 8, 9)
E. ಐದನೆಯ ಪಾತ್ರೆ (ವಚನಗಳು 10, 11)
F. ಆರನೆಯ ಪಾತ್ರೆ (ವಚನಗಳು 12-16)
G. ಏಳನೆಯ ಪಾತ್ರೆ (ವಚನಗಳು 17-21)

XVII. ಅಧ್ಯಾಯ 17: ಬಾಬೆಲಿನ ವಿನಾಶ
A. ಮಹಾ ಜಾರಸ್ತ್ರೀ (ವಚನಗಳು 1-7)
B. ಏಳು ತಲೆಗಳು ಮತ್ತು ಹತ್ತು ಕೊಂಬುಗಳುಳ್ಳ ಮೃಗ (ವಚನಗಳು 8-14)
C. ದೇವರ ಉದ್ದೇಶ (ವಚನಗಳು 15-18)

XVIII. ಅಧ್ಯಾಯ 18: ಬಾಬೆಲೆಂಬ ನಗರಿಯು ಬಿದ್ದಳು
A. ದೇವದೂತನ ಸಾರುವಿಕೆ (ವಚನಗಳು 1-3)
B. ಆಕೆಯ ಪಾಪಗಳು ರಾಶಿಯಾಗಿ ಕೂಡಿರುತ್ತವೆ (ವಚನಗಳು 4-8)
C. ರಾಜರು ಗೋಳಾಡುತ್ತಾರೆ (ವಚನಗಳು 9, 10)
D. ವರ್ತಕರು ಗೋಳಾಡುತ್ತಾರೆ (ವಚನಗಳು 11-20)
E. ದೇವದೂತನ ಮುಂತಿಳಿಸುವಿಕೆ (ವಚನಗಳು 21-24)

XIX. ಅಧ್ಯಾಯ 19: ಸರ್ವಶಕ್ತನಾದ ಕರ್ತನು ಆಳುತ್ತಾನೆ

A. ನಾಲ್ಕು ವಿಧದ ಹಲ್ಲೆಲೂಯಾ (ವಚನಗಳು 1-6)
B. ಯಜ್ಞದ ಕುರಿಯಾದಾತನ ವಿವಾಹದ ಔತಣಕೂಟ (ವಚನಗಳು 7-10)
C. ಬಿಳಿಯ ಕುದುರೆಯ ಮೇಲಿದ್ದ ನಂಬಿಗಸ್ತನೂ ಸತ್ಯವಂತನೂ ಆದವನು (ವಚನಗಳು 11-16)
D. ಮಾಂಸವನ್ನು ತಿನ್ನುವಂತೆ ಪಕ್ಷಿಗಳನ್ನು ಕರೆದದ್ದು (ವಚನಗಳು 17, 18)
E. ಮೃಗ ಮತ್ತು ಸುಳ್ಳು ಪ್ರವಾದಿ ನಾಶವಾದದ್ದು (ವಚನಗಳು 19-21)

XX. ಅಧ್ಯಾಯ 20: ಎರಡನೆಯ ಮರಣ
A. ಸೈತಾನನು ಕಟ್ಟಿ ಹಾಕಲ್ಪಡುತ್ತಾನೆ (ವಚನಗಳು 1-3)
B. ಪ್ರಥಮ ಪುನರುತ್ಥಾನ (ವಚನಗಳು 4-6)
C. ಬೆಂಕಿಯ ಕೆರೆ (ವಚನಗಳು 7-10)
D. ಸತ್ತವರ ನ್ಯಾಯತೀರ್ಪಿನ ದಿನ (ವಚನಗಳು 11-15)

XXI. ಅಧ್ಯಾಯ 21: ಒಂದು ನೂತನ ಆಕಾಶ ಮತ್ತು ನೂತನ ಭೂಮಿ
A. ಮನುಷ್ಯರ ಮಧ್ಯ ದೇವರ ನಿವಾಸ (ವಚನಗಳು 1-4)
B. ಎಲ್ಲವನ್ನು ಹೊಸದು ಮಾಡಿದ್ದು (ವಚನಗಳು 5-8)
C. ಮದಲಗಿತ್ತಿಯಾದ ಯೆರೂಸಲೇಮ್ (ವಚನಗಳು 9-14)
D. ಪರಲೋಕದ ಪಟ್ಟಣವು ಅಳೆತೆ ಮಾಡಲ್ಪಟ್ಟಿದ್ದು (ವಚನಗಳು 15-21)
E. ದೇವರು ಬೆಳಕಾಗಿದ್ದಾನೆ (ವಚನಗಳು 22-27)

XXII. ಅಧ್ಯಾಯ 22: ಅಂತಿಮ ಬುದ್ಧಿವಾದಗಳು
A. ನದಿ ಹಾಗೂ ಜೀವವೃಕ್ಷ (ವಚನಗಳು 1-5)
B. ನಂಬತಕ್ಕವುಗಳೂ ಸತ್ಯವಾದವುಗಳೂ ಆಗಿರುವ ಮಾತುಗಳು (ವಚನಗಳು 6, 7)
C. ಯೋಹಾನ ಮತ್ತು ದೇವದೂತ (ವಚನಗಳು 8, 9)
D. "ಪುಸ್ತಕದಲ್ಲಿರುವ ಪ್ರವಾದನಾವಾಕ್ಯಗಳನ್ನು ಗುಪ್ತವಾಗಿಡಬೇಡ" (ವಚನಗಳು 10, 11)
E. "ಇಗೋ, ನಾನು ಬೇಗ ಬರುತ್ತೇನೆ" (ವಚನಗಳು 12-15)
F. ಆತ್ಮನಿಂದ ಮತ್ತು ಮದಲಿಂಗನಿಂದ ಆಮಂತ್ರಣ (ವಚನಗಳು 16, 17)
G. ಸಂದೇಶಕ್ಕೆ ಸಾಕ್ಷಿ (ವಚನಗಳು 18-21)

# ಅನ್ವಯಿಸುವಿಕೆ

## ಓದುವಿಕೆಯಿಂದ ಆಶೀರ್ವಾದ

ಪ್ರಕಟನೆ ಪುಸ್ತಕದ ಕುರಿತು ನೀವು ಹೆಚ್ಚಾಗಿ ಅರ್ಥಮಾಡಿಕೊಂಡರೂ ಸರಿಯೇ ಅಥವಾ ಅರ್ಥಮಾಡಿಕೊಳ್ಳದಿದ್ದರೂ ಸರಿಯೇ, ದೇವರ ಸಹಾಯದೊಂದಿಗೆ ನಾವು ಕಲಿಯಬೇಕೆಂದು ಆತನು ಇಂಗಿತ ಹೊಂದಿರುವ ಮೂಲಭೂತ ಸತ್ಯಗಳನ್ನು ನೀವು ಕಂಡುಕೊಳ್ಳ*ಬಲ್ಲಿರಿ*. Robert Mounce ಇದನ್ನು ಗಮನಕ್ಕೆ ತರುತ್ತಾನೆ, ". . . ಪ್ರಕಟನೆ ಪುಸ್ತಕದ ಮೂಲಭೂತ ಸತ್ಯಗಳು . . . ಪುಸ್ತಕವನ್ನು ಅದರ ಒಟ್ಟಾರೆ ಸಂದೇಶಕ್ಕಾಗಿ ಓದುವ ಮತ್ತು ಪ್ರತಿಯೊಂದು ವಿವರಗಳಲ್ಲಿ ಅತಿಯಾಗಿ ಅನುರಾಗಕ್ಕೊಳಗಾಗುವ ಪ್ರಲೋಭನೆ ಬೀಳುವದನ್ನು ಎದುರಿಸಿ ನಿಲ್ಲುವ ಯಾವನಿಗೇ ಆಗಲಿ ಲಭ್ಯವಿರುತ್ತವೆ."[70]

## ಒಂದು ನಿರೀಕ್ಷೆಯ ಸಂದೇಶ

ಪ್ರಕಟನೆ ಪುಸ್ತಕವು ಇಂದಿನ ಕ್ರೈಸ್ತರಿಗೆ ನಿರೀಕ್ಷೆಯನ್ನು ಒದಗಿಸುತ್ತದೆ ಯಾಕೆಂದರೆ ದೇವರು ಜಯವನ್ನು ವಾಗ್ದಾನ ಮಾಡಿದ್ದಾನೆ. ಕೆಲವು ವರ್ಷಗಳ ಹಿಂದೆ, ಯುರೋಪಿನ ಒಂದು ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯವು ಪುನಃ ನಿರ್ಬಂಧಕ್ಕೊಳಪಡಿಸಲ್ಪಟ್ಟಿತು. ನಡೆದ ಘಟನೆಗಳೊಂದಿಗೆ ಅಲ್ಲಿನ ಕ್ರೈಸ್ತರು ಹೋರಾಟವನ್ನು ಅನುಭವಿಸಬೇಕಾಯಿತು. ಅವರು ಪ್ರತಿರೋಧವನ್ನು ವ್ಯಕ್ತಪಡಿಸಿದರು, "ನಾವು ಈ ಪರಿಸ್ಥಿತಿಗಾಗಿ ದೇವರಿಗೆ ಅತ್ಯಾಸಕ್ತಿಯಿಂದ ಪ್ರಾರ್ಥನೆ ಮಾಡಿದೆವು. ಇದು ಹೇಗೆ ಸಂಭವಿಸಿರುವದಕ್ಕೆ ಸಾಧ್ಯ?" ಈ ಜೀವಿತದಲ್ಲಿ ಕೆಲವು ಸಾರಿ ದುಷ್ಟಶಕ್ತಿಗಳು ಗೆಲ್ಲುತ್ತಿರುವಂತೆ ತೋರುತ್ತದೆ-ಆದರೆ *ಅಂತ್ಯದಲ್ಲಿ*, ಒಳ್ಳೇಯ ಶಕ್ತಿಗಳು ಜಯಶಾಲಿಗಳಾಗುವವು-ಎಂಬುದನ್ನು ಅವರು ಅರ್ಥಮಾಡಿಕೊಳ್ಳುವ ಅಗತ್ಯವಿತ್ತು.

ನಾವು ಧಾರ್ಮಿಕ ಸ್ವಾತಂತ್ರ್ಯವನ್ನು ಆನಂದಿಸುತ್ತಿರುವಂಥ ದೇಶಗಳಲ್ಲಿ ಸಹ ಪ್ರಕಟನೆ ಪುಸ್ತಕದ ಸಂದೇಶವು ಅಗತ್ಯವಿರುತ್ತದೆ. ನೈತಿಕ ಮಾನದಂಡಗಳು ಕುಸಿದು ಹೋಗುವಾಗ, ಹಿಂಸಾಚಾರವು ಅಧಿಕಗೊಳ್ಳುವಾಗ, ಮತ್ತು ನಮ್ಮ ಸಮಾಜದ ಅಸ್ತಿವಾರಗಳು ಕ್ಷೀಣಿಸುತ್ತಾ ಇರುವದನ್ನು ನಾವು ಕಾಣುವಾಗ, ನಾವು ಸೋತು ಹೋಗುತ್ತಿರುವಂತೆ ಅನ್ನಿಸಬಹುದು. ನಾವು ನಿರಾಶೆಯ ವಿರುದ್ಧವಾಗಿ ನಮ್ಮನ್ನು ಕಾಪಾಡಿಕೊಳ್ಳದೆ ಹೋದರೆ, ನಾವು ಹತಾಶೆಗೊಂಡು ಸೋಲೊಪ್ಪಿಕೊಳ್ಳಬೇಕೆಂದು ಅನ್ನಿಸಬಹುದು. ಕೆಟ್ಟದ್ದಕ್ಕೆ ಸಿಕ್ಕುವ ಜಯವು ಕೇವಲ *ತೋರ್ಕೆಯದ್ದು* ಮತ್ತು ತಾತ್ಕಾಲಿಕವಾಗಿ ಇರುವಂಥದ್ದು ಎಂಬುದನ್ನು ಅರ್ಥಮಾಡಿಕೊಳ್ಳುವದು ಎಷ್ಟು ಪ್ರಾಮುಖ್ಯವಾಗಿರುತ್ತದೆ. ಅಂತಿಮವಾಗಿ, ಒಳ್ಳೇದು ಜಯಶಾಲಿಯಾಗುವದು!

## ಪುಸ್ತಕವು ಹೇಗೆ ಮುಕ್ತಾಯಗೊಳ್ಳುತ್ತದೆ

ಗೂಢಾರ್ಥಗಳನ್ನು ಓದುವದಕ್ಕೆ ಒಂದು ಅಸಹಜವಾದ ದಾರಿಯನ್ನು ಅನುಸರಿಸುವಂಥ ಒಬ್ಬ ಮನುಷ್ಯನಿದ್ದಾನೆ: ಆತನು ಮೊದಲು ಗೂಢಾರ್ಥವು ಹೇಗೆ ಬಗೆಹರಿಸಲ್ಪಟ್ಟಿತೆಂಬುದನ್ನು ತಿಳಿದುಕೊಳ್ಳಲು ಪುಸ್ತಕದ ಮುಕ್ತಾಯ ಭಾಗವನ್ನು ಓದುತ್ತಾನೆ. ನಮ್ಮಲ್ಲಿ ಎಷ್ಟು ಮಂದಿಗೆ ಪುಸ್ತಕವು ಹೇಗೆ ಮುಕ್ತಾಯಗೊಳ್ಳುತ್ತದೆಂಬುದನ್ನು ತಿಳಿಯಲು ಇಷ್ಟ *ಇರುವದಿಲ್ಲ*. "ಕೊನೆಯಲ್ಲಿ ಅದರೊಳಗೆ ಏನಾಗುತ್ತದೆಂಬುದನ್ನು ನನಗೆ ಹೇಳಬೇಡ," ಎಂದು ನಾವು ಈಗಾಗಲೇ ಪುಸ್ತಕವನ್ನು ಓದಿದವರಿಗೆ ಮೊರೆಯಿಡುತ್ತೇವೆ. ಅದಕ್ಕೆ ತದ್ವಿರುದ್ಧವಾಗಿ, ಒಳ್ಳೇದು ಮತ್ತು ಕೆಟ್ಟದ್ದರ ನಡುವಿನ ಕಾದಾಟದ ವಿಷಯವಾಗಿ, ನಾವು "ಕೊನೆಗೆ ಏನಾಗುತ್ತದೆ" ಎಂಬುದನ್ನು ತಿಳಿಯಲು ನಮಗೆ ಇಷ್ಟ *ಪಡುತ್ತೇವೆ* - ಮತ್ತು ಹೀಗೆ ದೇವರು ಶಾಸ್ತ್ರಗಳಲ್ಲಿ ಅಂತಿಮ ಪುಸ್ತಕವನ್ನು ಸೇರ್ಪಡೆಗೊಳಿಸಿದನು. ಅನೇಕ ನಂಬಿಗಸ್ತ ಕ್ರೈಸ್ತರು ಹಲ್ಲು ಬಿಡುತ್ತಾ, "ನಾನು ಬೈಬಲಿನ ಹಿಂದುಗಡೆ ನೋಡಿದೆ, ಮತ್ತು ಏನಾಯಿತು ಗೊತ್ತೋ? ನಾವು ಜಯಿಸಿದೆವು!" ಎಂದು ಹೇಳಿರುತ್ತಾರೆ.

ಕ್ರೈಸ್ತರಾಗಿ ನಾವು ಕೇವಲ ಕ್ರಿಸ್ತನು ಈಗಾಗಲೇ ಗೆದ್ದುಕೊಂಡಿರುವ ಜಯವನ್ನು ನಮ್ಮದಾಗಿಸಿಕೊಳ್ಳುತ್ತಿದ್ದೇವಷ್ಟೆ.

> ಒಬ್ಬ ಪ್ರಚಂಡ ಬೇಟೆಯಾಟಗಾರನು ಮಿತ್ರನೊಬ್ಬನಿಗೆ ತನ್ನ ಪಾರಿತೋಷಕಗಳ ಕೋಣೆಯನ್ನು ಸುತ್ತಾಡಿ ತೋರಿಸುತ್ತಿದ್ದನು. ಆತನ ಮಿತ್ರನು ಒಂದು ಸಿಂಹದ ಬಾಲವನ್ನು ಕಂಡನು, ಅದು ಗೋಡೆಯ ಮೇಲೆ ಸಿಕ್ಕಿಸಲ್ಪಟ್ಟು ನೇತಾಡುತ್ತಿತ್ತು, ಮತ್ತು ಆತನು ಹೀಗೆ ಕೇಳಿದನು, "ನೀನು ಏಕೆ ಸಿಂಹದ ತಲೆಯನ್ನು ತಂದಿಟ್ಟುಕೊಳ್ಳಲಿಲ್ಲ?" ದೊಡ್ಡ ಬೇಟೆಯಾಟಗಾರನು ಅದಕ್ಕೆ ಪ್ರತ್ಯುತ್ತರವಾಗಿ, "ನಾನು ಸಿಂಹವನ್ನು ಕಂಡಾಗ, ಯಾರೋ

ಅದರ ತಲೆಯನ್ನು ಮುಂಚೆಯೇ ತೆಗೆದು ಹಾಕಿದ್ದರು" ಎಂದನು. ಜಯವು ನಮ್ಮದು! ಸೈತಾನನ ತಲೆಯು ಈಗಾಗಲೇ ತೆಗೆದು ಹಾಕಲ್ಪಟ್ಟಿರುತ್ತದೆ.[71]

---

## ಅಡಿಟಿಪ್ಪಣಿಗಳು

[1]Frank Pack, *Revelation*, Part 1 (Austin, Tex.: R. B. Sweet Co., 1965), 5. [2]Ibid., 4. [3]C. F. Wishart, *The Book of Day* (New York: Oxford Press, 1935), vii. [4]Earl F. Palmer, *1, 2, 3 John & Revelation*, The Communicator's Commentary, ed. Lloyd J. Ogilvie, vol. 12 (Dallas: Word Publishing, 1982), 93. [5]Austin Farrer, *The Revelation of St. John the Divine* (London: Oxford University Press, 1964), 50. [6]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 31. [7]Irenaeus *Against Heresies* 5.30. [8]Eusebius *Ecclesiastical History* 3.17–18. [9]Robert H. Mounce, notes on Revelation, *The NIV Study Bible*, ed. Kenneth Barker (Grand Rapids, Mich.: Zondervan Publishing House, 1985), 1926. [10]W. M. Ramsay, *The Letter to the Seven Churches of Asia*, William M. Ramsay Library, vol. 10 (N.p., 1904; reprint, Grand Rapids, Mich.: Baker Book House, 1979), 85.

[11]Mounce, 1926. [12]Ray Summers, *Worthy Is the Lamb* (Nashville: Broadman Press, 1951), 16. [13]William Barclay, *The Revelation of John*, vol. 1, rev. ed., The Daily Study Bible Series (Philadelphia: Westminster Press, 1976), 4. [14]Edward A. McDowell, *The Meaning and Message of the Book of Revelation* (Nashville: Broadman Press, 1951), 7. [15]Palmer, 97. [16]Aristotle *Politics* 5.4. [17]C. I. Scofield, *The Holy Bible: Scofield Reference Edition* (New York: Oxford, 1917; new edition, 1967). [18]Hal Lindsey, *The Late Great Planet Earth* (Grand Rapids, Mich.: Zondervan Publishing House, 1970). [19]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 11. [20]Summers, 32.

[21]ಸಹಸ್ರವರ್ಷಪೂರ್ವಾಡಳಿತವಾದ ವಿಷಯ ಕುರಿತು ಹೆಚ್ಚಿನ ಮಾಹಿತಿ, ನೋಡಿರಿ Owen Olbricht, "The Millennium, A Thousand-Year Reign," *Truth for Today* 17 (December 1996): 20–24. [22]J. W. Roberts, *The Revelation to John (The Apocalypse),* The Living Word Commentary, ed. Everett Ferguson (Austin, Tex.: Sweet Publishing Co., 1974), 19. [23]Albert Barnes, *Notes, Explanatory and Practical, on the Book of Revelation* (London: Knight & Son, 1852); Adam Clarke, *Romans to the Revelations*, The New Testament, vol. 2 (Nashville: Abingdon Press, n.d.). [24]John T. Hinds, *A Commentary on the Book of Revelation* (Nashville: N.p., 1937; reprint, Nashville: Gospel Advocate Co., 1973). [25]Summers, 38. [26]Foy E. Wallace, Jr., *The Book of Revelation* (Fort Worth, Tex.: Foy E. Wallace Jr. Publications, 1966). [27]ಈ ಸುಳ್ಳು ಸಿದ್ಧಾಂತದ ಕುರಿತ ಒಂದು ಚರ್ಚೆಯು W. Terry Varner, *Studies in Biblical Eschatology*, vol. 1 (Marietta, Ohio: Therefore Stand Publications, 1981) ರಲ್ಲಿ ಕಾಣಿಸಿಕೊಳ್ಳುತ್ತದೆ. [28]Roberts, 16. [29]Harold Hazelip, *The Lord Reigns: A Survey of the Book of Revelation* (Abilene, Tex.: Herald of Truth, n.d.), iv. [30]William Hendriksen, *More Than Conquerors* (Grand Rapids, Mich.: Baker Book House, 1954), 56.

[31]Ibid., 57. [32]Morris, 13, 18. [33]Summers, 45. [34]*American Heritage Electronic Dictionary*, 1992 ed., s.v. "Symbol." [35]Palmer, 102. [36]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 15. [37]Summers, 48. [38]Hendriksen, 58 (ಒತ್ತಿ ಹೇಳಿದ್ದು ಆತನದ್ದು). [39]Summers, 50. [40]ಪ್ರಾಥಮಿಕ ವಿವರಣೆಶಾಸ್ತ್ರದ ತತ್ವಗಳನ್ನು ಪರಿಶೀಲಿಸಿ ನೋಡುವದಾದರೆ ಇಲ್ಲಿ ಪ್ರಯೋಜನಕರವಾಗಿರುವದು. An old classic is D. R. Dungan, *Hermeneutics* (N.p.; reprint, Delight, Ark.: Gospel Light Publishing Co., n.d.).

[41]Hugo McCord, *The Royal Route of Revelation* (Nashville: 20th Century Christian, 1976), 8. [42]Summers, 21. [43]Homer Hailey, *Revelation* (Grand Rapids, Mich.: Baker Book House,

1979), 43. [44]Summers, 22. [45]Ibid., 23. [46]McGuiggan, 163. [47]Metzger, 11 (emphasis his). [48]*American Heritage Electronic Dictionary*, 1992 ed., s.v. “Numerology.” [49]Palmer, 108–9. [50]John J. Davis, *Biblical Numerology* (Grand Rapids, Mich.: Baker Book House, 1968), 125–49.

[51]Ibid., 148. [52]J. B. Segal, “Numerals in the Old Testament,” *Journal of Semitic Studies* 10 (Spring 1965): 2. [53]*Grolier Multimedia Encyclopedia*, 1995 ed., s.v. “Fortune-telling.” [54]ಪ್ರಕಟನೆ ಪುಸ್ತಕದಲ್ಲಿನ ಹಳೆಯ ಒಡಂಬಡಿಕೆಯ ಬೇರುಗಳ ಅಧ್ಯಯನಕ್ಕಾಗಿ ಉತ್ತಮವಾದ ಮೂಲವೆಂದರೆ Ferrell Jenkins, *The Old Testament in the Book of Revelation* (Marion, Ind.: Cogdill Foundation Publications, 1972). [55]Summers, 81. [56]Henry B. Swete, *The Apocalypse ofSt. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 220. [57]William Barclay, *The Revelation of John*, vol. 2, rev. ed., The Daily Study Bible Series (Philadelphia: Westminster Press, 1976), 139–41ರಲ್ಲಿ Domitianನ ಆಳ್ವಿಕೆಯ ಒಂದು ಸಾರಾಂಶವು ಕೊಡಲ್ಪಟ್ಟಿರುತ್ತದೆ. [58]McCord, 13. [59]S. Angus, “Roman Empire,” *The International Standard Bible Encyclopedia*, ed. James Orr (Grand Rapids, Mich.: Wm. B. Eerdmans Publishing Co., 1960), 4:2598–99. [60]Ibid., 4:2598.

[61]ಇದರಲ್ಲಿ ಬಹಳಷ್ಟು ಸಾಮಗ್ರಿಯು Angus, 4:2598–2611. For further study on this subject, see Summers, 87–88ರಿಂದ ಆಯ್ದುಕೊಳ್ಳಲ್ಪಟ್ಟಿದೆ. [62]*Grolier Multimedia Encyclopedia*, 1995 ed., s.v. “Parthia.” [63]Summers, 43. [64]Paul Lee Tan, *Encyclopedia of 7,700 Illustrations: Signs of the Times* (Rockville, Md.: Assurance Publishers, 1979), 250ರಿಂದ ಉಲ್ಲೇಖಿಸಲ್ಪಟ್ಟಿರುತ್ತದೆ. [65]James M. Efird, *Revelation for Today* (Nashville: Abingdon Press, 1989), 25. [66]ಪ್ರಕಟನೆ ಪುಸ್ತಕದಲ್ಲಿ ಪ್ರತಿಬಿಂಬಿಸಲ್ಪಟ್ಟಿರುವ ಹೊಸ ಒಡಂಬಡಿಕೆಯ ಕೆಲವೊಂದು ವಾಕ್ಯಭಾಗಗಳಿಗಾಗಿ, ನೋಡಿರಿ Hendriksen, 61. [67]R. C. H. Lenski, *The Interpretation of St. John’s Revelation*, Commentary on the New Testament (Minneapolis, Minn.: Augsburg Publishing House, 1963), 24. [68]Pack, 17. [69]Hendriksen, 25. [70]Mounce, 1924.

[71]Eddie Cloer, ಪ್ರಕಟನೆ ಪುಸ್ತಕದ ಕುರಿತು ಪ್ರಕಾಶನ ಮಾಡದೆ ಇರುವಂಥ ಟಿಪ್ಪಣಿಗಳು.